Editor: S.Y.GURUSHANTH Publisher: G.N.NAGARAJ RNI No. KARKAN/2006/17926

ಜನಶಕ್ತಿ ಕನ್ನಡ ವಾರ ಪತ್ರಿಕೆ

JANASHAKTHI KANNADA VARA PATRIKE

ಸಂಪುಟ–19 | ಸಂಚಿಕೆ–18 | ಏಪ್ರಿಲ್ 28–ಮೇ 4, 2025 | ಪುಟ 16 | ರೂ.10/–
Volume-19 | Issue-18 | April 28-May 4, 2025 | Pages 16 | Price. 10/-



ಪಹಲ್ಗಾಮ್: ರಾಷ್ಟ್ರವನ್ನೇ ಬೆಚ್ಚಿಬೀಳಿಸಿದ ಭಯೋತ್ಪಾದಕ ದಾಳಿ

ಮೇ ಡೇ: ಸಂಕಷ್ಟಗಳ ಎದುರು ಸೆಣೆಸುವ ಸಂಕಲ್ಪ

- ವ್ಯಾನ್ಸ್ ಗೋ ಬ್ಯಾಕ್ - ಭಾರತ ಮಾರಾಟಕ್ಕಿಲ್ಲ
- ಸುಪ್ರೀಂ ಕೋರ್ಟ್ ತಂಟೆಗೆ ಹೋಗಬೇಡಿ!
- ಇರಾನ್-ಅಮೆರಿಕ ಮಾತುಕತೆ: ಅಣ್ವಸ್ತ್ರ ತಡೆಯುವ ಕೊನೆಯ ಹತಾಶ ಪ್ರಯತ್ನವೋ? ಯುದ್ಧಕ್ಕೆ ಮುನ್ನುಡಿಯೋ?

ಉಳ್ಳಾಲ: ನಾಗರೀಕರ ಜ್ವಲಂತ ಸಮಸ್ಯೆಗಳ ವಿರುದ್ಧ ಜನಾಂದೋಲನ



ಭೂಮಿಯಿಂದ ಓಡಿಸಿದ ರೈತರು ಶ್ರಮಾಗಾರಗಳಿಗೆ ದಬ್ಬಲ್ಪಟ್ಟರು ಶ್ರಮಾಗಾರಗಳೆಂಬ ಜೈಲುಗಳ ಯಾತನೆಯಲ್ಲಿ ರೂಪುಗೊಂಡ ಚಾಪ್ಲಿನ್

ಭಾಗ 23

ಜಿ.ಎನ್. ನಾಗರಾಜ್

"ಧಣಿ, ಇನ್ನೊಂದು ಸ್ವಲ್ಪ ಅನ್ನ ಹಾಕಿ" ಎಂದು ಒಬ್ಬ ಬಡಕಲು ದೇಹದ ಬಾಲಕ ಆಲಿವರ್ ಕೇಳಿದ. ಅಲ್ಲಿ ಬಡಿಸುತ್ತಿದ್ದವರೆಲ್ಲ ಸ್ತಂಬಿತರಾದರು. ಅಲ್ಲಿದ್ದ ಬಾಲಕರು ಏನಾಗುತ್ತದೋ ಎಂಬ ಭಯದಿಂದ ಮರಗಟ್ಟಿದಂತಾದರು. ಕೂಡಲೇ ಬಡಿಸುತ್ತಿದ್ದ ಒಬ್ಬ ಕೊಣಪ ಆಲಿವರನ ನೆತ್ತಿಯ ಮೇಲೆ ಸೌಟಿನಿಂದಲೇ ಬಡಿದು, ಆ ಬಾಲಕನ ಕತ್ತನ್ನು ಕಂಕುಳಲ್ಲಿ ಉಸಿರುಗಟ್ಟುವಂತೆ ಹಿಡಿದಮುಕಿ ಗರ್ಜಿಸಿದ.



ಅಷ್ಟೇ ಅಲ್ಲ, ಆ ಹುಡುಗನನ್ನು ಕತ್ತಲ ಕೋಣೆಯಲ್ಲಿ ಕೂಡಿ ಹಾಕಿದರು. ನೆಲದಲ್ಲಿ ಮಲಗುವಂತೆ ಮಾಡಿದರು. ಪ್ರತಿದಿನ ಇತರ ಬಾಲಕರು ಊಟ ತಿಂಡಿ ತಿನ್ನುತ್ತಿದ್ದಾಗ ಅವನನ್ನು ಕರೆತಂದು ಬೆತ್ತದಿಂದ ಬೆನ್ನ ಮೇಲೆ ಬಾಸುಂಡೆ ಏಳುವಂತೆ ಬಾರಿಸಿದರು. ಅವನನ್ನು ಕೂಡಿಹಾಕಿದ್ದ ಕತ್ತಲ ಕೋಣೆಯ ಹೊರಗೆ ಒಬ್ಬ ಬಾಲಕ ದುಡಿಯಲು ಲಭ್ಯವಿದ್ದಾನೆ. ಅವನನ್ನು ದುಡಿಸಿಕೊಳ್ಳ ಬಯಸುವವರು ಅವನನ್ನು ಕೊಂಡುಕೊಂಡು ಒಯ್ಯಬಹುದು ಎಂದು ನೋಟೀಸ್ ಹಚ್ಚಿದರು.

ಎತ್ತರದ ಹೊಗೆ ಚಿಮಣಿಗಳನ್ನು ಸ್ವಚ್ಛಮಾಡುವ ಕೆಲಸ ಮಾಡುತ್ತಿದ್ದವನೊಬ್ಬ ಆಲಿವರನನ್ನು ಕೊಸರಾಡಿ, ಚೌಕಾಶಿ ಮಾಡಿ ಪಡೆದುಕೊಂಡ. ಅವನನ್ನು ದೊಡ್ಡವರು ನುಸುಳಲಾಗದ ಚಿಮಣಿಗಳ ಉಸಿರಾಡಲಾಗದ ಸಣ್ಣ ಇರುಕಿನ ಒಳಗೆ ಹತ್ತಿ ಹೊಗೆಯ ಕಪ್ಪು ಮಸಿಯನ್ನು ಸ್ವಚ್ಛ ಮಾಡುವುದಕ್ಕೆ ಒಬ್ಬ ಬಾಲಕ ಬೇಕಾಗಿತ್ತು. ಈಗಾಗಲೇ ಈ ಅಪಾಯಕಾರಿ ಕೆಲಸದಲ್ಲಿ ನಾಲ್ಕು ಹುಡುಗರು ಸತ್ತಿದ್ದರು. ಅದೆಲ್ಲ ಗೊತ್ತಿದ್ದೂ ಆ ಶ್ರಮಾಗಾರದ (ದುಡಿಮೆಯ ಮನೆ) ಅಧಿಕಾರಿಗಳು ಆಲಿವರನನ್ನು ಚಿಮಣಿ ಸ್ವಚ್ಛ ಮಾಡುವವನಿಗೆ ಒಪ್ಪಿಸಿದರು.

ಯಾರೀ ಬಾಲಕ ಆಲಿವರ್? ಏನಿದು ಪ್ರಸಂಗ? ಇದು ಚಾರ್ಲ್ಸ್ ಡಿಕನ್ಸ್ ಬರೆದ ಜನಪ್ರಿಯ ಕಾದಂಬರಿ, ಜನಪ್ರಿಯ ನಾಟಕ, ಸಿನೆಮಾಗಳೂ ಆಗಿರುವ ಆಲಿವರ್ ಟ್ವಿಸ್ಟ್ ಕಾದಂಬರಿಯಲ್ಲಿ ಅಂದಿನ ಬ್ರಿಟನ್‌ನ ಬಡಜನರ ಜೀವನದ ಚಿತ್ರಣ. ಚಾರ್ಲ್ಸ್ ಡಿಕನ್ಸ್‌ನ ಆಲಿವರ್ ಟ್ವಿಸ್ಟ್ ಮಾತ್ರವಲ್ಲ, ಚಾಪ್ಲಿನನ ಪ್ರಸಿದ್ಧ ಪಾತ್ರ ಟ್ರಾಂಪ್ (ಅಲೆಮಾರಿ ಭಿಕಾರಿ)ಯ ಪಾತ್ರ ಹುಟ್ಟಿದ್ದೂ ಇದೇ ಶ್ರಮಾಗಾರಗಳ ಮೂಲದಿಂದ. ಚಾಪ್ಲಿನನ ಬಹು ಪ್ರಸಿದ್ಧ ಸಿನಿಮಾ "ಕಿಡ್" ನ ಕಲ್ಲು ಹೊಡೆದು ಗಾಜು ಒಡೆಯುವ ಬಾಲಕ ಕಿಡ್ ನನ್ನು ಕೊನೆಯಲ್ಲಿ ಪೊಲೀಸರು ಹಿಡಿದುಕೊಂಡು ಸೇರಿಸಿದ್ದು ಇಂತಹದ್ದೇ ಶ್ರಮಾಗಾರಕ್ಕೆ. ಶ್ರಮಾಗಾರ (ದುಡಿಮೆಯ ಮನೆ) ವೆಂದರೆ ಬ್ರಿಟನ್‌ನಲ್ಲಿ 17 ನೇ ಶತಮಾನದಿಂದ ಅಲೆಮಾರಿ ಭಿಕಾರಿಗಳನ್ನು ಎಳೆತಂದು ದುಡಿಮೆಗೆ ಹಚ್ಚುವುದಕ್ಕಾಗಿ ಆ ಮೂಲಕ ಅವರು ಭಿಕ್ಷೆ ಬೇಡುವುದನ್ನು ತಪ್ಪಿಸುವುದಕ್ಕಾಗಿ ಆರಂಭ ಮಾಡಿದ ಸಂಸ್ಥೆಗಳು.

ಚಾಪ್ಲಿನ್‌ನ ಇಡೀ ಕುಟುಂಬವನ್ನು ಇಂತಹ ಶ್ರಮಾಗಾರಗಳಿಗೆ ಸೇರಿಸಲಾಗಿತ್ತು. ತಾಯಿ ಒಂದು ಊರಿನಲ್ಲಿ. ಸಣ್ಣ ವಯಸ್ಸಿನ ಚಾಪ್ಲಿನ್ ಮತ್ತು ಅವರ ಅಣ್ಣ ದೂರದ ಮತ್ತೊಂದು ಊರಿನಲ್ಲಿ. ತಾಯಿ ಮಕ್ಕಳನ್ನು ಯಾವಾಗಲೋ ಒಮ್ಮೆ ನೋಡಿ ಪ್ರೀತಿ ತೋರಿಸಬೇಕೆಂದರೆ ಮೊದಲು ತನ್ನ ಶ್ರಮಾಗಾರದಿಂದ ಅನುಮತಿ ಪಡೆದುಕೊಳ್ಳಬೇಕು. ಹಲವಾರು ಮೈಲು ಪ್ರಯಾಣ ಮಾಡಲು ಹಣ ಹೊಂದಿಸಿಕೊಳ್ಳಬೇಕು. ಮಕ್ಕಳಿಗೆ ಒಂದಿಷ್ಟು ಸಿಹಿತಿಂಡಿ ನೀಡಬೇಕೆಂದರೆ ಅದಕ್ಕಾಗಿ ದುಡಿಯಬೇಕು. ಚಾಪ್ಲಿನ್‌ರವರ ಸ್ವಚರಿತ್ರೆಯಲ್ಲಿ ಅವರು ವಿವರಿಸಿದ ಬಾಲ್ಯದ ಸಂಕಟಗಳು ಅವರ ಟ್ರಾಂಪ್ ಪಾತ್ರದ ಹುಟ್ಟಿಗೆ ಕಾರಣವಾಗಿವೆ. ಅವರ ಸಿನೆಮಾಗಳಲ್ಲಿ ವಿವಿಧ ರೂಪದಲ್ಲಿ ಅಚ್ಚೊತ್ತಿವೆ. ಡಿಕನ್ಸ್‌ನ ಆಲಿವರ್ ಹುಟ್ಟಿದ್ದೇ ಇಂತಹ ಬಡವರ ಶ್ರಮಾಗಾರದಲ್ಲಿ. ಸರಿಯಾದ ಆಹಾರ, ಚಿಕಿತ್ಸೆಗಳಿಲ್ಲದೆ ಕೆಲವೇ ತಿಂಗಳ ನಂತರ ತಾಯನ್ನು ಕಳೆದುಕೊಂಡು ಅನಾಥವಾಗಿ ಬೆಳೆದ ಮಗು ಆಲಿವರ್. ಈ ಶ್ರಮಾಗಾರಗಳಲ್ಲಿ ಇದ್ದವರಿಗೆ ಕೇವಲ ಜೀವ ಹಿಡಿದುಕೊಳ್ಳುವುದಕ್ಕೆ ಅಗತ್ಯವಾದಷ್ಟು ಮಾತ್ರ ಕನಿಷ್ಠ ಬ್ರೆಡ್ ಚೂರುಗಳನ್ನು ಸೂಪ್‌ನೊಂದಿಗೆ ನೀಡಲಾಗುತ್ತಿತ್ತು. ಅದರಲ್ಲಿಯೂ ಅಡಿಗೆ ಮಾಡುವವರು, ಬಡಿಸುವವರು, ಈ ಸಂಸ್ಥೆಗಳ ಮೆಲುಸ್ತುವಾರಿ ಮಾಡುವ ಬೋರ್ಡ್ (ಮಂಡಲಿಗಳು) ಇವರು ಕಸಿದುಕೊಂಡು ಕೊಣಪರಾಗಿ ಕೊಬ್ಬುತ್ತಿದ್ದರು, ಸಂಸ್ಕೃತಿವಂತ ನಾಗರಿಕರಾಗಿ ಕಾಣಿಸುತ್ತಿದ್ದರು.



ಅಲ್ಲಿಯ ಬಾಲಕರು ಎಷ್ಟು ಹಸಿವಿನಿಂದ ಬಳಲುತ್ತಿದ್ದರೆಂದರೆ ಅದರಲ್ಲೊಬ್ಬ ಹುಡುಗ ರಾತ್ರಿ ಮಲಗಿದ್ದಾಗ ಆಲಿವರ್‌ನನ್ನೇ ತಿಂದು ನರಭಕ್ಷಕನಾಗುತ್ತೇನೆಂದು ಹೆದರಿಸಿದ್ದನಂತೆ. ಆ ಭಯದಿಂದಲೇ ಆಲಿವರ್ ದಣಿ, ಸ್ವಲ್ಪ ಅನ್ನ ಎಂದು ಕೇಳಲೇಬೇಕಾಯಿತು.

ಪೂರ್ ಲಾಗಳು (ಬಡವರ ಕಾನೂನು):

ಹಿಂದಿನ ಲೇಖನಗಳಲ್ಲಿ ವಿವರಿಸಿರುವಂತೆ ಕೃಷಿ ಭೂಮಿಯಿಂದ ಓಡಿಸಲ್ಪಟ್ಟ ರೈತರು, ಜೀತಗಾರರು, ಅವರ ಹೆಂಡತಿ ಮಕ್ಕಳು ಅಲೆಮಾರಿಗಳಾಗಿ, ಭಿಕ್ಷುಕರಾಗಿ ಅಲೆಯುವುದು, ಅವರ ಹಸಿವಿನ ಸಂಕಟ ಎಷ್ಟು ಹೆಚ್ಚಾಯಿತೆಂದರೆ ಬ್ರಿಟನ್‌ನ ಜನ ಸಾಮಾನ್ಯರ ಕಣ್ಣು ಕುಕ್ಕತೊಡಗಿತು. ಹಸಿವಿನ ಪರಿಣಾಮದ ಒಂದು ರೂಪವಾಗಿ ಕಳ್ಳತನಗಳು ಹೆಚ್ಚಾಗತೊಡಗಿದವು.

ಆಗ ಬ್ರಿಟನ್ನಿನಲ್ಲಿ ಈ ಎಲ್ಲವುಗಳ ಬಗ್ಗೆ ಚರ್ಚೆಗಳು ಆರಂಭವಾದವು. ಕೆಲ ಪ್ರದೇಶಗಳಲ್ಲಿ ಶೇ.43 ರಷ್ಟು ದೊಡ್ಡ ಪ್ರಮಾಣದಲ್ಲಿ ತೀವ್ರ ಬಡತನಕ್ಕೆ ತುತ್ತಾಗಿದ್ದರು. 1610 ರಿಂದ 1630 ರ ನಡುವೆ ಬಡವರ ಸಂಖ್ಯೆ ಮೂರು ಪಟ್ಟು ಹೆಚ್ಚಾಯಿತು. ಬ್ರಿಟನ್‌ನ ರಾಣಿ ಎಲಿಜಬೆತ್ ಸ್ವತಃ, ತನ್ನ ಒಂದು ಪ್ರವಾಸದ ನಂತರ "ಏನಿದು ಈ ಪರಿಯ ಬಡತನ" ಎಂದು ಉದ್ಗಾರ ತೆಗೆದಳು.

ಅವಳ ಆಡಳಿತದಲ್ಲಿ 1597 ರಲ್ಲಿ ಪೂರ್ ಲಾ ಒಂದನ್ನು ಜಾರಿಗೆ ತರಲಾಯಿತು. ಬಡತನ, ಭಿಕ್ಷೆ ಬೇಡುವುದು ಅಲೆಮಾರಿಗಳದೇ ತಪ್ಪು, ಅವರು ತಮ್ಮ ಊರುಗಳಲ್ಲಿ ದುಡಿಯದೇ ಅಲೆದಾಡುತ್ತಿದ್ದಾರೆ. ಅವರನ್ನು ಅವರ ಊರುಗಳಿಗೆ ಹೋಗಿ ಬಿಟ್ಟು ಬರುವುದು ಈ ಕಾನೂನಿನ ಮುಖ್ಯ ಅಂಶವಾಗಿತ್ತು. ಅದು ಅವರ ತಪ್ಪು ಮಾತ್ರ ಅಲ್ಲ, ಸಾಮಾಜಿಕ ಆರ್ಥಿಕ ಅಂಶಗಳು ಅದಕ್ಕೆ ಕಾರಣ ಎಂಬುದನ್ನು ಮಾನ್ಯ ಮಾಡಲು ಸಿದ್ಧವಿರಲಿಲ್ಲ.

ಈ ಸಮಯದಲ್ಲಿ ಕೆಲ ಧಾರ್ಮಿಕ ಮುಖಂಡರು ಬಡವರ ಸೇವೆಯ ಬಗ್ಗೆ ಹೆಚ್ಚಾಗಿ ಮಾತಾಡತೊಡಗಿದರು. (ಬಡತನದ ಬಗ್ಗೆ ಧರ್ಮದ ವ್ಯಾಖ್ಯಾನ, ಅಭಿಪ್ರಾಯಗಳು ಹೇಗೆ ಬದಲಾಗುತ್ತಾ ಹೋದವು ಎಂಬ ವಿವರಗಳ ಬಗ್ಗೆ ಬಾಕ್ಸ್ ನೋಡಿ) ಕೆಲ ಶ್ರೀಮಂತರು, ಸಾರ್ವಜನಿಕರು ಕ್ರಿಶ್ಚಿಯನ್ ದಾನ ಧರ್ಮಗಳ ಮೂಲಕ ಅಲ್ಪ ಸ್ವಲ್ಪ ಪರಿಹಾರ ನೀಡತೊಡಗಿದರು. ಸರ್ಕಾರವೂ ಕೂಡಾ ಪೂರ್ ಲಾ ಎಂಬ ಕಾನೂನುಗಳನ್ನು 1597 ರ ನಂತರ ಒಂದಾದ ಮೇಲೊಂದರಂತೆ ತರತೊಡಗಿದರು.

ಆದರೆ ಈ ಕಾನೂನುಗಳು, ಇತರ ಕ್ರಮಗಳು ಈ ಸಮಸ್ಯೆಯ ಮೂಲ, ಭೂಮಿಯಿಂದ ಓಡಿಸುವುದು, ಅದರತ್ತ ಕಡೆಗಣ್ಣು ಕೂಡಾ ಹಾಯಿಸಲಿಲ್ಲ. ಅದರ ನಿಯಮಗಳು ಎಷ್ಟು ಕಠಿಣವಾಗಿತ್ತೆಂದರೆ ಅದರ ಹಿಂದಿನ ತತ್ವವೇ ದುಡಿಯಲು ನಿರಾಕರಿಸುವ ಸೋಮಾರಿಗಳನ್ನು ದುಡಿಯಲು ಹಚ್ಚಬೇಕೆಂಬುದೇ ಆಗಿತ್ತು. ಅಂದಿನ ಒಬ್ಬ ಪ್ರಸಿದ್ಧ ಹೇಳಿದಂತೆ 'ಯಾರು ದುಡಿಯುವುದಿಲ್ಲವೋ ಅವರಿಗೆ ಉಣ್ಣಲು ಹಕ್ಕಿಲ್ಲ' ಎಂಬುದೇ ಈ ಕಾನೂನುಗಳ ಅಡಿಪಾಯದ ತತ್ವ.

ಅದಕ್ಕಾಗಿ ಶ್ರಮಾಗಾರಗಳು ಅಥವಾ ಸೋಮಾರಿ ಭಿಕ್ಷುಕರನ್ನು ಸರಿಪಡಿಸುವ ಸಂಸ್ಥೆಗಳನ್ನು (ಹೌಸ್ ಆಫ್ ಕರೆಕ್ಷನ್) ಸ್ಥಾಪಿಸಿದರು. ಅದರ ಫಲವೇ ಮೇಲೆ ಉದಾಹರಿಸಿದ ಚಾಪ್ಲಿನ್ ಮತ್ತು ಡಿಕನ್ಸ್‌ನ ಕೃತಿಗಳ ಶ್ರಮಾಗಾರಗಳೇ ಉದಾಹರಣೆಗಳು.

ಈ ಶ್ರಮಾಗಾರಗಳಲ್ಲಿದ್ದ ಬಾಲಕರನ್ನು ಅವರನ್ನು ದುಡಿಸಿಕೊಂಡು ಒಂದಿಷ್ಟು ಊಟ ಹಾಕಲು ತಯಾರಿರುವವರಿಗೆ ಪುಟ 6 ಕ್ಕೆ

ಬಡತನ ಮತ್ತು ಧರ್ಮ: ತಲೆಕೆಳಗಾದ ಧಾರ್ಮಿಕ ಸಿದ್ಧಾಂತಗಳು

"ಬಹಳ ತುರ್ತು ಇದೆ ಎಂಬುದು ಸ್ಪಷ್ಟವಾಗಿ ಕಂಡ ಮೇಲೂ ದಾನ ಮಾಡುವುದಕ್ಕೆ ಹಿಂತೆಗೆದರೆ ಅದು ಅತ್ಯಂತ ದೊಡ್ಡ ಪಾಪ" ಇದು ಅಗತ್ಯವಿರುವವರಿಗೆ ಪರಿಹಾರ ಒದಗಿಸುವುದು ಅಂತಹ ಸಾಧ್ಯತೆ ಇರುವವರ ಪ್ರಾಥಮಿಕ ಋಣ ಎಂಬ ಧಾರ್ಮಿಕ ಚಿಂತನೆಯಿಂದ ಹುಟ್ಟಿದ್ದು. ದೀನರು ದೇವರಿಗೆ ಬಹಳ ಹತ್ತಿರದವರು. ಇಂದು ಮಾಡಿದ ದಾನ ಮುಂದೆ ಸಾವಿರಪಟ್ಟು ಫಲ ನೀಡುತ್ತದೆ. ಇದು ಒಂದು ಕಡೆ ಬಡತನವನ್ನೂ ಮತ್ತೊಂದು ಕಡೆ ದಾನ ಧರ್ಮಗಳಿಗೂ ಆಧ್ಯಾತ್ಮಿಕ ಪ್ರಭೆಯನ್ನು ಒದಗಿಸುತ್ತದೆ.

ಲ್ಯಾಟಿಮರ್ ಎಂಬ ಪಾದ್ರಿ ತನ್ನ ಧಾರ್ಮಿಕ ಉಪನ್ಯಾಸಗಳಲ್ಲಿ ಹೇಳಿದಂತೆ 'ಶ್ರೀಮಂತರ ಸಂಪತ್ತಿನ ಮೇಲೆ ಬಡವರಿಗೆ ಹಕ್ಕಿದೆ. ಆದ್ದರಿಂದ ಶ್ರೀಮಂತರು ಬಡವರಿಗೆ ಸಹಾಯ ಮಾಡಬೇಕು.'

ಸಾವಿರಾರು ವರ್ಷಗಳಿಂದ ಸಮಾಜದಲ್ಲಿ ಸಾರ್ವತ್ರಿಕವಾಗಿರುವ ಚಿಂತನೆಯ ಹಿಂದೆ ಅಂದಿನ ಬದುಕಿನ ಪರಿಸ್ಥಿತಿ, ಸಮಾಜದ ರಚನೆಗಳು ಇಂತಹ ತತ್ವಗಳಿಗೆ ಕಾರಣವಾಗಿದ್ದವು.

ಬ್ರಿಟನ್‌ನಲ್ಲಿ ಬಡತನ, ಭಿಕ್ಷುಕರು ಹೆಚ್ಚಾದಾಗ ಚರ್ಚ್‌ಗಳೂ, ಧರ್ಮವಂತ ದಾನಿಗಳೂ ಬಡವರಿಗೆ ದಾನ ಮಾಡುವ ಒಂದಷ್ಟು ಪರಿಹಾರ ನೀಡುವ ಕಾರ್ಯಗಳನ್ನು ಮಾಡಲಾರಂಭಿಸಿದರು.

ಪ್ರಾಟೆಸ್ಟೆಂಟ್ ಧರ್ಮದ ಬೆಳವಣಿಗೆ, ಚರ್ಚ್‌ಗಳ ಆಸ್ತಿಯನ್ನು ವಶಪಡಿಸಿಕೊಂಡ ನಂತರ ಅವು ದುರ್ಬಲಗೊಂಡ ಸಮಯದಲ್ಲಿ, ಪ್ರಜಾಪ್ರಭುತ್ವ ಕ್ರಾಂತಿಯ ಸಂಘರ್ಷಗಳ ಹಾಗೂ ವೈಚಾರಿಕ ಬೆಳವಣಿಗೆಯ ಕಾರಣ ಸಮಾಜದ ಮೇಲೆ ಧಾರ್ಮಿಕ ಸಂಸ್ಥೆಗಳು ಹಾಗೂ ವಿಚಾರಗಳ ಹಿಡಿತ ದುರ್ಬಲವಾಗಿತ್ತು.

ಆದರೆ ಜನರಲ್ಲಿ ಹೆಚ್ಚಿದ ಬಡತನ, ಬಹು ವೇಗವಾದ ಬೆಳವಣಿಗೆಗಳು, ವ್ಯಾಪಾರದ ಏರುಪೇರು ಮೊದಲಾದವುಗಳಿಂದ ಉಳಿದ ವರ್ಗಗಳಿಗೂ ಉಂಟಾದ ಅನಿಶ್ಚಿತತೆಗಳಿಂದ ಧಾರ್ಮಿಕ ಸಂಸ್ಥೆಗಳು ಮತ್ತೆ ತಲೆ ಎತ್ತಲಾರಂಭಿಸಿದವು.

ಬ್ಯಾಪ್ಟಿಸ್ಟ್ ಧರ್ಮ ಪ್ರಚಾರಕ ಸಂಘ 1792, ಅಂತರ ಪಂಥೀಯ ಲಂಡನ್ ಧರ್ಮ ಪ್ರಚಾರಕ ಸಂಸ್ಥೆ 1795, ನೆದರ್‌ಲ್ಯಾಂಡ್ಸ್ ಮಿಶನರಿ ಸಂಸ್ಥೆ 1797, ಸುವಾರ್ತಾ ಬೋಧಕ ಧರ್ಮ ಪ್ರಚಾರಕ ಸಂಸ್ಥೆ 1799, ಬ್ರಿಟಿಷ್ ಮತ್ತು ವಿದೇಶಿ ಧರ್ಮ ಪ್ರಚಾರಕ ಸಂಸ್ಥೆ 1804, ಅಮೇರಿಕದ ಧರ್ಮ ಪ್ರಚಾರಕ ಸಂಸ್ಥೆಗಳ ಮಂಡಳಿ 1810, ಅಮೇರಿಕನ್ ಬ್ಯಾಪ್ಟಿಸ್ಟ್ 1814, ವೆಸ್ಲೆಯಾನ್ 1818, ಅಮೇರಿಕನ್ ಬೈಬಲ್ ಸಂಸ್ಥೆ 1816, ಚರ್ಚ್ ಆಫ್ ಸ್ಕಾಟ್ಲೆಂಡ್ 1824, ಸಂಯುಕ್ತ ಪ್ರೆಸ್ಬಿಟೇರಿಯನ್ಸ್ 1835, ಬೆಸಲ್ ಧರ್ಮ ಪ್ರಚಾರಕ ಸಂಸ್ಥೆ 1825. ಹೀಗೆ ಹತ್ತು ಹಲವು ಸಂಸ್ಥೆಗಳು ಸ್ಥಾಪನೆಗೊಂಡವು.

ದಾನ, ಧರ್ಮ ಎಂಬ ಮಾತುಗಳಿಗೆ ಬದಲಾಗಿ ಮನಬಂದಂತೆ ದಾನ ಮಾಡುವುದು ಧರ್ಮವನ್ನು ವಿಕಾರಗೊಳಿಸಿದಂತೆ, ನಡವಳಿಕೆಯನ್ನು ಪರಿಗಣಿಸ ಬೇಕು ಎಂಬ ಮಾತುಗಳು ಕೇಳಲಾರಂಭಿಸಿದವು. ಇದಕ್ಕೂ ಮೊದಲೇ ಪ್ರಾಟೆಸ್ಟೆಂಟ್ ಧರ್ಮದ ಸ್ಥಾಪಕ ಮಾರ್ಟಿನ್ ಲೂಥರ್ ಭಿಕ್ಷೆ ಕೇಳುವುದನ್ನು ಬ್ಲಾಕ್‌ಮೇಲ್ ಎಂದು ಕೀಳ್ಗಳೆದು ಈ ಮಾತುಗಳಿಗೆ ಅಡಿಪಾಯ ಹಾಕಿದ್ದರು. ಇಂತಹ ಹಲವು ಕಾರಣಗಳಿಗಾಗಿಯೇ ಕ್ರಿಶ್ಚಿಯನ್ ಧರ್ಮದ ಪ್ರಾಟೆಸ್ಟೆಂಟ್ ಪಂಥವನ್ನು ಬಂಡವಾಳಶಾಹಿ ಯುಗದ ಧರ್ಮ ಎಂದು ವ್ಯಾಖ್ಯಾನಿಸಲಾಗಿದೆ. ಇನ್ನೂ ಕೆಲವು ಸುಧಾರಕರು ಚರ್ಚ್ ಸಂಸ್ಥೆಗಳ ದಾನಗಳನ್ನು ಲಂಚ ನೀಡಿಕೆ ಎಂದು ಖಂಡಿಸಿದ್ದವು.

ಬಂಡವಾಳಶಾಹಿ ಯುಗದ ಅಗತ್ಯಗಳಿಗೆ ತಕ್ಕಂತೆ ಬಿಷಪ್ ಬರ್ಕ್‌ಲೆ ಎಂಬುವರು ಐರ್ಲೆಂಡ್‌ನ ಸ್ಥಿತಿಯನ್ನು ಗಮನದಲ್ಲಿರಿಸಿ ಗಟ್ಟಿಮುಟ್ಟಾದ ಭಿಕ್ಷುಕರನ್ನು ಹಿಡಿತಂದು ಕೆಲ ವರ್ಷಗಳ ಕಾಲ ಸಾರ್ವಜನಿಕ ಗುಲಾಮರನ್ನಾಗಿ ಮಾಡಬೇಕೆಂದು ಸಲಹೆ ನೀಡಿದ.

ಹೀಗೆ ಧರ್ಮಗಳ ಸಿದ್ಧಾಂತಗಳು ಬಂಡವಾಳಶಾಹಿ ಯುಗಕ್ಕೆ ಅನುಗುಣವಾಗಿ ತಿರುವು ಮುರುವಾದವು. ಧಾರ್ಮಿಕ ಸಂಸ್ಥೆಗಳು ಬಂಡವಾಳಶಾಹಿ ಬೆಳೆದಂತೆ ವ್ಯಾಪಕವಾಗಿ ಸ್ಥಾಪನೆಗೊಂಡವು.

ಸಂಪಾದಕೀಯ

ದಿಕ್ಕು ತಪ್ಪಿರುವ ಕನ್ನಡ ಸಾಹಿತ್ಯ ಪರಿಷತ್ತನ್ನು ಹಳಿಗೆ ತರಬೇಕು

ಕನ್ನಡ ಸಾಹಿತ್ಯ ಪರಿಷತ್ – ಕನ್ನಡ ಭಾಷೆ, ಕನ್ನಡ ಸಾಹಿತ್ಯ, ಕರ್ನಾಟಕದ ಸಾಮಾಜಿಕ–ಸಾಂಸ್ಕೃತಿಕ ಪ್ರಗತಿಯ ಉದ್ದೇಶವನ್ನು ಗುರಿಯಾಗಿಟ್ಟುಕೊಂಡು ಸ್ಥಾಪಿಸಲಾದ ಒಂದು ಸಾಹಿತ್ಯಿಕ ಸಂಸ್ಥೆ. ಶ್ರೇಷ್ಠ ಸಾಹಿತ್ಯ ದಿಗ್ಗಜರು ನೇತೃತ್ವ ವಹಿಸಿ ಮಹತ್ವದ ಕೊಡುಗೆ ನೀಡಿದ ಇತಿಹಾಸ ಇರುವ ಈ ಸಂಸ್ಥೆ ಈಗ ಕೆಟ್ಟ ಕಾರಣಕ್ಕಾಗಿ ಮತ್ತೊಮ್ಮೆ ತೀವ್ರ ವಿವಾದದ ಚರ್ಚೆಗೆ ಗುರಿಯಾಗಿದೆ.

2021 ರಲ್ಲಿ ಪರಿಷತ್‌ನ ಅಧ್ಯಕ್ಷರಾದ ಮಹೇಶ ಜೋಷಿಯವರ ಸರ್ವಾಧಿಕಾರಿ, ಪ್ರಜಾಪ್ರಭುತ್ವ ವಿರೋಧಿ, ಪ್ರಗತಿ ವಿರೋಧಿ ಧೋರಣೆಗಳ ವಿರುದ್ಧ ವ್ಯಾಪಕ ಅಸಮಾಧಾನಗಳು ವ್ಯಕ್ತವಾಗುತ್ತಿವೆ. ಮಂಡ್ಯದಲ್ಲಿ ನಡೆದ ಅ.ಭಾ. ಕನ್ನಡ ಸಾಹಿತ್ಯ ಸಮ್ಮೇಳನವನ್ನು ಅವರು ನಿರ್ವಹಿಸಿದ ರೀತಿಯಿಂದ, ಎಸಗಿದ ತಾರತಮ್ಯಗಳಿಂದ ಜನರ ವಿರೋಧ ವ್ಯಾಪಕವಾಗಿ ಜನಾಕ್ರೋಶ ಸ್ಫೋಟಗೊಂಡಿದೆ.

ಅವರು ಸಾಹಿತ್ಯ ಸಮ್ಮೇಳನಕ್ಕೆ ಸಾಹಿತ್ಯೇತರ ವ್ಯಕ್ತಿಗಳನ್ನು ಅಧ್ಯಕ್ಷರನ್ನಾಗಿ ಆಯ್ಕೆ ಮಾಡಿದರೆ ತಪ್ಪಿಲ್ಲ ಎಂಬ ವಾದ ತೇಲಿ ಬಿಟ್ಟಿದ್ದರು. ಗಟ್ಟಿಧ್ವನಿಯ ಜನಪರ ಸಾಹಿತಿಯೊಬ್ಬರು ಸಮ್ಮೇಳನದ ಅಧ್ಯಕ್ಷರಾದರೆ, ಕೇಂದ್ರ ಸರಕಾರದ ಒಕ್ಕೂಟ ವಿರೋಧಿ, ಕರ್ನಾಟಕ ವಿರೋಧಿ ಧೋರಣೆಗಳನ್ನು ಖಂಡಿಸುತ್ತಾರೆ. ಅವನ್ನು ಚರ್ಚೆಯ ಮುಂಚೂಣಿಗೆ ತರಲು ಅವಕಾಶ ನೀಡಬಾರದು. ಯಾರಾದರೂ ಕಾರ್ಪೋರೇಟ್ ಪರವಾದ ಉದ್ಯಮಿಯನ್ನೋ, ವ್ಯಾಪಾರಿಯನ್ನೋ, ಗುಪ್ತ–ಸುಪ್ತ ಕೋಮುವಾದಿ ಸ್ವಾಮೀಜಿಗಳನ್ನೋ ಸಮ್ಮೇಳನದ ಅಧ್ಯಕ್ಷರನ್ನಾಗಿ ಮಾಡಿಕೊಂಡು ತಮ್ಮ ಬೇಳೆ ಬೇಯಿಸಿಕೊಳ್ಳಬೇಕು ಎಂಬ ಹಿಡನ್ ಅಜೆಂಡಾ ಈ ಮಾತಿನ ಹಿಂದಿತ್ತು. ಆದರೆ ಅದು ಸಾಧ್ಯವಾಗಲಿಲ್ಲ. ಸಾಹಿತ್ಯ ಕ್ಷೇತ್ರದ ಜನರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೇ ಸಮ್ಮೇಳನಕ್ಕಾಗಿ ದುಡಿಯುತ್ತಿದ್ದವರನ್ನು ಅಪಮಾನಿಸಿ ಸರ್ವಾಧಿಕಾರಿಯಂತೆ ಸಮ್ಮೇಳನದ ಪ್ರಕ್ರಿಯೆಗಳನ್ನು ನಿರ್ವಹಿಸಿದ್ದರಿಂದಲೂ ಅವರು ಮಂಡ್ಯದಲ್ಲಿ ಸಾಕಷ್ಟು ವಿರೋಧ ಎದುರಿಸಿದರು. ಸಮ್ಮೇಳನದ ಮಳಿಗೆ–ಆವರಣದಲ್ಲಿ ನಿಷೇಧಿಸಲಾದ ತಂಬಾಕು, ಅಲ್ಕೋಹಾಲ್ ಮುಂತಾದವುಗಳ ಪಟ್ಟಿಯಲ್ಲಿ ಮಾಂಸಾಹಾರವನ್ನೂ ಸೇರಿಸಿ ಮಾಂಸಾಹಾರಿಗಳನ್ನು ಅವಮಾನಿಸಿದ ಧೋರಣೆ ಖಂಡಿಸಿ ಸಾಹಿತ್ಯ ಸಮ್ಮೇಳನದಲ್ಲಿ ಮಾಂಸಾಹಾರವನ್ನೂ ಕೊಡಬೇಕೆಂಬ ಚಳುವಳಿಯೇ ಸಿಡಿದು ಬಂತು.

ಜೋಷಿಯವರು ಪರಿಷತ್ತಿನ ಚುನಾಯಿತ ಕಾರ್ಯಕಾರಿ ಸಮಿತಿಗಳನ್ನು ಪ್ರಜಾಸತ್ತಾತ್ಮಕವಾಗಿ ನಡೆಸುತ್ತಿಲ್ಲ. ತಮ್ಮನ್ನು ವಿಮರ್ಶೆ ಮಾಡುವವರನ್ನು ಬೆದರಿಸುತ್ತಾರೆ. ಸದಸ್ಯತ್ವವನ್ನೇ ರದ್ದು ಪಡಿಸುವ ಪ್ರಯತ್ನ ನಡೆಸುತ್ತಾರೆ. ಸಭೆಗಳನ್ನು ಎಲ್ಲ ಸದಸ್ಯರಿಗೆ ಹಾಜರಾಗಲು ಅನುಕೂಲವಾಗದ ದೂರದ ಜಾಗದಲ್ಲಿ ಇಡುವುದು, ಸಭೆಯ ಸೂಚನಾ ಪತ್ರಗಳನ್ನು ಬೇಕೆಂದೇ ತಡವಾಗಿ ತಲುಪುವಂತೆ ಕಳಿಸುವುದು, ಭಟ್ಟಂಗಿ ಸದಸ್ಯರ ಸಮ್ಮುಖದಲ್ಲಿ ಪ್ರಮುಖ ನಿರ್ಧಾರ ಕೈಗೊಳ್ಳುವುದು, ಸಭೆಯಲ್ಲಿ ವಿಷಯಗಳ ಚರ್ಚೆಯನ್ನೇ ಮಾಡದೇ ಲಿಖಿತ ನಿರ್ಣಯಗಳಿಗೆ ಸದಸ್ಯರಿಂದ ಸಹಿ ಹಾಕಿಸಿಕೊಳ್ಳುವುದು ಮುಂತಾದ ಅಕ್ರಮ ವಿಧಾನದಲ್ಲಿ ಕೆಲಸ ಮಾಡುತ್ತಿದ್ದಾರೆ ಎಂಬ ಗಂಭೀರ ಆರೋಪಗಳು ಕೇಳಿ ಬಂದಿವೆ. ಈಗ, ಮೃತ ಕಾರ್ಯಕಾರಿ ಸದಸ್ಯರ ಜಾಗಕ್ಕೆ ಹೊಸ ಸದಸ್ಯರನ್ನು 'ನಾಮಕರಣ' ಮಾಡಲು ಸಾಧ್ಯವಾಗುವಂತೆ ಪರಿಷತ್ತಿನ ನಿಯಮಾವಳಿಗಳಿಗೆ ತಿದ್ದುಪಡಿ ಮಾಡಲು, ಅಧಿಕಾರವಧಿ ಹೆಚ್ಚಿಸಿಕೊಳ್ಳಲು, ತಮ್ಮ ಅಣತಿಗೆ ಕುಣಿಯದ ಜಿಲ್ಲಾದ್ಯಕ್ಷರು, ಸದಸ್ಯರನ್ನು ವಜಾಗೊಳಿಸುವ ಅಧಿಕಾರ ಪಡೆಯಲು ಜೋಷಿಯವರು ಯೋಜಿಸಿದ್ದಾರೆ ಎನ್ನಲಾಗಿದೆ. ನಾಮಕರಣಗೊಂಡ ಸದಸ್ಯರಿಗೂ ಮತದಾನದ ಹಕ್ಕು ನೀಡುವ ಮೂಲಕ ತಮ್ಮ ಭಟ್ಟಂಗಿಗಳನ್ನು ಕಾರ್ಯಕಾರಿಯಲ್ಲಿ ತುಂಬಿಕೊಳ್ಳುವ ಹುನ್ನಾರ ನಡೆಸಿದ್ದಾರೆ ಎಂಬ ತೀವ್ರವಾದ ಟೀಕೆಗಳು ಕೇಳಿ ಬರುತ್ತಿವೆ.

ಬಳ್ಳಾರಿಯಲ್ಲಿ ನಿಗದಿಯಾಗಿರುವ 88 ನೇ ಅ.ಭಾ.ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ 40 ಕೋಟಿ ರೂಪಾಯಿಗಳ ಅನುದಾನ ನೀಡಬೇಕೆಂದು ಜೋಷಿಯವರು ರಾಜ್ಯ ಸರಕಾರದ ಮುಂದೆ ಬೇಡಿಕೆ ಇಟ್ಟಿದ್ದಾರೆ. ಆದರೆ ಐದು ತಿಂಗಳುಗಳು ಕಳೆದರೂ ಮಂಡ್ಯ ಸಾಹಿತ್ಯ ಸಮ್ಮೇಳನದ ಲೆಕ್ಕ ಪತ್ರಗಳನ್ನು ಕಾರ್ಯಕಾರಿ ಸಮಿತಿಯ ಮುಂದೆ, ಜನರ ಮುಂದೆ ಇಟ್ಟಿಲ್ಲ. ಲಭ್ಯವಾಗಿರುವ ಲೆಕ್ಕಪತ್ರಗಳನ್ನು ಪರಿಶೀಲಿಸಿದವರು, ಸಮ್ಮೇಳನದ ಹೆಸರಿನಲ್ಲಿ ಅಪಾರ ದುಂದುವೆಚ್ಚ ನಡೆದಿದೆ ಎಂದೂ, ಕೋಟ್ಯಂತರ ರೂಪಾಯಿಗಳ ದುರುಪಯೋಗ, ಭ್ರಷ್ಟಾಚಾರ ನಡೆದಿದೆ ಎಂದೂ ಗಂಭೀರ ಆರೋಪಗಳನ್ನು ಮಾಡಿದ್ದಾರೆ. ಸರ್ಕಾರದ ಮುಂದೆ ಕೈ ಒಡ್ಡುವುದು, ಅದರ ಬಾಲಂಗೋಚಿಯಾಗುವುದು ಒಪ್ಪುವ ವಿಷಯವಲ್ಲ.

ಕಳೆದ ನಾಲ್ಕೂವರೆ ವರ್ಷಗಳಲ್ಲಿ ಮಹೇಶ ಜೋಷಿಯವರ ನಾಯಕತ್ವದಲ್ಲಿ ಷರಿಷತ್ತು ಕನ್ನಡ ಸಾಹಿತ್ಯ–ಸಂಸ್ಕೃತಿಗಳ ಪ್ರಗತಿಗೆ ಪೂರಕವಾದ ಯಾವ ಮಹತ್ವದ ಕೊಡುಗೆಯನ್ನೂ ಕೊಟ್ಟಿಲ್ಲ. (ನಿರಂಜನ, ಶಾಂತರಸ ಮುಂತಾದವರ ಜನ್ಮಶತಮಾನೋತ್ಸವವನ್ನು ನೆನಪಿಸಿಕೊಳ್ಳಲೂ ಇಲ್ಲ.) ಆದರೆ ಜೋಷಿ ಮತ್ತೊಮ್ಮೆ ಚುನಾವಣೆಯಲ್ಲಿ ಗೆದ್ದು ಬರಲು ಬೇಕಾದ ಕು–ತಂತ್ರಗಾರಿಕೆಗಳನ್ನು ನಡೆಸುತ್ತಿದ್ದಾರೆ ಎಂಬ ಭಾವನೆ ಅಲ್ಲಿನ ಚಟುವಟಿಕೆಗಳನ್ನು ನೋಡಿದ ಸಾಹಿತ್ಯ ವಲಯದಲ್ಲಿ ದಟ್ಟವಾಗಿದೆ.

ತಾವು ಕೇಳದೆಯೇ ಪರಿಷತ್ ಅಧ್ಯಕ್ಷರಿಗೆ ಸಂಪುಟ ದರ್ಜೆ ಸಚಿವರ ಸ್ಥಾನಮಾನವನ್ನು ಸರಕಾರ ಕೊಟ್ಟಿದೆ ಎಂದು ಹೇಳಿಕೊಳ್ಳುವ ಜೋಷಿಯವರು, ತಮ್ಮ 'ಲೆಟರ್ ಹೆಡ್'ನಲ್ಲಿ ಮಾತ್ರ ಸಂಪುಟ ದರ್ಜೆ ಸಚಿವರಿಗೆ ಸಮಾನವಾದ ಅಧಿಕಾರ ತಮಗಿದೆ ಎಂದು ನಮೂದಿಸುವುದನ್ನು ಮರೆಯುವುದಿಲ್ಲ.!! ಹಿಂದೆ ತಾವು ದೂರದರ್ಶನದ ನಿರ್ದೇಶಕರಾಗಿದ್ದಾಗಿನ ವಿಷಯಗಳ ಸಂಬಂಧದ ಕೋರ್ಟ್ ಕೇಸುಗಳಿಗೂ ಪರಿಷತ್ತಿನ ಹಣ, ಅಧಿಕಾರ, ಸೌಕರ್ಯಗಳನ್ನು ಬಳಸುತ್ತಿದ್ದಾರೆ ಎಂದೂ ಅವರ ಮೇಲೆ ಗಂಭೀರ ಆರೋಪಗಳು ಬಂದಿವೆ. ಕನ್ನಡ ಸಾಹಿತ್ಯ ಪರಿಷತ್ ಕಟ್ಟಡ ಇರುವ ರಸ್ತೆಗೆ 'ಮನುಜ ಜಾತಿ ತಾನೊಂದೆ ವಲಂ' ಎಂದ 'ಪಂಪ ಮಹಾಕವಿ' ಹೆಸರು ಇರುವುದನ್ನೇ ಸಹಿಸದ ಧೋರಣೆ ಮಹೇಶ ಜೋಷಿಯವರದ್ದು. ಇಂತಹ ಸಂದರ್ಭದಲ್ಲಿ ಕರ್ನಾಟಕದ ಜನತೆ ಈ ಕೆಳಕಂಡ ಕ್ರಮಗಳಿಗಾಗಿ ಆಗ್ರಹಿಸುತ್ತಿರುವುದು ಅನಿವಾರ್ಯವಾಗಿದೆ.

ಜೋಷಿಯವರು ಪರಿಷತ್ತಿನ ನಿಯಮಗಳಿಗೆ ತರಲು ಹೊರಟಿರುವ ಎಲ್ಲ ಪ್ರಜಾಪ್ರಭುತ್ವ ವಿರೋಧಿ ನಿಯಮಗಳಿಗೆ ತಡೆ ಹಾಕಬೇಕು. ಸಾಹಿತ್ಯ ಸಮ್ಮೇಳನದ ಖರ್ಚು–ವೆಚ್ಚ ಸೇರಿದಂತೆ ಪರಿಷತ್‌ನ ಎಲ್ಲ ಲೆಕ್ಕಪತ್ರಗಳ ಕುರಿತು ಬಿಗಿಯಾದ ಲೆಕ್ಕ ಪರಿಶೋಧನೆ ನಡೆಯಬೇಕು. ಸಾಹಿತ್ಯ ಪರಿಷತ್‌ನ ಸಂಘಟನಾ ರಚನೆ, ನಿಯಮಾವಳಿಗಳು ಹೆಚ್ಚು ಹೆಚ್ಚು ಪ್ರಜಾಸತ್ತಾತ್ಮಕವಾಗಬೇಕು, ವಿಕೇಂದ್ರೀಕರಣಗೊಳಿಸಬೇಕು. ಜಿಲ್ಲಾ ಸಮಿತಿಗಳಿಗೆ ಹೆಚ್ಚು ಹೆಚ್ಚು ಅಧಿಕಾರ ವರ್ಗಾವಣೆ ಆಗಬೇಕು. ಅಧ್ಯಕ್ಷರ ಆಡಳಿತಾವಧಿ 5 ವರ್ಷ ಇರುವುದು ಅಗತ್ಯವಿಲ್ಲ. ಕಡಿತಗೊಳಿಸಬೇಕು. ಅದನ್ನು ಹೆಚ್ಚಿಸಿಕೊಳ್ಳುವ ಅಡ್ಡ ಹಾದಿಯ 'ಅಕ್ರಮ' ಪ್ರಯತ್ನಗಳನ್ನು ಬಿಡಬೇಕು. ಸರ್ಕಾರದ ಹಣ, ಸವಲತ್ತುಗಳಿಗೆ ಜೋತು ಬೀಳುವುದು ನಿಲ್ಲಬೇಕು.

ಎಲ್ಲಕ್ಕಿಂತ ಮುಖ್ಯವಾಗಿ ಕನ್ನಡ ಸಾಹಿತ್ಯ ಪರಿಷತ್ತಿನ ಸ್ವಾಯತ್ತತೆಯನ್ನು ಕಾಪಾಡಿ, ಪರಿಷತ್ತು ನಾಡಿನ ಸಾಹಿತ್ಯ–ಸಾಂಸ್ಕೃತಿಕ ಪ್ರಗತಿಗೆ ಜನಪರವಾಗಿ ವರ್ತಮಾನದ ಸವಾಲುಗಳನ್ನು ಎದುರಿಸಲು ಪೂರಕವಾಗಿ ಅರ್ಥಪೂರ್ಣವಾದ ಸಾಹಿತ್ಯಿಕ ಸಂಶೋಧನೆ–ಪ್ರಕಟಣೆ–ಪ್ರಸಾರ–ವಿಚಾರ–ಪ್ರಚಾರ ಮುಂತಾದ ಯೋಜನೆಗಳನ್ನು ಹಮ್ಮಿಕೊಳ್ಳಬೇಕು. ಸಾಹಿತ್ಯ ಸಮ್ಮೇಳನಗಳನ್ನು ಅರ್ಥಪೂರ್ಣಗೊಳಿಸಬೇಕು. ಸಾಹಿತ್ಯ ಒಂದು ಜನಾಂದೋಲನವಾಗಬೇಕು. ಕರ್ನಾಟಕದ ಪ್ರಗತಿಗೆ ಕಂಟಕವಾಗಿರುವ, ಜನರ ಬದುಕಿನ ಬವಣೆಗಳಿಗೆ ಕಾರಣವಾಗಿರುವ ಅಂಶಗಳ ಮೇಲೆ ಬೆಳಕನ್ನು ಚೆಲ್ಲಿ, ಪರಿಹಾರದ ದಾರಿಗಳನ್ನು ಶೋಧಿಸುವ ನಿಟ್ಟಿನಲ್ಲಿ ಸಾಹಿತ್ಯವು ಒಂದು ಸಾಧನವಾಗಿ ಕೆಲಸ ಮಾಡುವಂತಾಗಬೇಕು.

ಜೋಷಿಯವರು, ಜೋಷಿಯವರ ಬೆನ್ನು ಕಟ್ಟಿರುವ ಸಿದ್ಧಾಂತಿಗಳು ಈ ಕೆಲಸವನ್ನು ಮಾಡಲು ಖಂಡಿತ ತಯಾರಿಲ್ಲ ಎನ್ನುವುದು ಸ್ಪಷ್ಟ. ಅವರು ಎಲ್ಲಿಂದ ಮಾರ್ಗದರ್ಶನ ಪಡೆಯುತ್ತಾರೆ ಎಂಬುದೂ ಸ್ಪಷ್ಟ. ಜೋಷಿಯವರನ್ನು ಗೆಲ್ಲಿಸಲು ಸಂಘಪರಿವಾರ, ಬಿಜೆಪಿ ಪಕ್ಷದ ಕಾರ್ಯಕರ್ತರು, ರಾಜ್ಯದ ಜಾತಿವಾದಿ–ಕೋಮುವಾದಿ ಮಠಾಧೀಶರುಗಳು ಹೇಗೆ ಟೊಂಕಕಟ್ಟಿ ಕೆಲಸ ಮಾಡಿದರು ಎಂಬುದನ್ನು ಪ್ರಜ್ಞಾವಂತರು ಬಲ್ಲರು. ಇಂದು ಭಾರತದ ಒಕ್ಕೂಟದ ಸ್ವರೂಪದ ಮೇಲೆ ಸರ್ವಾಧಿಕಾರತ್ವದ ದಾಳಿ ನಡೆಯುತ್ತಿದೆ. ಒಂದು ದೇಶ, ಒಂದು ಭಾಷೆ ಎನ್ನುವ ವಾದದ ಮೂಲಕ ಕನ್ನಡ, ತಮಿಳು ಮುಂತಾದ ಭಾರತದ ಪ್ರಾದೇಶಿಕ ಭಾಷೆ, ಸಂಸ್ಕೃತಿಯ ಮೇಲೆ ಏಕ ಭಾಷೆ, ಸಂಸ್ಕೃತಿಯ ಏಕಸ್ವಾಮ್ಯ ಸ್ಥಾಪಿಸಲು ಕೇಂದ್ರ ಸರ್ಕಾರವೇ ಎಲ್ಲ ಮಗ್ಗಲುಗಳಿಂದ ದಾಳಿ ನಡೆಸುತ್ತಿದೆ. ಕಸಾಪ ದಂತಹ ಸಂಸ್ಥೆ ಇದನ್ನು ಎದುರಿಸುವುದು ಈ ಕ್ಷಣದ ಕರ್ತವ್ಯ. ಇಂತಹವೆಲ್ಲಾ ಸ್ವಾಯತ್ತ ಸಂಸ್ಥೆಗಳನ್ನು ಕೈ ವಶ ಮಾಡಿಕೊಂಡು ನಿರ್ಜೀವಗೊಳಿಸುವ ಹುನ್ನಾರ ಇಲ್ಲದಿಲ್ಲ.

ಹೀಗಾಗಿ ನಾಡಿನ ಪ್ರಜ್ಞಾವಂತರ ಮುಂದಿರುವ ದಾರಿಯೆಂದರೆ ಪ್ರಖರ ಜನಜಾಗೃತಿ ಮತ್ತು ತೀವ್ರ ಜನಾಂದೋಲನ. ಅದೊಂದೇ ಸಾಹಿತ್ಯ ಪರಿಷತ್‌ನಂತಹ ಒಂದು ಕರ್ನಾಟಕದ ಜನರ ಪ್ರಾತಿನಿಧಿಕ ಸಂಸ್ಥೆಯನ್ನು ಜನಪರತೆಯ ಹಳಿಯ ಮೇಲೆ ತರಬಲ್ಲುದು.

'ಪಹಲ್ಗಾಮ್ ಹತ್ಯಾಕಾಂಡ'– ಸಿಪಿಐ(ಎಂ) ಬಲವಾದ ಖಂಡನೆ

ಜಮ್ಮು ಮತ್ತು ಕಾಶ್ಮೀರದಲ್ಲಿ ಭಯೋತ್ಪಾದಕರಿಂದ 28 ಪ್ರವಾಸಿಗರ ಬರ್ಬರ ಹತ್ಯೆಯನ್ನು ಸಿಪಿಐ(ಎಂ) ಪೊಲಿಟ್‌ಬ್ಯುರೊ ಬಲವಾಗಿ ಖಂಡಿಸಿದೆ. ಈ ದಾಳಿಯಲ್ಲಿ ಪ್ರಾಣ ಕಳೆದುಕೊಂಡಿರುವ ಅಮಾಯಕ ಜನಗಳ ಕುಟುಂಬಗಳಿಗೆ ಅದು ಆಳವಾದ ಸಂತಾಪಗಳನ್ನು ವ್ಯಕ್ತಪಡಿಸಿದೆ. ಈ ದಾಳಿಯಲ್ಲಿ ಹಲವಾರು ಮಂದಿ ಗಾಯಗೊಂಡಿದ್ದಾರೆ. ಅವರೆಲ್ಲರೂ ಶೀಘ್ರವಾಗಿ ಗುಣಮುಖರಾಗಲಿ ಎಂದು ಅದು ಹಾರೈಸಿದೆ.

ಈ ಭೀಕರ ಅಪರಾಧ ಎಸಗಿದವರನ್ನು ಪತ್ತೆ ಹಚ್ಚಿ ಶಿಕ್ಷಿಸಬೇಕು ಎಂದಿರುವ ಸಿಪಿಐ(ಎಂ), ಪೊಲೀಸ್ ಮತ್ತು ಭದ್ರತಾ ಪಡೆಗಳು ಕೇಂದ್ರ ಸರಕಾರದ ಅಡಿಯಲ್ಲಿ ಇರುವುದರಿಂದ, ಅದು ಈ ಖೂಳ ಕೃತ್ಯಕ್ಕೆ ಹೊಣೆಗಾರರಾಗಿರುವ ಶಕ್ತಿಗಳನ್ನು ಶಿಕ್ಷಿಸಲು ಕೈಲಾದ್ದನ್ನೆಲ್ಲವನ್ನೂ ಮಾಡಬೇಕು ಎಂದು ಆಗ್ರಹಿಸಿದೆ. ಈ ಅಪರಾಧವನ್ನು ಎಸಗಿದವರು ದೇಶದ ಶತ್ರುಗಳು, ಅದಕ್ಕಿಂತಲೂ ಹೆಚ್ಚಾಗಿ ಕಾಶ್ಮೀರದ ಜನತೆಯ ಶತ್ರುಗಳು. ಕೇಂದ್ರ ಸರಕಾರ ದಾಳಿಯ ಬಗ್ಗೆ ಎಲ್ಲಾ ಕೋನಗಳಿಂದಲೂ, ಜನನಿಬಿಡ ಪ್ರವಾಸಿ ತಾಣಗಳಲ್ಲಿ ಭದ್ರತೆಯ ಕೊರತೆಯನ್ನೂ ತನಿಖೆಗೆ ಒಳಪಡಿಸಬೇಕಾಗಿದೆ ಎಂದಿರುವ ಪೊಲಿಟ್‌ಬ್ಯುರೊ ಈ ದುರಂತದ ಸಮಯದಲ್ಲಿ ಉಗ್ರಗಾಮಿ ಮೂಲಭೂತವಾದಿ ಶಕ್ತಿಗಳ ವಿರುದ್ಧ ಸಿಪಿಐ(ಎಂ) ಭಾರತದ ಜನತೆಯೊಂದಿಗೆ ಒಂದಾಗಿ ನಿಲ್ಲುತ್ತದೆ ಎಂದು ಹೇಳಿದೆ.

ವಿಭಜನಕಾರೀ ನಡೆಗಳನ್ನು ತಡೆಗಟ್ಟಬೇಕು

ಜನಗಳ ನಡುವೆ ಬೆಸೆದಿರುವ ಐಕ್ಯತೆಯನ್ನು ಮುರಿಯಲು ಮತ್ತು ಛಿದ್ರಗೊಳಿಸಲು ಪ್ರಯತ್ನಿಸುವವರರ ವಿರುದ್ಧ ದೃಢ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಎಪ್ರಿಲ್ 25ರಂದು ನೀಡಿರುವ ಹೇಳಿಕೆಯಲ್ಲಿ ಸಿಪಿಐ(ಎಂ) ಪೊಲಿಟ್‌ಬ್ಯುರೊ ಆಗ್ರಹಿಸಿದೆ.

ಪಹಲ್ಗಾಮ್‌ನಲ್ಲಿ ನಡೆದ ಭೀಕರ ಭಯೋತ್ಪಾದಕ ದಾಳಿಯ ವಿರುದ್ಧ ಇಡೀ ದೇಶವೇ ಒಗ್ಗಟ್ಟಿನಿಂದ ಧ್ವನಿಯೆತ್ತಿರುವ ಸಮಯದಲ್ಲಿ, ಉತ್ತರಾಖಂಡ, ಉತ್ತರ ಪ್ರದೇಶ, ಮಹಾರಾಷ್ಟ್ರ ಸೇರಿದಂತೆ ವಿವಿಧ ರಾಜ್ಯಗಳಲ್ಲಿ ಜಮ್ಮು ಮತ್ತು ಕಾಶ್ಮೀರಕ್ಕೆ ಸೇರಿದ ವಿದ್ಯಾರ್ಥಿಗಳು ಮತ್ತು ವ್ಯಾಪಾರಿಗಳ ಮೇಲೆ ಬೆದರಿಕೆ ಮತ್ತು ಕಿರುಕುಳಗಳು ನಡೆದಿರುವ ವರದಿಗಳಿವೆ. ಡೆಹ್ರಾಡೂನ್‌ನಲ್ಲಿ, ಒಂದು ಕೋಮುವಾದಿ ಸಂಘಟನೆಯ ಬೆದರಿಕೆ ಮತ್ತು ಅಂತಿಮ ಗಡುವು ವಿಧಿಸಿರುವುದರಿಂದಾಗಿ, ಅನೇಕ ಕಾಶ್ಮೀರಿ ವಿದ್ಯಾರ್ಥಿಗಳು ತಮ್ಮ ಮನೆಗಳಿಗೆ ತೆರಳಿದ್ದಾರೆ.

ಕಾಶ್ಮೀರಿಗಳು ಮತ್ತು ಅಲ್ಪಸಂಖ್ಯಾತ ಸಮುದಾಯವನ್ನು ಗುರಿಯಾಗಿಸಿಕೊಂಡು ಸಾಮಾಜಿಕ ಮಾಧ್ಯಮಗಳಲ್ಲಿ ಒಂದು ದುಷ್ಟ ಅಭಿಯಾನವೂ ನಡೆಯುತ್ತಿದೆ. ಕಾಶ್ಮೀರಿಗಳು ಹೇಗೆ ಏಕಕಂಠದಿಂದ ಭಯೋತ್ಪಾದಕ ಸಂಘಟನೆಯನ್ನು ಖಂಡಿಸಿದ್ದಾರೆ ಮತ್ತು ಪ್ರತಿಭಟಿಸಿದ್ದಾರೆ ಎಂಬುದನ್ನು ಇಡೀ ದೇಶ ನೋಡಿದೆ ಎಂದಿರುವ ಪೊಲಿಟ್‌ಬ್ಯುರೊ, ಈ ಚಟುವಟಿಕೆಗಳು ಭಯೋತ್ಪಾದಕರ ಕಾರ್ಯಸೂಚಿಗೆ ಸಹಾಯ ಮಾಡುತ್ತಿವೆಯಷ್ಟೇ. ಸಂಬಂಧಪಟ್ಟ ಅಧಿಕಾರಿಗಳು ಇಂತಹ ವಿಚ್ಛಿದ್ರಕಾರಿ ಚಟುವಟಿಕೆಗಳಲ್ಲಿ ತೊಡಗಿರುವವರ ವಿರುದ್ಧ ದೃಢವಾದ ಕ್ರಮಗಳನ್ನು ತೆಗೆದುಕೊಳ್ಳಬೇಕು. ಜನಗಳ ನಡುವೆ ಬೆಸೆದಿರುವ ಐಕ್ಯತೆಯನ್ನು ಮುರಿಯಲು ಮತ್ತು ಛಿದ್ರಗೊಳಿಸಲು ಪ್ರಯತ್ನಿಸುವವರಿಗೆ ಯಾವುದೇ ದಯೆ ತೋರಿಸಬಾರದು ಎಂದು ಆಗ್ರಹಿಸಿದೆ.

ಕೇವಲ ಪ್ರವಾಸಿಗರ ಮೇಲಿನ ದಾಳಿಯಲ್ಲ, ಬದಲಾಗಿ ಕಾಶ್ಮೀರಿ ಜನಮಾನಸದ ಮೇಲಿನ ಪ್ರಹಾರ–ತರಿಗಾಮಿ

"ಈ ದಾಳಿಯು ಕಾಶ್ಮೀರಿ ಜನಮಾನಸದ ಮೇಲೆಯೇ ನಡೆದಿರುವ ಮತ್ತು ಸಾವಿರಾರು ಜನರ, ಮುಖ್ಯವಾಗಿ ಪ್ರವಾಸೋದ್ಯಮ ವಲಯದಲ್ಲಿ ತೊಡಗಿಸಿಕೊಂಡವರ ಜೀವನೋಪಾಯದ ಮೇಲೆ ಮಾಡಿರುವ ಪ್ರಹಾರವಾಗಿದೆ. ಪ್ರವಾಸೋದ್ಯಮವು ಈ ಪ್ರದೇಶದಾದ್ಯಂತ ಪುನರುಜ್ಜೀವನಗೊಳ್ಳುತ್ತಾ, ಭರವಸೆ ಮತ್ತು ಈ ಪ್ರದೇಶದಾದ್ಯಂತ ಆರ್ಥಿಕ ಚಟುವಟಿಕೆಯನ್ನು ಉತ್ತೇಜಿಸಲಾರಂಭಿಸಿತ್ತು. ಇಂತಹ ಕೃತ್ಯವು ಕೇವಲ ಪ್ರವಾಸಿಗರ ಮೇಲಿನ ದಾಳಿಯಲ್ಲ, ಬದಲಾಗಿ ನಮ್ಮೆಲ್ಲರ ಮೇಲಿನ ದಾಳಿಯಾಗಿದೆ" ಎಂದು

ಪುಟ 7 ಕ್ಕೆ

ಕೃಷಿಯನ್ನು ಆವಿಷ್ಕರಿಸಿದ ಮಹಿಳೆ ಮತ್ತು ಆಕೆಯ ಇಂದಿನ ಸ್ಥಿತಿ

ಎಚ್.ಆರ್. ನವೀನ್ ಕುಮಾರ್, ಹಾಸನ



ಭಾರತ ಕೃಷಿ ಪ್ರಧಾನವಾದ ರಾಷ್ಟ್ರ. ಇಲ್ಲಿ ಶೇ. 50ರಷ್ಟು ಜನರು ಕೃಷಿಯನ್ನೇ ಅವಲಂಬಿಸಿ ಬದುಕುತ್ತಿದ್ದಾರೆ. ಮಾತ್ರವಲ್ಲ, ಕೃಷಿ ಕ್ಷೇತ್ರವು ದೇಶದ ಜಿಡಿಪಿಗೆ ಸರಿಸುಮಾರು ಶೇ.15ರಷ್ಟು ಕೊಡುಗೆ ನೀಡುತ್ತಿದೆ. ಅತ್ಯಂತ ದೊಡ್ಡ ಸಂಖ್ಯೆಯ ಉದ್ಯೋಗಾವಕಾಶಗಳನ್ನು ನೀಡುತ್ತಿರುವ ಕ್ಷೇತ್ರ ಕೃಷಿ. ಇದೆಲ್ಲದಕ್ಕೂ ಮುಖ್ಯವಾಗಿ ದೇಶದ ಆಹಾರ ಭದ್ರತೆಯನ್ನು ಕಾಪಾಡುವಲ್ಲಿ ಕೃಷಿ ಪ್ರಮುಖ ಪಾತ್ರ ವಹಿಸಿದೆ. ಇಂತಹ ಕೃಷಿ ಕ್ಷೇತ್ರ ಭಾರತದಲ್ಲಿ ಅತ್ಯಂತ ಬಿಕ್ಕಟ್ಟಿಗೆ ಒಳಗಾಗಿದೆ. ಇದರ ಪರಿಣಾಮವಾಗಿ ಇಡೀ ರೈತ ಸಮುದಾಯವು ಸಂಕಷ್ಟವನ್ನು ಎದುರಿಸುತ್ತಿದೆ. ರೈತ ಸಮುದಾಯದಲ್ಲಿನ ರೈತ ಮಹಿಳೆಯರು ಇನ್ನೂ ಹೆಚ್ಚಿನ ಸಂಕಷ್ಟಗಳನ್ನು ಅನುಭವಿಸುತ್ತಿದ್ದಾರೆ. ಇಂದಿನ ಕೃಷಿ ಕ್ಷೇತ್ರದ ಈ ಪರಿಸ್ಥಿತಿಯನ್ನು ಮಹಿಳಾ ದೃಷ್ಟಿಕೋನದಲ್ಲಿ ನೋಡುತ್ತಾ ಅರ್ಥ ಮಾಡಿಕೊಳ್ಳುವ ಪ್ರಯತ್ನ ಇಲ್ಲಿದೆ.

ಕೃಷಿಯ ಉತ್ಪಾದನಾ ಸಾಧನಗಳಾದ ಭೂಮಿ, ಯಂತ್ರೋಪಕರಣಗಳು, ರಾಸುಗಳು ಇಂದಿಗೂ ಪುರುಷನ ಹಿಡಿತದಲ್ಲಿಯೇ ಇವೆ. ಆದರೆ ಇತಿಹಾಸದ ಒಂದು ಸತ್ಯ ಸಂಗತಿ ಏನೆಂದರೆ, ಇಂದು ಕೃಷಿ ಕ್ಷೇತ್ರದಲ್ಲಿ ಯಾವ ಮಹಿಳೆಯರು ಅತ್ಯಂತ ಕಡೆಗಣಿಸಲ್ಪಟ್ಟಿದ್ದಾರೋ, ಅದೇ ಮಹಿಳೆಯರೇ ಆರಂಭದ ಕಾಲಘಟ್ಟದಲ್ಲಿ ಕೃಷಿಯನ್ನು ಆವಿಷ್ಕಾರ ಮಾಡಿದ್ದು ಎಂಬುದನ್ನು ಯಾರಿಂದಲೂ ಮುಚ್ಚಿಡಲು ಸಾಧ್ಯವಿಲ್ಲ. ಮಾನವ ಸಮಾಜದ ಬೆಳವಣಿಗೆಯ ವಿವಿಧ ಹಂತಗಳನ್ನು ವೈಜ್ಞಾನಿಕವಾಗಿ ಅಧ್ಯಯನ ಮಾಡಿರುವ ಕಾರ್ಲ್ ಮಾರ್ಕ್ಸ್ ಮತ್ತು ಫೆಡ್ರಿಕ್ ಏಂಗೆಲ್ಸ್ ರವರು, ಮಾನವನ ವಿಕಾಸದ ಹಂತದಲ್ಲಿ ಆದಿಮಾನವನಿಂದ ಆರಂಭಿಸಿ, ಬಂಡವಾಳಶಾಹಿ ಸಮಾಜದವರೆಗೆ ಮಾನವ ಸಮಾಜ ಹೇಗೆ ಬೆಳೆದು ಬಂದಿದೆ ಎಂಬುದನ್ನೂ, ಈ ಸಮಾಜ ಮುಂದೆ ಸಮಾಜವಾದಿ ಸಮಾಜದ ಕಡೆಗೆ ಹೇಗೆ ಬದಲಾಗುತ್ತದೆ ಎಂಬುದನ್ನೂ ಆಧಾರ ಸಮೇತವಾಗಿ ಮಂಡಿಸಿದ್ದಾರೆ. ಅವರ ಈ ವಿಚಾರವನ್ನೇ ಇಂದು "ಚಾರಿತ್ರಿಕ ಭೌತವಾದ" ಎಂಬ ಹೆಸರಿನಲ್ಲಿ ಕರೆಯುತ್ತೇವೆ.

ತಾರತಮ್ಯದ ನೆಲೆಬೀಡು

ಕೃಷಿ ಕ್ಷೇತ್ರದಲ್ಲಿ ಅತಿಹೆಚ್ಚು ಕೆಲಸ ಮಾಡುವವಳು ಮಹಿಳೆ. ರೈತ ಮಹಿಳೆ ಒಂದೆಡೆ ಕುಟುಂಬವೆಂಬ ಬಿಟ್ಟಿ ಚಾಕರಿ ಮಾಡುವುದರ ಜೊತೆಗೆ, ಕೃಷಿ ಚಟುವಟಿಕೆಗಳಲ್ಲಿ ತನ್ನನ್ನು ತಾನು ಸಂಪೂರ್ಣವಾಗಿ ತೊಡಗಿಸಿಕೊಂಡಿದ್ದಾಳೆ. ಹೊಲವನ್ನು ಹಸನು ಮಾಡುವುದು, ಬಿತ್ತುವುದು, ಕಳೆತೆಗೆಯುವುದು, ಕೊಯ್ಲು, ಸಂಸ್ಕರಣೆಯಂತಹ ಎಲ್ಲ ಕೆಲಸಗಳಲ್ಲೂ ಮಹಿಳೆಯರ ಪಾತ್ರ ದೊಡ್ಡದಿದೆ. ಆದರೂ ಈ ಸಮಾಜದಲ್ಲಿ ಮಹಿಳೆಗೆ ಮಾತ್ರ ಎರಡನೇ ದರ್ಜೆಯ ಸ್ಥಾನ. ಬೇರೆ ಕ್ಷೇತ್ರದಲ್ಲಿರುವಂತೆ ಇಲ್ಲಿಯೂ ಪುರುಷನಿಗೆ ಸಿಗುವಷ್ಟು ಕೂಲಿ ಮಹಿಳೆಗೆ ಸಿಗುವುದಿಲ್ಲ. ಉದಾಹಣೆಗೆ ಕೃಷಿ ಕೆಲಸಗಳಲ್ಲಿ ತೊಡಗುವ ಕೂಲಿಕಾರ ಪುರುಷನಿಗೆ ಒಂದು ದಿನಕ್ಕೆ 500 ರೂಪಾಯಿ ಕೂಲಿ ನೀಡಿದರೆ, ಪುರುಷರಷ್ಟೇ ಸಮಯ ಮತ್ತು ಪುರುಷರಷ್ಟೇ ಪ್ರಮಾಣದಲ್ಲಿ ಕೆಲಸ ಮಾಡಿದರೂ ಮಹಿಳಾ ಕೂಲಿಕಾರರಿಗೆ ದಿನಕ್ಕೆ 350 ರೂಪಾಯಿ ಕೂಲಿ. ಮಹಿಳೆ ಮತ್ತು ಪುರುಷನ ನಡುವಿನ ಈ ತಾರತಮ್ಯ ಕೇವಲ ಕೂಲಿಯ ವಿಚಾರದಲ್ಲಿ ಮಾತ್ರವಲ್ಲದೆ, ಎಲ್ಲಾ ಕ್ಷೇತ್ರಗಳಲ್ಲಿ ಮತ್ತು ಎಲ್ಲಾ ವಿಭಾಗಗಳಲ್ಲಿಯೂ ಇವೆ. ನಾವು ಇಂದು ಬದುಕುತ್ತಿರುವ ಪಾಳೇಗಾರಿ, ಬಂಡವಾಳಶಾಹಿ ಸಮಾಜದಲ್ಲಿ ಮಹಿಳೆಯರಿಗೆ ಸಮಾನ ಅವಕಾಶಗಳಾಗಲಿ, ಸಮಾನ ಸ್ಥಾನಮಾನಗಳಾಗಲಿ ಇಲ್ಲ. ಎಲ್ಲಾ ಕ್ಷೇತ್ರಗಳಲ್ಲೂ ಆಕೆಯನ್ನು ಪುರುಷನಿಗಿಂತ ಕೀಳಾಗಿ ನಡೆಸಿಕೊಳ್ಳುವ ವ್ಯವಸ್ಥಿತ ಪಿತೂರಿಗಳನ್ನು ಹಿಂದಿನಿಂದಲೂ ಉಳಿಸಿಕೊಂಡು, ಬೆಳಸಿಕೊಂಡು ಬರಲಾಗಿದೆ.

ಆದಿಮ ಸಮತಾವಾದಿ ಸಮಾಜ

ಮನುಷ್ಯ ವಿಕಾಸಗೊಳ್ಳುತ್ತ, ಪ್ರಾಣಿಗಳ ರೂಪದಿಂದ ರೂಪಾಂತರಗೊಂಡು ಮನುಷ್ಯನ ಹಂತಕ್ಕೆ ಬೆಳವಣಿಗೆಯಾದ ಕಾಲಘಟ್ಟವನ್ನು (ಮಂಗನಿಂದ ಮಾನವ) "ಆದಿಮ ಸಮತಾವಾದಿ ಸಮಾಜ" ಎಂದು ಕರೆಯಲಾಗುತ್ತದೆ. ಈ ಆದಿಮ ಸಮತಾವಾದಿ ಸಮಾಜದಲ್ಲಿ ಮನುಷ್ಯ ಆಗತಾನೆ ನಾಲ್ಕು ಕಾಲುಗಳ ಬದಲಿಗೆ ಎರಡು ಕಾಲುಗಳಲ್ಲಿ ನಡೆಯುವುದನ್ನು, ಬೆನ್ನುಮೂಳೆಯನ್ನು ನೆಟ್ಟಗೆ ಮಾಡಿ ನಿಲ್ಲುವುದನ್ನು, ತನ್ನ ಕೈಗಳನ್ನು ಕಾಲುಗಳಿಗಿಂತ ವಿಭಿನ್ನವಾಗಿ ಬಳಕೆ ಮಾಡುವುದನ್ನು ಆರಂಭಿಸಿದ. ಆ ಸಂದರ್ಭದಲ್ಲಿ ಕ್ರಮೇಣ ಮನುಷ್ಯನ ಮೆದುಳು ಬೆಳವಣಿಗೆಯಾಗಲು ಆರಂಭಿಸಿತು. ಅಲೆಮಾರಿಗಳಾಗಿ ವಾಸಿಸುತ್ತಿದ್ದ ಆದಿಮಾನವ, ಆಹಾರಕ್ಕಾಗಿ ಕಾಡುಗಳಲ್ಲಿ ಸಿಕ್ಕ ಹಣ್ಣು ಹಂಪಲುಗಳನ್ನು ತಿನ್ನುತ್ತಾ, ಪ್ರಾಣಿಗಳನ್ನು ಭೇಟೆಯಾಡುತ್ತಾ, ಸಿಕ್ಕಿದ್ದನ್ನೆಲ್ಲಾ ಸಮಾನವಾಗಿ ಎಲ್ಲರೂ ಹಂಚಿ ತಿನ್ನುವ ವ್ಯವಸ್ಥೆಯನ್ನು ರೂಪಿಸಿಕೊಂಡಿದ್ದ. ಅವರು ಒಟ್ಟಿಗೆ ಬದುಕುತ್ತಿದ್ದರು, ಈ ಹಂತದಲ್ಲಿ ಖಾಸಗಿ ಆಸ್ತಿಯ ಪರಿಕಲ್ಪನೆಯಾಗಲಿ, ಜಾತಿ ಧರ್ಮಗಳ ಪರಿಕಲ್ಪನೆಯಾಗಲಿ, ಕುಟುಂಬದ ಪರಿಕಲ್ಪನೆಯಾಗಲಿ ಇರಲಿಲ್ಲ. ಎಲ್ಲವೂ ಅತ್ಯಂತ ಸ್ವಚ್ಚಂದವಾಗಿ ಮತ್ತು ಮುಕ್ತವಾಗಿ ನಡೆಯುತ್ತಿದ್ದವು.

ಅಲೆಮಾರಿಗಳಾಗಿದ್ದವರು ಒಂದು ಕಡೆ ನೆಲೆಯೂರಲು ಆರಂಭಿಸಿದರು

ಇಂತಹ ಸಂದರ್ಭದಲ್ಲಿ ಪ್ರಾಕೃತಿಕವಾಗಿ ಪುರುಷನಿಗಿಂತ ತನ್ನ ದೈಹಿಕ ಸಂರಚನೆಯಲ್ಲಿ ವಿಭಿನ್ನವಾಗಿದ್ದ ಮಹಿಳೆಯರಿಗೆ ಮಕ್ಕಳನ್ನು ಹೆರುವ ಒಂದು ವಿಶೇಷತೆ ಇತ್ತು. ಆಹಾರವನ್ನು ಅರಸುತ್ತಾ ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ವಲಸೆ ಹೋಗುವ ಸಂದರ್ಭದಲ್ಲಿ ಗರ್ಭಿಣಿ ಮಹಿಳೆಯರನ್ನು, ಮಕ್ಕಳಿಗೆ ಜನ್ಮನೀಡಿದ ಬಾಣಂತಿಯರನ್ನು ಮತ್ತು ಆ ಎಳೆಯ ಕಂದಮ್ಮಗಳನ್ನು ಜೊತೆಯಲ್ಲಿ ಕರೆದುಕೊಂಡು ಭೇಟೆಗೆ ಹೋಗುವುದು ಕಷ್ಟಸಾಧ್ಯ. ಇಂತಹ ಸಂದರ್ಭದಲ್ಲಿ ಕಾಡು ಪ್ರಾಣಿಗಳ ದಾಳಿಗಳನ್ನು ಎದುರಿಸುವುದು ಕಷ್ಟ ಎಂದು ಕ್ರಮೇಣ ಅರಿತುಕೊಂಡ ಆದಿ ಮಾನವ, ಮಕ್ಕಳ ಪೋಷಣೆಗೆಂದು ಒಂದೆಡೆ ಮಹಿಳೆಯರನ್ನು ನೆಲೆ ನಿಲ್ಲಿಸಲು ಆರಂಭಿಸಿದ. ಕಾಡುಗಳಲ್ಲಿ ಗುಹೆಗಳಲ್ಲಿ, ಮರದ ಪೊಟರೆಗಳಲ್ಲಿ ಮಹಿಳೆಯರನ್ನು, ಎಳೆಯ ಮಕ್ಕಳನ್ನು ಒಂದೆಡೆ ಇರಿಸಿ, ಉಳಿದವರೆಲ್ಲಾ ಆಹಾರ ಅರಸುತ್ತಾ ಭೇಟೆ ಮಾಡಲು ಹೋಗುತ್ತಿದ್ದರು. ಮತ್ತೆ ಮಹಿಳೆಯರಿರುವ ಸ್ಥಳಗಳಿಗೆ ಹಿಂತಿರುಗಿ ಬರುತ್ತಿದ್ದರು. ಅಲೆಮಾರಿಗಳಾಗಿ ಒಂದು ಕಡೆಯಿಂದ ಮತ್ತೊಂದು ಕಡೆಗೆ ಸುತ್ತಾಡುತ್ತಿದ್ದ ಮನುಷ್ಯ ಈ ಹಿನ್ನೆಲೆಯಲ್ಲಿ ಒಂದು ಕಡೆ ನೆಲೆಯೂರಲು ಆರಂಭಿಸಿದ.

ಕೃಷಿಯನ್ನು ಕಂಡುಕೊಂಡ ಕಾಲಘಟ್ಟ

ಈ ಪ್ರಕ್ರಿಯೆಯಲ್ಲಿ ಕಾಡುಗಳಲ್ಲಿ ಹುಡುಕಿಕೊಂಡು ತರುತ್ತಿದ್ದ ಹಣ್ಣುಗಳಲ್ಲಿ ಸಿಗುವ ಬೀಜದಂತಹ ಗಟ್ಟಿ ಪದಾರ್ಥಗಳನ್ನು ತಿನ್ನದೆ ಬಿಸಾಡುತ್ತಿದ್ದರು. ಆ ಬೀಜಗಳು ಕ್ರಮೇಣ ಮಣ್ಣಿನಲ್ಲಿ ಬೆರೆತು, ಮೊಳಕೆಯೊಡೆದು ಗಿಡವಾಗಿ, ಆ ಗಿಡ ಎಂದೋ ಒಂದು ದಿನ ತಿಂದಿದ್ದ ಹಣ್ಣಿನ ರೀತಿಯ ತದ್ರೂಪಿ ಹಣ್ಣನ್ನು ನೀಡಿತು. ಒಂದು ಕಡೆ ನೆಲೆ ನಿಂತಿದ್ದ ಮಹಿಳೆ ಇದನ್ನೆಲ್ಲಾ ಸೂಕ್ಷ್ಮವಾಗಿ ಗಮನಿಸಿ, ಬೀಜಗಳನ್ನು ಭೂಮಿಗೆ ಬಿತ್ತಿದರೆ ಅದರಿಂದ ಹಣ್ಣುಗಳನ್ನು ಬೆಳೆಯಬಹುದು ಎಂಬುದನ್ನು ಕಂಡುಕೊಂಡಳು. ಇದೇ ಇಡೀ ಮಾನವ ಕುಲದ ಬೆಳವಣಿಗೆಯ ವೇಗವನ್ನು ಹೆಚ್ಚಿಸಿದ, ಮನುಷ್ಯನನ್ನು ಒಂದು ಕಡೆ ಶಾಶ್ವತವಾಗಿ ನೆಲೆ ನಿಲ್ಲುವಂತೆ ಮಾಡಿದ ಮತ್ತು ಕೃಷಿಯನ್ನು ಕಂಡುಕೊಂಡ ಕಾಲಘಟ್ಟ.

ಎರಡನೇ ಹಂತ, ಗುಲಾಮಗಿರಿ ಸಮಾಜ

ಮೂಲದಲ್ಲಿ ಕೃಷಿಯನ್ನು ಮಹಿಳೆಯೇ ಕಂಡುಹಿಡಿದಿದ್ದರೂ, ಆ ಕಾಲದಲ್ಲಿ ಮಹಿಳಾ ಪ್ರಧಾನವಾದ ಬುಡಕಟ್ಟುಗಳಿದ್ದರೂ, ನಂತರದ ಕಾಲಘಟ್ಟದಲ್ಲಿ ಮಹಿಳೆಯರನ್ನು ಸಮಾಜದ ಮುಖ್ಯವಾಹಿನಿಯಿಂದ ಹಿಂದೆ ಸರಿಸಿದ್ದರ ಹುನ್ನಾರಗಳ ಬಗ್ಗೆ ಸ್ವಲ್ಪ ತಿಳಿದುಕೊಳ್ಳಲು ಪ್ರಯತ್ನಿಸಿಸೋಣ.

ಕಾಡುಗಳಲ್ಲಿ ಭೇಟೆಗೆಂದು ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಹೋಗುವ ಸಂದರ್ಭದಲ್ಲಿ, ಅಲ್ಲಿದ್ದವರು ಮತ್ತು ಮತ್ತೊಂದು ಪ್ರದೇಶದಿಂದ ಬಂದವರ ನಡುವೆ ಸಂಘರ್ಷಗಳು ಏರ್ಪಡುತ್ತಿದ್ದವು. ಇದರಲ್ಲಿ ಸಂಖ್ಯೆ ಹೆಚ್ಚಿದ್ದವರು ಮತ್ತು ದೈಹಿಕವಾಗಿ ಬಲಶಾಲಿಗಳಾಗಿದ್ದವರು ಜಯಿಸುತ್ತಿದ್ದರು. ಹಲವರು ಈ ಸಂಘರ್ಷದಲ್ಲಿ ಸಾಯುತ್ತಿದ್ದರು. ಸೋತು ಬದುಕುಳಿದವರನ್ನು ಸೆರೆಹಿಡಿದು ಕರೆದುಕೊಂಡು ಬಂದು, ತಮ್ಮ ಗುಲಾಮರನ್ನಾಗಿ ಮಾಡಿಕೊಳ್ಳಲಾರಂಭಿಸಿದರು. ಇವರಿಂದ ಬಿಟ್ಟಿಯಾಗಿ ದುಡಿಸಿಕೊಳ್ಳುವುದು ಮಾತ್ರವಲ್ಲ, ಇವರಿಗೆ ಯಾವುದೇ ರೀತಿಯ ಸ್ವಾತಂತ್ರ್ಯ ಮತ್ತು ಹಕ್ಕುಗಳು ಇರಲಿಲ್ಲ. ಇವರು ತಮ್ಮ ಒಡೆಯರ ಗುಲಾಮರಾಗಿದ್ದರು. ಇದನ್ನೇ ಮಾನವ ಸಮಾಜದ ಬೆಳವಣಿಗೆಯ ಎರಡನೇ ಹಂತ ಗುಲಾಮಗಿರಿ ಸಮಾಜ ಎಂದು ಗುರುತಿಸಲಾಗುತ್ತದೆ.

ಮಹಿಳೆ ಮತ್ತು ತಾರತಮ್ಯ ವ್ಯವಸ್ಥೆ

ಗುಲಾಮಗಿರಿ ವ್ಯವಸ್ಥೆಯಲ್ಲಿ ಗುಲಾಮರನ್ನು ಹಗ್ಗ, ಸರಪಳಿಗಳಿಂದ ಬಂಧಿಸಿ ದುಡಿಸಿಕೊಳ್ಳಲಾಗುತ್ತಿತ್ತು, ಮಾತ್ರವಲ್ಲ ಅವರನ್ನು ಪ್ರಾಣಿಗಳ ರೀತಿಯಲ್ಲಿ ಮಾರಾಟ ಮಾಡಲಾಗುತ್ತಿತ್ತು. ಇಂತಹ ಸ್ಥಿತಿಯಲ್ಲಿರುವ ಗುಲಾಮರನ್ನು ಕೇವಲ ದೈಹಿಕ ಬಂಧನದಲ್ಲೇ ಹೆಚ್ಚು ಕಾಲ ಬಂಧಿಸಿಡುವುದು ಕಷ್ಟವೆಂದು ಅರಿವಿಗೆ ಬಂದಮೇಲೆ, ಅವರನ್ನು ಮಾನಸಿಕವಾಗಿ ಧರ್ಮ, ದೇವರು ಇನ್ನಿತರೆ ಕಟ್ಟಳೆಗಳಿಂದ ಶಾಶ್ವತವಾಗಿ ಬಂಧಿಸುವ ವ್ಯವಸ್ಥಿತ ಕೆಲಸವನ್ನು ಅಂದಿನ ಆಳುವ ವರ್ಗ ಮಾಡಿತು. ಈ ಸಂದರ್ಭದಲ್ಲೇ ಮಹಿಳೆಯರನ್ನು ಕೇವಲ ಸಂತಾನೋತ್ಪತ್ತಿಗೆ ಮತ್ತು ಮನೆ ಕೆಲಸಗಳಿಗೆ ಮಾತ್ರ ಸೀಮಿತಗೊಳಿಸಲಾಯಿತು. ಇದು ಕ್ರಮೇಣ ಮುಂದುವರೆದು ಕೃಷಿಯನ್ನು ಕಂಡುಹಿಡಿದ ಮಹಿಳೆಗೆ ಇಂದು ಕೃಷಿಯ ಉತ್ಪಾದನಾ ಸಾಧನಗಳ ಮೇಲೆ ಯಾವ ಹಿಡಿತವೂ ಇಲ್ಲದಂತಹ ಸ್ಥಿತಿ ನಿರ್ಮಾಣವಾಗಿದೆ. ಮಹಿಳೆಯರನ್ನು ಅಸಮಾನತೆಯಿಂದ ಕಾಣುವ ಮತ್ತು ಆಕೆಯ ಸ್ವಾತಂತ್ರ್ಯವನ್ನು ಸಂಪೂರ್ಣ ಕಡಿತಗೊಳಿಸುವ ವ್ಯವಸ್ಥೆಯು ಗುಲಾಮಿ ಸಮಾಜದ ಮುಂದಿನ ಹಂತವಾದ ಪಾಳೇಗಾರಿ ಅಥವಾ ಭೂಮಾಲಕ ಸಮಾಜದಲ್ಲಿ ವ್ಯಾಪಕವಾಗಿ ಮುಂದುವರೆಯಿತು.

ಮುಂದುವರೆದ ಮಹಿಳಾ ತಾರತಮ್ಯ

ಮಹಿಳೆಗೆ ಭೂಮಿಯ ಮೇಲಿನ ಹಕ್ಕನ್ನು ನಿರಾಕರಿಸಿ ಆಕೆಯನ್ನು ಆಸ್ತಿ ವಂಚಿತಳನ್ನಾಗಿ ಮಾಡುವ ಮೂಲಕ, ಮಹಿಳೆ ಅಸಹಾಯಕಳಂತೆ ಮತ್ತು ಮಹಿಳೆ ಶಾಶ್ವತವಾಗಿ ಪುರುಷನಿಗೆ ಅವಲಂಭಿತಳಾಗುವಂತಹ ಒಂದು ವ್ಯವಸ್ಥೆಯನ್ನು ನಿರ್ಮಾಣಮಾಡಲಾಯಿತು. (ಮನುಸ್ಮೃತಿಯ ಪ್ರಕಾರ ಮಹಿಳೆಗೆ ಯಾವುದೇ ಸ್ವತಂತ್ರ ಅಸ್ತಿತ್ವ ಇಲ್ಲ. ಆಕೆ ಹುಟ್ಟಿನಿಂದ ತಂದೆಯ ಆಶ್ರಯದಲ್ಲಿಯೂ, ಮದುವೆಯಾದಾಗ ಗಂಡನ ಆಶ್ರಯದಲ್ಲಿಯೂ, ವೃದ್ಧಾಪ್ಯದಲ್ಲಿ ಗಂಡು ಮಕ್ಕಳ ಆಶ್ರಯದಲ್ಲಿಯೂ ಬದುಕಬೇಕು.) ಇದರಿಂದಾಗಿ ಆಸ್ತಿ ಪುರುಷನ ಕೈಯಲ್ಲಿದ್ದರೆ, ಅದು ಮುಂದುವರೆದು ಗಂಡು ಮಕ್ಕಳಿಗೆ ಅದರ ಹಕ್ಕು ವರ್ಗಾವಣೆಯಾಗುತ್ತಿತ್ತು. ಗುಲಾಮಗಿರಿ ಸಮಾಜದಿಂದ, ಆ ನಂತರದ ಸಮಾಜದಲ್ಲಿ ಮಹಿಳೆಯರಿಗೆ ಭೂಮಿಯ ಮೇಲಿನ ಹಕ್ಕನ್ನು ಸಂಪೂರ್ಣವಾಗಿ ಕಸಿದುಕೊಳ್ಳಲಾಯಿತು.

ಇಂದಿನ ಪುರುಷ ಪ್ರಧಾನ ಸಮಾಜದಲ್ಲಿ

ನಾವು ಇಂದು ಜೀವಿಸುತ್ತಿರುವ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿನ ಸಂವಿಧಾನದಲ್ಲಿ ಮಹಿಳೆಗೆ ಸಮಾನ ಹಕ್ಕು ಮತ್ತು ಅವಕಾಶಗಳನ್ನು ಕಲ್ಪಿಸಿದ್ದರೂ, ವಾಸ್ತವಿಕವಾಗಿ ಜಾರಿಯಲ್ಲಿರುವ ಈ ಪಾಳೇಗಾರಿ ಬಂಡವಾಳಶಾಹಿ ಮೌಲ್ಯಗಳ ಸಮ್ಮಿಶ್ರಣದ ಪುರುಷ ಪ್ರಧಾನ ಸಮಾಜದಲ್ಲಿ ಮಹಿಳೆಗೆ ಯಾವ ಆಸ್ತಿಯ ಹಕ್ಕು ಇಲ್ಲ. ಬದಲಾಗಿ ಆಕೆ ಮಾಡುವ ಬಹುತೇಕ ಕೆಲಸಗಳು ಯಾವ ಪರಿಗಣನೆಗೂ ಸಿಗುವುದಿಲ್ಲ. ಉದಾಹರಣೆಗೆ ಮಕ್ಕಳನ್ನು ಹೆರುವುದು, ಲಾಲನೆ, ಪೋಷಣೆ, ಕುಟುಂಬ ನಿರ್ವಹಣೆಯಂತಹ ಅತ್ಯಂತ ಮಹತ್ವದ ಕಾರ್ಯದಲ್ಲಿ ಮಹಿಳೆ ತೊಡಗಿದ್ದರೂ, ಈ ಕೆಲಸಗಳು ಸಮಾಜದಲ್ಲಿ ಗುರುತಿಸುವ ಅಥವಾ ಅದಕ್ಕಾಗಿ ಆಕೆಗೆ ಸಮಾಜದಲ್ಲಿ ಉತ್ತಮ ಸ್ಥಾನಮಾನ ಕೊಡುವ ಅಥವಾ ಆಕೆಯ ಕೆಲಸಕ್ಕೆ ಸರಿಯಾಗಿ ಸಂಭಾವನೆ ಕೊಡುವ ಯಾವ ಪದ್ಧತಿಯೂ ಇಲ್ಲ. ಆಕೆ ಮಾಡುವ ಈ ಎಲ್ಲಾ ಕೆಲಸಗಳೂ ಬಿಟ್ಟಿ ಚಾಕರಿಯೇ ಆಗಿದೆ.

ರೈತ ಮಹಿಳೆಯರ ಇಂದಿನ ಸ್ಥಿತಿ

ಒಂದೆಡೆ ಆಸ್ತಿಯ ಮೇಲಿನ ಒಡೆತವಿಲ್ಲದೆ, ಅದೇ ಆಸ್ತಿಯಲ್ಲಿ ಕೃಷಿ ಚಟುವಟಿಕೆ ಮಾಡಲು ತನ್ನನ್ನು ತಾನು ಸಂಪೂರ್ಣವಾಗಿ ತೊಡಗಿಸಿಕೊಂಡಿರುವ ರೈತ ಮಹಿಳೆ, ಉಳಿದ ವಿಭಾಗದ ಮಹಿಳೆಯರಿಗಿಂತ ಹೆಚ್ಚಿನ ಸಂಕಷ್ಟವನ್ನು ಅನುಭವಿಸುವಂತಾಗಿದೆ. ಕುಟುಂಬ ನಿರ್ವಹಣೆಯನ್ನೂ ಮಾಡುತ್ತಾ, ಕೃಷಿ ಕಾರ್ಯವನ್ನೂ ನಿಭಾಯಿಸುವ ಎರಡು ಹೊಣೆಗಾರಿಕೆಯನ್ನು ರೈತ ಮಹಿಳೆ ಹೊತ್ತಿದ್ದಾಳೆ. ಕೃಷಿ ಕೇತ್ರದಲ್ಲಿ ಯಾವುದೇ ಬದಲಾವಣೆಗಳಾದರೂ, ಅದು ಮೊದಲು ರೈತ ಮಹಿಳೆಯರ ಮೇಲೆ ಪರಿಣಾಮ ಬೀರುತ್ತದೆ. ಕೃಷಿ ಕ್ಷೇತ್ರದ ಮೇಲೆ ಕೇಂದ್ರ ಸರ್ಕಾರದ ನಿರಂತರ ಅನುಧಾನ ಕಡಿತ, ಅದರಿಂದಾಗಿ ಸಬ್ಸಿಡಿ ಕಡಿತವಾಗಿ ಕೃಷಿ ಉತ್ಪಾದನಾ ವೆಚ್ಚ ಹೆಚ್ಚಳವಾಗುತ್ತಿದೆ. ಈ ವೆಚ್ಚಕ್ಕೆ ತಕ್ಕಂತೆ ಬೆಳೆ ನ್ಯಾಯಯುತ ಬೆಲೆಗೆ ಮಾರಾಟವಾಗದಿರುವಾಗ, ಮಾಡಿದ ಸಾಲವನ್ನು ತೀರಿಸಲಾಗದೆ ರೈತ ಸಂಕಷ್ಟಕ್ಕೆ

ಪುಟ 10 ಕ್ಕೆ

ಕರ್ನಾಟಕದ ಜಾತಿ ಸಮೀಕ್ಷೆಯ ವಿಶ್ವಾಸಾರ್ಹತೆಯ ಮೌಲ್ಯಮಾಪನ: ಪುರಾವೆ ಆಧಾರಿತ ದೃಷ್ಟಿಕೋನ

ಲೇಖಕ: @nethrapal

ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗವು ತನ್ನ ಸಾಮಾಜಿಕ-ಆರ್ಥಿಕ ಮತ್ತು ಶೈಕ್ಷಣಿಕ ಜಾತಿ (SEEC) ಸಮೀಕ್ಷೆ, 2015 ರ ಸಮೀಕ್ಷೆಗಳನ್ನು ಬಿಡುಗಡೆ ಮಾಡಿತು. ದತ್ತಾಂಶ ಪ್ರಕಟಣೆ ವಿಳಂಬವಾದರೂ, 2025ರಲ್ಲಿ ಅದರ ಅಂತಿಮ ಬಿಡುಗಡೆಯು ಕರ್ನಾಟಕದ ಸಾಮಾಜಿಕ ರಚನೆಯನ್ನು ಪ್ರಾಯೋಗಿಕವಾಗಿ ಅರ್ಥಮಾಡಿಕೊಳ್ಳುವಲ್ಲಿ ಮಹತ್ವದ ಮೈಲಿಗಲ್ಲನ್ನು ಸೂಚಿಸುತ್ತದೆ. ಈ ನೀತಿ ಟಿಪ್ಪಣಿಯು ಸಮೀಕ್ಷೆಯ ವಿಶ್ವಾಸಾರ್ಹತೆಯ ರಚನಾತ್ಮಕ ವಿಶ್ಲೇಷಣೆಯನ್ನು ಐತಿಹಾಸಿಕ ಜನಗಣತಿ ದಾಖಲೆಗಳು, ತಜ್ಞರ ಸಮಿತಿ ವರದಿಗಳು ಮತ್ತು ದೊಡ್ಡ ಪ್ರಮಾಣದ ಆರೋಗ್ಯ ಮತ್ತು ಶಿಕ್ಷಣ ಸಮೀಕ್ಷೆಗಳೊಂದಿಗೆ ಹೋಲಿಸುವ ಮೂಲಕ ಪ್ರಸ್ತುತಪಡಿಸುತ್ತದೆ.

ಮುಸ್ಲಿಮರ ಸಂಖ್ಯೆಯಲ್ಲಿ ತೀರಾ ಕಡಿಮೆ ವ್ಯತ್ಯಾಸವಿದೆ

ಜಾತಿ ಸಮೀಕ್ಷೆಯು ಮುಸ್ಲಿಂ ಜನಸಂಖ್ಯೆಯನ್ನು ಶೇ.12.87 (76,99,425) ಎಂದು ಗುರುತಿಸುತ್ತದೆ, ಮುಸ್ಲಿಮರು ಶೇ.18 ಪಾಲನ್ನು ಹೊಂದಿದ್ದಾರೆ ಎಂದು ಇದಕ್ಕೂ ಹಿಂದಿನ ಮಾಧ್ಯಮ ವರದಿಗಳು ಹೇಳಿಕೊಳ್ಳುವುದಕ್ಕೆ ಇದು ವ್ಯತಿರಿಕ್ತವಾಗಿದೆ.

ಇದನ್ನು ಪರಿಶೀಲಿಸಲು, ನಾವು 2011 ರವರೆಗಿನ ವಿವಿಧ ಜನಗಣತಿ ಡೇಟಾವನ್ನು ಪರಿಶೀಲಿಸಿದರೆ, ವರ್ಷ ಮತ್ತು ಮುಸ್ಲಿಂ ಜನಸಂಖ್ಯೆಯ ಶೇಕಾಡಾವಾರು ವಿವರ ಹೀಗಿದೆ:

1951ರಲ್ಲಿ 10.05, 1961ರಲ್ಲಿ 9.87
1971ರಲ್ಲಿ 10.63 1981ರಲ್ಲಿ 11.21
1991ರಲ್ಲಿ 11.64 2001ರಲ್ಲಿ 12.23
2011ರಲ್ಲಿ 12.92

ಈ ಅಂಕಿ ಅಂಶಗಳ ಆಧಾರದ ಮೇಲೆ 2023ರಲ್ಲಿ ಮುಸ್ಲಿಮರ ಜನಸಂಖ್ಯೆ ಸುಮಾರು ಶೇ.14 ಆಗಬಹುದು. ಆದ್ದರಿಂದ, ಜಾತಿ ಸಮೀಕ್ಷೆಯಲ್ಲಿ ವರದಿಯಾದ ಸಂಖ್ಯೆ (ಸುಮಾರು ಶೇ.12.87) ವಾಸ್ತವಿಕವಾಗಿದೆ ಎಂಬುದನ್ನು ತೋರುತ್ತದೆ.

ಮುಸ್ಲಿಂ ಜನಸಂಖ್ಯೆಯ ಅಂಕಿಅಂಶಗಳನ್ನು ನೀಡುವ ಇತರ ಎರಡು ದತ್ತಾಂಶ ಅಂಶಗಳಿವೆ. 1988ರಲ್ಲಿ ಚಿನ್ನಪ್ಪ ಆಯೋಗದ ವರದಿಯಲ್ಲಿನ ಒಂದು ದತ್ತಾಂಶದಂತೆ ಮುಸ್ಲಿಂ ಜನಸಂಖ್ಯೆ ಶೇ.11.7 ಆಗಿತ್ತು. ಪ್ರಸ್ತುತ ಅಂದಾಜಿಸಲಾದ ಸಂಖ್ಯೆಯು ಚಿನ್ನಪ್ಪ ಆಯೋಗದ ವರದಿಗೆ ಅನುಗುಣವಾಗಿದೆ ಎಂದು ತೋರಿಸುತ್ತದೆ. 2015–16 ರ ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ (NFHS) ವರದಿಯ ಪ್ರಕಾರ, ಕರ್ನಾಟಕದಲ್ಲಿ ಮುಸ್ಲಿಮರ ಜನಸಂಖ್ಯೆಯು ಶೇ.12.4 ಎಂದು ಅಂದಾಜಿಸಲಾಗಿದೆ. ಇತರ ಸಮೀಕ್ಷೆಗಳಲ್ಲಿ ಪಡೆದ ದತ್ತಾಂಶಗಳಿಗೆ ಇಂದಿನ ಜಾತಿ ಸಮೀಕ್ಷೆಯು ಮತ್ತೊಮ್ಮೆ ಹೊಂದಿಕೆಯಾಗುತ್ತದೆ. ಈ ಸ್ಥಿರತೆಯು ಜಾತಿ ಸಮೀಕ್ಷೆಯಲ್ಲಿ ಮುಸ್ಲಿಂ ಜನಸಂಖ್ಯೆಯನ್ನು ಅತಿಯಾಗಿ ಅಂದಾಜು ಮಾಡಲಾಗಿಲ್ಲ ಎಂದು ಸೂಚಿಸುತ್ತದೆ.

ಎಸ್‌ಸಿ/ಎಸ್‌ಟಿ ಜನಸಂಖ್ಯೆಯ ಅಂದಾಜುಗಳು ನಿಖರವಾಗಿ ಕಂಡುಬರುತ್ತವೆ

ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡಗಳ (SC/ST)ದ ಒಟ್ಟು ಜನಸಂಖ್ಯೆಯ ಕುರಿತು ನೋಡುವುದಾದರೆ, ಈ ಜಾತಿ ಸಮೀಕ್ಷೆಯ ಪ್ರಕಾರ: ಕರ್ನಾಟಕದಲ್ಲಿ ಪರಿಶಿಷ್ಟ ಜಾತಿಗಳ (ಎಸ್ಸಿ) ಜನಸಂಖ್ಯೆ ಸರಿಸುಮಾರು ಶೇ.18.27 (1.09 ಕೋಟಿ)ರಷ್ಟಿದೆ. ಪರಿಶಿಷ್ಟ ಪಂಗಡಗಳ (ಎಸ್ಟಿ) ಜನಸಂಖ್ಯೆ ಶೇ.7.1 (42.81 ಲಕ್ಷ) ಇದೆ.

'ಜಾತಿ ಜನಗಣತಿ' ಎಂದು ಜನಪ್ರಿಯವಾಗಿ ಕರೆಯಲ್ಪಡುವ 'ಕರ್ನಾಟಕ ಸಾಮಾಜಿಕ-ಆರ್ಥಿಕ ಮತ್ತು ಶೈಕ್ಷಣಿಕ ಸಮೀಕ್ಷೆ, 2015, ವರದಿಯಲ್ಲಿ ತಮ್ಮ ಸಮುದಾಯದ ಪ್ರಾತಿನಿಧ್ಯವನ್ನು ಕಡಿಮೆ ತೋರಿಸಲಾಗಿದೆ ಎಂದು ಲಿಂಗಾಯತ ಮತ್ತು ಒಕ್ಕಲಿಗ ನಾಯಕರಿಂದ ಸಮೀಕ್ಷೆಗೆ ವಿರೋಧ ವ್ಯಕ್ತವಾಗುತ್ತಿದೆ. ಜಾತಿ ಸಮೀಕ್ಷೆಯ ಡೇಟಾವನ್ನು ವಿಶ್ಲೇಷಿಸಿ, ಇತರ ದತ್ತಾಂಶಗಳೊಂದಿಗೆ ಹೋಲಿಸಿ ನೋಡಿದರೆ, ಮುಸ್ಲಿಮರ ಸಂಖ್ಯೆಯಲ್ಲಿ ತೀರಾ ಕಡಿಮೆ ವ್ಯತ್ಯಾಸವಿದೆ. ಎಸ್‌ಸಿ/ಎಸ್‌ಟಿ ಜನಸಂಖ್ಯೆಯ ಅಂದಾಜುಗಳು ನಿಖರವಾಗಿ ಕಂಡುಬರುತ್ತವೆ. ಲಿಂಗಾಯತರಲ್ಲಿ ಅನೇಕರು ತಮ್ಮನ್ನು ತಾವು ಮೂಲ ಜಾತಿಗಳೊಂದಿಗೆ ಗುರುತಿಸಿಕೊಳ್ಳುತ್ತಾರೆ. ಒಕ್ಕಲಿಗರ ಸಂಖ್ಯೆಯಲ್ಲಿ ಅತ್ಯಲ್ಪ ವ್ಯತ್ಯಾಸವಿದೆ. ಕುರುಬ ಜನಸಂಖ್ಯೆಯಲ್ಲಿ ಗಮನಾರ್ಹ ಹೆಚ್ಚಳವಿಲ್ಲ. ಆದ್ದರಿಂದ, ಸಮೀಕ್ಷೆ ವಿಶ್ವಾಸಾರ್ಹವಾಗಿದೆ. ಆದರೂ, ರಾಜಕೀಯ ಪ್ರಾತಿನಿಧ್ಯ ಹಾಗೂ ಆದಾಯ, ಸಂಪತ್ತು ಮತ್ತು ಭೂ ಹಿಡುವಳಿಯಂತಹ ಆರ್ಥಿಕ ಸೂಚಕಗಳ ಬಗೆಗಿನ ದತ್ತಾಂಶಗಳ ಕೊರತೆಯಿದೆ ಎನ್ನುತ್ತಾ, ಲೇಖಕರು ತಮ್ಮ ಅಭಿಪ್ರಾಯ ಹಂಚಿಕೊಂಡಿದ್ದಾರೆ.



ಇತರ ಮೂಲಗಳೊಂದಿಗೆ ಹೋಲಿಕೆ ಮಾಡಿ ನೋಡುವುದಾದರೆ:

2015–16 ರಲ್ಲಿ NFHS ಸಮೀಕ್ಷೆಯ ಪ್ರಕಾರ, ಎಸ್‌ಸಿ ಜನಸಂಖ್ಯೆ ಶೇ.21 ಮತ್ತು ಎಸ್‌ಟಿ ಜನಸಂಖ್ಯೆ ಶೇ.9.2.

1988ರ ಚಿನ್ನಪ್ಪ ಆಯೋಗದ ಪ್ರಕಾರ, ಎಸ್‌ಸಿ ಜನಸಂಖ್ಯೆ ಶೇ. 16.7 ಮತ್ತು ಎಸ್‌ಟಿ ಜನಸಂಖ್ಯೆ ಶೇ.6.7.

2011 ಜನಗಣತಿ ಪ್ರಕಾರ, ಎಸ್‌ಸಿ ಜನಸಂಖ್ಯೆ ಶೇ.17.15 ಮತ್ತು ಎಸ್‌ಟಿ ಜನಸಂಖ್ಯೆ ಶೇ.6.95.

UDISE ಡೇಟಾ (ಟೈಮ್ಸ್ ಆಫ್ ಇಂಡಿಯಾ ವಿಶ್ಲೇಷಣೆ) ಪ್ರಕಾರ: ಎಸ್‌ಸಿ ಜನಸಂಖ್ಯೆ ಶೇ.19 ಮತ್ತು ಎಸ್‌ಟಿ ಜನಸಂಖ್ಯೆ ಶೇ.8.

ಈ ನಿಟ್ಟಿನಲ್ಲಿ, ವಿವಿಧ ಸಮೀಕ್ಷೆಗಳ ಎಸ್‌ಸಿ/ಎಸ್‌ಟಿ ಜನಸಂಖ್ಯೆಯ ಅಂದಾಜುಗಳು ಈ ಜಾತಿ ಸಮೀಕ್ಷೆಯ ನಿಖರತೆಯನ್ನು ದೃಢಪಡಿಸುತ್ತವೆ.

ಒಕ್ಕಲಿಗರ ಜನಸಂಖ್ಯೆಯಲ್ಲಿ ಅತ್ಯಲ್ಪ ವ್ಯತ್ಯಾಸ

ಒಕ್ಕಲಿಗರ ಜನಸಂಖ್ಯೆ ಕುರಿತಂತೆ ನೋಡುವುದಾದರೆ, ಒಕ್ಕಲಿಗರ ಜಾತಿಗಳ ಅಡಿಯಲ್ಲಿ ರಾಜ್ಯದ ಒಟ್ಟು ಜನಸಂಖ್ಯೆಯ ಶೇ.10.31ರಷ್ಟು (61,58,652) ಇದೆ ಎಂದು ಇಂದಿನ ಸಮೀಕ್ಷೆಯು ಉಲ್ಲೇಖಿಸಿದೆ. ಚಿನ್ನಪ್ಪ ಆಯೋಗವು 1988ರಲ್ಲಿ ಈ ಸಂಖ್ಯೆಯನ್ನು ಶೇ. 10.8 ಎಂದು ಪರಿಗಣಿಸಿತ್ತು. ಆದ್ದರಿಂದ, ಅತ್ಯಲ್ಪ ವ್ಯತ್ಯಾಸವು ಇಂದಿನ ಸಮೀಕ್ಷೆಯ ವಿಶ್ವಾಸಾರ್ಹತೆಯನ್ನು ಬೆಂಬಲಿಸುತ್ತದೆ.

ಲಿಂಗಾಯತರಲ್ಲಿ ಅನೇಕರು ತಮ್ಮ ಮೂಲ ಜಾತಿಗಳೊಂದಿಗೆ ಗುರುತಿಸಿಕೊಳ್ಳುತ್ತಾರೆ

1988ರಲ್ಲಿ ಚಿನ್ನಪ್ಪ ಆಯೋಗದ ವರದಿಯಲ್ಲಿ, ರಾಜ್ಯದ ಒಟ್ಟು ಜನಸಂಖ್ಯೆಯಲ್ಲಿ ಲಿಂಗಾಯತರ ಜನಸಂಖ್ಯೆ ಶೇ.15.3 ಎಂದು ಹೇಳಲಾಗಿತ್ತು. ಇಂದಿನ ಸಮೀಕ್ಷೆಯು ಲಿಂಗಾಯತರ ಜನಸಂಖ್ಯೆಯನ್ನು 66,35,233 ಎಂದು ಹೇಳಿದೆ. ಇದು ರಾಜ್ಯದ ಜನಸಂಖ್ಯೆಯ ಶೇ. 11.09ರಷ್ಟಿದೆ.

ಲಿಂಗಾಯತರು ತಮ್ಮೊಳಗೆ ವಿವಿಧ ಉಪವಿಭಾಗಗಳನ್ನು ಹೊಂದಿದ್ದಾರೆ. ಅನೇಕರು ತಮ್ಮನ್ನು ತಾವು ಗುರುತಿಸಿಕೊಂಡ ಮೂಲ ಜಾತಿಗಳೊಂದಿಗೆ ಗುರುತಿಸಿಕೊಳ್ಳುತ್ತಾರೆ. ಉದಾಹರಣೆಗೆ, ಲಿಂಗಾಯತ ಗಾಣಿಗ, ಲಿಂಗಾಯತ ಕುರುಬ ಮತ್ತು ಲಿಂಗಾಯತ ಹೊಲೆಯರಂತಹ ಬಹು ಲಿಂಗಾಯತ ಉಪ-ಪಂಗಡಗಳನ್ನು ಆಯಾ ಜಾತಿ ಹೆಸರುಗಳ ಅಡಿಯಲ್ಲಿ ವರದಿ ಮಾಡಲಾಗಿದೆ. ನಿರ್ದಿಷ್ಟ ಮೀಸಲಾತಿ ವರ್ಗಗಳ ಅಡಿಯಲ್ಲಿ ಗ್ರಹಿಸಿದ ಪ್ರಯೋಜನಗಳ ಆಧಾರದ ಮೇಲೆ ಹೊಂದಿಕೊಳ್ಳುವ ಜಾತಿ ಗುರುತಿಸುವಿಕೆ ಇದಾಗಿದೆ. ಇದು ತಳಮಟ್ಟದಲ್ಲಿ ಒಂದು ಗುರುತು ಆಗಿರುವುದರಿಂದ, ಜನರು ಆಯಾ ಕೋಟಾಗಳ ಅಡಿಯಲ್ಲಿ ಲಭ್ಯವಿರುವ ಮೀಸಲಾತಿ ಸೌಲಭ್ಯಗಳನ್ನು ಬಳಸಿಕೊಳ್ಳಲು ಅವುಗಳನ್ನು ಸುಲಭವಾಗಿ ಮೂಲ ಜಾತಿಗಳಿಗೆ ಬದಲಾಯಿಸಬಹುದು. ಆದ್ದರಿಂದ, ಗುರುತಿನ ವಿಘಟನೆಯು ಲಿಂಗಾಯತರ ಒಟ್ಟು ಸಂಖ್ಯೆಯನ್ನು ಕಡಿಮೆ ಎಂದು ವಿವರಿಸುತ್ತದೆ ಮತ್ತು ಡೇಟಾ ನಿಖರತೆಯನ್ನು ಸೂಚಿಸುವುದಿಲ್ಲ.

ಕುರುಬ ಜನಸಂಖ್ಯೆ ಏರಿಕೆ ಪ್ರಮಾಣಾನುಗುಣವಾಗಿದೆ

ಜಾತಿ ಸಮೀಕ್ಷೆಯು ಕುರುಬ ಸಮುದಾಯದ ಜನಸಂಖ್ಯೆಯು ಶೇ.7.31ರಷ್ಟಿದ್ದು, ಸುಮಾರು 43.7 ಲಕ್ಷ ಜನರಿದ್ದಾರೆ ಎಂದು ಹೇಳಿದೆ. ಚಿನ್ನಪ್ಪ ಆಯೋಗವು 1988ರಲ್ಲಿ ಈ ಅನುಪಾತವನ್ನು ಶೇ.6.3 ಎಂದು ತೆಗೆದುಕೊಂಡಿದೆ. ಈ ಏರಿಕೆ ಪ್ರಮಾಣಾನುಗುಣವಾಗಿದೆ ಮತ್ತು ನಿರೀಕ್ಷಿತ ಜನಸಂಖ್ಯಾ ಬೆಳವಣಿಗೆಯ ಪ್ರವೃತ್ತಿಯಲ್ಲಿದೆ.

ಶೇ. 69.59ರಷ್ಟು ಜನರು ಒಬಿಸಿಗೆ ಸೇರಿದವರಾಗಿದ್ದಾರೆ

ಸಮೀಕ್ಷೆಯ ಪ್ರಕಾರ, ಒಟ್ಟು ಜನಸಂಖ್ಯೆಯಲ್ಲಿ ಸರಿಸುಮಾರು 4,16,30,153 ಜನರು ಇತರ ಹಿಂದುಳಿದ ವರ್ಗ(ಒಬಿಸಿ)ಕ್ಕೆ ಸೇರಿದವರು. ಅಂದರೆ ಒಟ್ಟು ಜನಸಂಖ್ಯೆಯ ಸುಮಾರು ಶೇ.69.59ರಷ್ಟು ಜನರು ಇತರ ಹಿಂದುಳಿದ ವರ್ಗಗಳಿಗೆ ಸೇರಿದವರಾಗಿದ್ದಾರೆ. 2015–16ರ NFHS (ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ) ಪ್ರಕಾರ ಒಬಿಸಿ ಜನಸಂಖ್ಯೆಯನ್ನು ಶೇ.46.4 ಎಂದು ತೆಗೆದುಕೊಳ್ಳಲಾಗಿದೆ.

UDISE (ಶಿಕ್ಷಣಕ್ಕಾಗಿ ಏಕೀಕೃತ ಜಿಲ್ಲಾ ಮಾಹಿತಿ ವ್ಯವಸ್ಥೆ) ಅನುಪಾತದ ಪ್ರಕಾರ, ಜನಸಂಖ್ಯೆಯ ಸರಿಸುಮಾರು ಶೇ.62 ವಿದ್ಯಾರ್ಥಿಗಳು ಒಬಿಸಿ ಸಮುದಾಯಗಳಿಗೆ ಸೇರಿದವರು ಎಂದು ಟೈಮ್ಸ್ ಆಫ್ ಇಂಡಿಯಾ ಹೇಳಿದೆ. ಹೀಗಾಗಿ, ಜಾತಿ ಸಮೀಕ್ಷೆಯು ವಿಶಾಲವಾದ ಶೈಕ್ಷಣಿಕ ಮತ್ತು ಆರೋಗ್ಯ ಸೂಚಕಗಳೊಂದಿಗೆ ಹೊಂದಿಕೆಯಾಗುತ್ತದೆ, ಇದು ಕರ್ನಾಟಕದ ಅಹಿಂದ (SC+ST+OBC+ಅಲ್ಪಸಂಖ್ಯಾತ) ಸಂಯೋಜನೆಯನ್ನು ದೃಢಪಡಿಸುತ್ತದೆ.

ಆರ್ಥಿಕ ಸೂಚಕಗಳ ಬಗೆಗಿನ ದತ್ತಾಂಶಗಳ ಕೊರತೆ

ಜಾತಿ ಸಮೀಕ್ಷೆಯು ದೃಢವಾದ ಸಮುದಾಯ-ಮಟ್ಟದ ಜನಸಂಖ್ಯಾ ಅಂದಾಜುಗಳನ್ನು ಒದಗಿಸಿದರೂ, ಅದರಲ್ಲಿ ಕೆಲವು ದತ್ತಾಂಶಗಳ ಕೊರತೆಯಿದೆ. ಗ್ರೂಪ್ A/B/C/D ನಂತಹ ಸರ್ಕಾರಿ ಉದ್ಯೋಗದಲ್ಲಿ ವಿವಿಧ ಜಾತಿ ಗುಂಪುಗಳ ಪ್ರಾತಿನಿಧ್ಯವನ್ನು ಒದಗಿಸುವಲ್ಲಿ ಸಮೀಕ್ಷೆಯು ವಿಫಲವಾಗಿದೆ. ರಾಜಕೀಯ ಪ್ರಾತಿನಿಧ್ಯ ದತ್ತಾಂಶವನ್ನು ಇದರಲ್ಲಿ ಚರ್ಚಿಸಲಾಗಿಲ್ಲ. ಆದಾಯ, ಸಂಪತ್ತು ಮತ್ತು ಭೂ ಹಿಡುವಳಿಯಂತಹ ಆರ್ಥಿಕ ಸೂಚಕಗಳ ಬಗೆಗಿನ ದತ್ತಾಂಶಗಳ ಕೊರತೆಯಿದೆ. ಬಿಹಾರದ ಜಾತಿ ಸಮೀಕ್ಷೆಯು ಈ ಸಾಮಾಜಿಕ-ಆರ್ಥಿಕ ಅಸ್ಥಿರಗಳನ್ನು ಒಳಗೊಂಡಿತ್ತು, ಇದು ಸಮಕಾಲೀನ ಸಂದರ್ಭದಲ್ಲಿ 'ಹಿಂದುಳಿದಿರುವಿಕೆ'ಯನ್ನು ವ್ಯಾಖ್ಯಾನಿಸಲು ಅವಶ್ಯಕವಾಗಿದೆ. ಈ ಹೆಚ್ಚುವರಿ ದತ್ತಾಂಶದೊಂದಿಗೆ ತನ್ನ ವರದಿಯನ್ನು ಪೂರಕವಾಗಿ ಕರ್ನಾಟಕವು ಪರಿಗಣಿಸಬೇಕು.

ಕೊನೆಯದಾಗಿ ಹೇಳುವುದೇನೆಂದರೆ: ಕರ್ನಾಟಕ ಜಾತಿ ಸಮೀಕ್ಷೆಯು ದೃಢವಾದ ಅಂಕಿಅಂಶಗಳ ಆಧಾರದ ಮೇಲೆ ನಿಂತಿದೆ, ಐತಿಹಾಸಿಕ ಮತ್ತು ಸಮಕಾಲೀನ ದತ್ತಾಂಶಗಳೊಂದಿಗೆ ಉತ್ತಮ ಸಂಬಂಧ ಹೊಂದಿದೆ. ಪ್ರಬಲ ಜಾತಿಗಳ ಸುತ್ತಲಿನ ರಾಜಕೀಯ ಚರ್ಚೆಗಳ ಹೊರತಾಗಿಯೂ, ಸಮೀಕ್ಷೆಯು ಕಾನೂನುಬದ್ಧವಾಗಿ ಮತ್ತು ಕ್ರಮಶಾಸ್ತ್ರೀಯವಾಗಿ ಉತ್ತಮವಾಗಿದೆ ಎಂದು ತೋರುತ್ತದೆ. ವರದಿಯನ್ನು ಬಿಡುಗಡೆ ಮಾಡಿದ್ದಕ್ಕಾಗಿ ರಾಜ್ಯ ಸರ್ಕಾರವನ್ನು ಶ್ಲಾಘಿಸಬೇಕು ಮತ್ತು ಈಗ ಪ್ರಾಯೋಗಿಕ ವಾಸ್ತವಗಳ ಆಧಾರದ ಮೇಲೆ ಮೀಸಲಾತಿ, ಪ್ರಾತಿನಿಧ್ಯ ಮತ್ತು ಕಲ್ಯಾಣ ಹಂಚಿಕೆಯನ್ನು ತರ್ಕಬದ್ಧಗೊಳಿಸಲು ಡೇಟಾವನ್ನು ಬಳಸುವತ್ತ ಗಮನಹರಿಸಬೇಕು.

ಭಯೋತ್ಪಾದನೆಯನ್ನು ಎದುರಿಸುವಲ್ಲಿ ಸರಕಾರಕ್ಕೆ ಬೆಂಬಲ–ಆದರೆ ಅದರಲ್ಲಿ ಸಂಕುಚಿತತೆ ಇರಬಾರದು: ಸರ್ವ ಪಕ್ಷ ಸಭೆಯಲ್ಲಿ ಸಿಪಿಐ(ಎಂ) ಮುಖಂಡರು

ಭಯೋತ್ಪಾದನೆಯನ್ನು ಎದುರಿಸಲು ಕ್ರಮ ಕೈಗೊಳ್ಳುವಲ್ಲಿ ಸಿಪಿಐ(ಎಂ) ಸರ್ಕಾರವನ್ನು ಬೆಂಬಲಿಸುತ್ತದೆ, ಆದರೆ ಇದರಲ್ಲಿ ಯಾವುದೇ ಸಂಕುಚಿತ ಅಬ್ಬರ ಇರಬಾರದು ಎಂದು ಒಕ್ಕೂಟ ಸರಕಾರ ಕರೆದ ಸರ್ವಪಕ್ಷ ಸಭೆಯಲ್ಲಿ ಮಾತಾಡುತ್ತ ಸಂಸತ್ತಿನಲ್ಲಿ ಸಿಪಿಐ(ಎಂ) ಗುಂಪಿನ ಮುಖ್ಯಸ್ಥರಾಗಿರುವ ರಾಜ್ಯಸಭಾ ಸದಸ್ಯ ಬಿಕಾಶ್ ರಂಜನ್ ಭಟ್ಟಾಚಾರ್ಯ ಹೇಳಿದರು.

ಭಯೋತ್ಪಾದಕ ದಾಳಿಯನ್ನು ನಾವು ಬಲವಾಗಿ ಖಂಡಿಸುತ್ತೇವೆ ಮತ್ತು ಮೃತರ ಕುಟುಂಬಗಳಿಗೆ ನಮ್ಮ ಆಳವಾದ ಸಂತಾಪವನ್ನು ವ್ಯಕ್ತಪಡಿಸುತ್ತೇವೆ ಎಂದು ಮಾತು ಆರಂಭಿಸಿದ ಅವರು, ಭಯೋತ್ಪಾದನಾ ದಾಳಿಯನ್ನು ಖಂಡಿಸಲು ಕಾಶ್ಮೀರಿ ಜನರು ಒಗ್ಗಟ್ಟಾಗಿದ್ದಾರೆ ಮತ್ತು ಬರ್ಬರ ದಾಳಿಯಿಂದ ಹಾನಿಗೊಳಗಾದವರಿಗೆ ಎಲ್ಲಾ ಸಹಾಯವನ್ನು ನೀಡಿದ್ದಾರೆ ಎನ್ನುತ್ತ ಧರ್ಮ ಮತ್ತು ನಂಬಿಕೆಯ ಮೇಲೆ ದುರುದ್ದೇಶಪೂರಿತ ಪ್ರಚಾರಗಳನ್ನು ನಿಲ್ಲಿಸಲು ಜಂಟಿ ಮನವಿ ಮಾಡಬೇಕು ಎಂದು ಕೇಳಿದರು.

ಭದ್ರತಾ ಲೋಪದ ವಿಷಯವನ್ನು ಎತ್ತುತ್ತ, ಪುಲ್ವಾಮಾ ಘಟನೆಯ ನಂತರ, ಆ ಘಟನೆಯ ತನಿಖೆಯ ಫಲಿತಾಂಶದ ಬಗ್ಗೆ ಸಾರ್ವಜನಿಕರಿಗೆ ಏನೂ ತಿಳಿಸಲಾಗಿಲ್ಲ. ಉಗ್ರರ ಈ ಹೇಯ ದಾಳಿಯ ವಿಷಯದಲ್ಲಿ ಹೀಗಾಗಬಾರದು. ಅಪರಾಧಿಗಳನ್ನು ಕಟಕಟೆಗೆ ತರುವುದನ್ನು ಖಚಿತಪಡಿಸಲು ನಾವೆಲ್ಲರೂ ಒಗ್ಗಟ್ಟಾಗಿ ನಿಂತಿದ್ದೇವೆ ಎಂದು ಅವರು ಹೇಳಿದರು.

ಒಕ್ಕೂಟ ವ್ಯವಸ್ಥೆಯ ರಾಜಕೀಯ ಮತ್ತು ಹಣಕಾಸು ಆಯಾಮಗಳ ಚರ್ಚೆಗೆ ಅಗತ್ಯ ಪುಸ್ತಕ

ವಸಂತರಾಜ ಎನ್.ಕೆ.

ಭಾರತದ ಸ್ವಾತಂತ್ರ್ಯ ಚಳುವಳಿಯಲ್ಲಿ ಪ್ರಜಾಪ್ರಭುತ್ವ, ಜಾತ್ಯತೀತತೆ ಮತ್ತು ಸಾಮಾಜಿಕ ನ್ಯಾಯಗಳಷ್ಟೇ ಒಕ್ಕೂಟ ತತ್ವ ಕೂಡಾ ಪ್ರಮುಖ ಆಶಯವಾಗಿತ್ತು. ಸ್ವಾತಂತ್ರ್ಯ ಚಳುವಳಿ ಮತ್ತು ಅದರ ಪ್ರಮುಖ ವೇದಿಕೆಯಾಗಿದ್ದ ಕಾಂಗ್ರೆಸ್, ಭಾರತ ಹಲವು ಭಾಷಾವಾರು ರಾಷ್ಟ್ರೀಯತೆಗಳಿರುವ ದೇಶ ಎಂದು ಒಪ್ಪಿಕೊಂಡಿತ್ತು. ಹಾಗಾಗಿಯೇ ಕಾಂಗ್ರೆಸ್, ಕಮ್ಯುನಿಸ್ಟ್ ಸೇರಿದಂತೆ ಹೆಚ್ಚಿನ ರಾಜಕೀಯ ಪಕ್ಷಗಳ ಘಟಕಗಳು, ಬ್ರಿಟಿಷ್ ಪ್ರಾಂತ್ಯಗಳ ಮೇಲೆ ಆಧಾರಿತವಾಗದೆ, ಭಾಷಾವಾರು ಪ್ರಾಂತ್ಯಗಳ ಮೇಲೆ ಆಧಾರಿತವಾಗಿದ್ದವು. 1956ರಲ್ಲಿ ಮೈಸೂರು ಒಂದು ಭಾಷಾವಾರು ರಾಜ್ಯವಾಗುವ ಮೊದಲೇ ಮತ್ತು 1973ರಲ್ಲಿ ಕರ್ನಾಟಕ ಎಂದು ಮರುನಾಮಕಾರಣವಾಗುವ ಬಹಳ ಮೊದಲೇ, ಕಾಂಗ್ರೆಸ್ ಮತ್ತು ಕಮ್ಯುನಿಸ್ಟ್ ಪಕ್ಷಗಳ ಘಟಕಗಳನ್ನು ಕರ್ನಾಟಕ ಪ್ರಾಂತ ಸಮಿತಿಗಳು ಎಂದು ಕರೆಯಲಾಗುತ್ತಿತ್ತು. ಸ್ವತಂತ್ರವಾದಾಗ ದೇಶ ವಿಭಜನೆಯ ದುರಂತ ಮತ್ತು ರಾಜರುಗಳ ಅವಕಾಶವಾದದ ಸನ್ನಿವೇಶದಿಂದಾಗಿ ಸಂವಿಧಾನಾತ್ಮಕವಾಗಿ ಒಂದು 'ರಾಜ್ಯಗಳ ಯೂನಿಯನ್' ಎಂದು ಘೋಷಿತವಾದರೂ, ಸ್ವಾಯತ್ತ ರಾಜ್ಯಗಳ ಒಕ್ಕೂಟ ಒಂದು ಆಶಯವಾಗಿ ಮುಂದುವರೆದಿತ್ತು. ಆದರೆ ಆನಂತರ ಇದಕ್ಕೆ ಪಕ್ವವಾದ ಸನ್ನಿವೇಶ ಬಂದರೂ, ಅಧಿಕಾರಸ್ಥರು ಒಕ್ಕೂಟ ವ್ಯವಸ್ಥೆಯನ್ನು ಹೆಚ್ಚು ಹೆಚ್ಚಾಗಿ ಕೇಂದ್ರೀಕರಿಸುತ್ತಾ ನಡೆದರು.

ಪ್ರಧಾನಿ ಮೋದಿ 2014ರಲ್ಲಿ ಅಧಿಕಾರಕ್ಕೆ ಬಂದು ಈ ಕೇಂದ್ರೀಕೃತ ಒಕ್ಕೂಟ ವ್ಯವಸ್ಥೆಯಿಂದ 'ಸಹಕಾರಿ ಒಕ್ಕೂಟವಾದ'ದತ್ತ ಪ್ರಗತಿ ಸಾಧಿಸುವ ಭರವಸೆ ಕೊಟ್ಟರೂ, ಅವರ ಇತರ ಭರವಸೆಗಳಂತೆ ಅದೂ ಹುಸಿಯಾಗಿತ್ತು. ಯೋಜನಾ ಅಯೋಗದ ರದ್ದು, ಜಿಎಸ್‌ಟಿಯಿಂದ ಆರಂಭಿಸಿ, ಒಂದು ದೇಶ ಒಂದು ಚುನಾವಣೆ, ಸೆಸ್ ಸರ್ ಚಾರ್ಜ್, ಕ್ಷೇತ್ರಗಳ ಡಿಲಿಮಿಟೇಶನ್ ವರೆಗೆ, ನಿಜವಾಗಿಯೂ ಒಕ್ಕೂಟವಾದ ನಡೆದದ್ದು ವಿರುದ್ಧವಾದ ದಿಕ್ಕಿನಲ್ಲಿ– ಇನ್ನಷ್ಟು ಕೇಂದ್ರೀಕರಣದತ್ತ. ಈಗ ಯಾವ ರೀತಿಯ ಒಕ್ಕೂಟ ವ್ಯವಸ್ಥೆ ಬೇಕು ಎನ್ನುವುದು ತೀವ್ರ ವಿವಾದಾಸ್ಪದ ರಾಜಕೀಯ ಸಮಸ್ಯೆಯಾಗಿ ಪರಿಣಮಿಸಿದೆ. ಒಕ್ಕೂಟ ವ್ಯವಸ್ಥೆಯ ರಾಜಕೀಯ ಮತ್ತು ಹಣಕಾಸು ಎರಡೂ ಆಯಾಮಗಳ ಕುರಿತೂ ತೀವ್ರ ಚರ್ಚೆ ನಡೆದಿದೆ, ಇನ್ನಷ್ಟು ನಡೆಯಬೇಕಾಗಿದೆ.

ಈ ಚರ್ಚೆಗಳಿಗೆ ಅಗತ್ಯವಾದ ಮಾಹಿತಿ ಕನ್ನಡದಲ್ಲಿ ಲಭ್ಯವಿಲ್ಲ. ಈ ಚರ್ಚೆಯನ್ನು ಸಕಾರಾತ್ಮಕವಾಗಿ ಮುಂದಕ್ಕೊಯ್ಯಬೇಕಾದರೆ



ಒಕ್ಕೂಟ ವ್ಯವಸ್ಥೆಯ ರಾಜಕೀಯ ಮತ್ತು ಆರ್ಥಿಕ ಆಯಾಮಗಳ ಆಳ ಮತ್ತು ಅಗಲಗಳ ಮಾಹಿತಿ ವ್ಯಾಪಕವಾಗಿ ಲಭ್ಯವಾಗಬೇಕಾದ ಅಗತ್ಯವಿದೆ. ಇದನ್ನು ಒಂದು ಪುಸ್ತಕದ ರೂಪದಲ್ಲಿ ಬರೆಯಲು ಈ ಸಮಸ್ಯೆಯ ಹಲವು ಆಯಾಮಗಳ ಕುರಿತು ಅಧ್ಯಯನ, ಸಂವಾದ, ಸಂವಹನಗಳಲ್ಲಿ ಈಗಾಗಲೇ ನಿರತರಾಗಿರುವ ಬಿ.ಶ್ರೀಪಾದ ಭಟ್ ಬರೆದಿರುವ "ಒಕ್ಕೂಟವೋ ತಿಕ್ಕಾಟವೋ" ಪುಸ್ತಕವು ಈ ಕೊರತೆಯನ್ನು ತುಂಬುತ್ತದೆ.

ಈ ಪುಸ್ತಕದ ವಿಷಯದ ಕುರಿತು ತೀವ್ರ ಕಾಳಜಿ ಮತ್ತು ಅಧ್ಯಯನವಿರುವ ಪ್ರೊ. ಚಂದ್ರ ಪೂಜಾರಿ ಅವರು ಈ ಪುಸ್ತಕಕ್ಕೆ ವಿದ್ವತ್ಪೂರ್ಣ ಮುನ್ನುಡಿ ಬರೆದಿದ್ದಾರೆ.

ಗಣರಾಜ್ಯ ವ್ಯವಸ್ಥೆಯ ಬಿಕ್ಕಟ್ಟುಗಳನ್ನು ಅರ್ಥ ಮಾಡಿಕೊಳ್ಳಲು ಅನಿವಾರ್ಯ.

ನಮ್ಮ ಒಕ್ಕೂಟ ವ್ಯವಸ್ಥೆ ಅಲುಗಾಡುತ್ತಿರುವ ಸಂದರ್ಭದಲ್ಲಿ ಒಕ್ಕೂಟ ವ್ಯವಸ್ಥೆ ಕುರಿತ ಚರ್ಚೆ, ಬರಹಗಳ ಕೊರತೆಯಿದೆ. ಇಂತಹ ಕೊರತೆಯನ್ನು ಬಿ.ಶ್ರೀಪಾದ ಭಟ್ ಅವರ 'ಒಕ್ಕೂಟವೋ ತಿಕ್ಕಾಟವೋ' ಪುಸ್ತಕ ತುಂಬಬಹುದು. ನಮ್ಮ ಒಕ್ಕೂಟ ವ್ಯವಸ್ಥೆ ಹೊರನೋಟಕ್ಕೆ ಕಾಣುವಷ್ಟು ಸರಳವಾಗಿಲ್ಲ ಎನ್ನುವುದನ್ನು ಮನದಟ್ಟು ಮಾಡುವ ಹಲವು ಬೆಳವಣಿಗೆಗಳನ್ನು ಪುಸ್ತಕ ಚರ್ಚಿಸುತ್ತದೆ.

ಶ್ರೀಪಾದ ಭಟ್ ಅವರ 'ಒಕ್ಕೂಟವೋ ತಿಕ್ಕಾಟವೋ' ಪುಸ್ತಕ ಎಲ್ಲ ಕ್ಷೇತ್ರಗಳಲ್ಲೂ ಶಾಸನಾತ್ಮಕ, ಆಡಳಿತಾತ್ಮಕ ಹಾಗು ಹಣಕಾಸು– ಗಣರಾಜ್ಯ ವ್ಯವಸ್ಥೆ ಎದುರಿಸುತ್ತಿರುವ ಬಿಕ್ಕಟ್ಟುಗಳನ್ನು ಚರ್ಚಿಸುತ್ತಿದೆ. ಗಣರಾಜ್ಯ ವ್ಯವಸ್ಥೆಯ ಬಿಕ್ಕಟ್ಟುಗಳನ್ನು ವಿವರಿಸುವ ಬರಹಗಳನ್ನು ಓದುವುದು ಇಂದು ನಮ್ಮ ಗಣರಾಜ್ಯ ವ್ಯವಸ್ಥೆ ಎದುರಿಸುತ್ತಿರುವ ಬಿಕ್ಕಟ್ಟುಗಳನ್ನು ಅರ್ಥ ಮಾಡಿಕೊಳ್ಳಲು ಅನಿವಾರ್ಯ. ಅಷ್ಟು ಮಾತ್ರವಲ್ಲ, ಮುಂದೊಂದು ದಿನ ಎರಡನೇ ಬಾರಿಗೆ ವಸಾಹತು ಆಡಳಿತಕ್ಕೆ ಬಲಿಯಾಗುವುದನ್ನು ತಪ್ಪಿಸಲು ಕೂಡ ಅನಿವಾರ್ಯ.

ಡಾ.ಚಂದ್ರ ಪೂಜಾರಿ (ಮುನ್ನುಡಿಯಿಂದ)

ಕುಸಿಯುತ್ತಿರುವ ಒಕ್ಕೂಟ ವ್ಯವಸ್ಥೆಯ ಸಬಲೀಕರಣ ಅಗತ್ಯ

ಭಾರತವು ಇಂದು 'ಕ್ವಾಸಿ (ಆಂಶಿಕ) ಒಕ್ಕೂಟ ಪ್ರಭುತ್ವ'ವಾಗಿಯೂ ಉಳಿದುಕೊಂಡಿಲ್ಲ. ಪ್ರಸ್ತುತ ಅದು 'ಕೇಂದ್ರೀಕರಣಗೊಂಡ ಒಕ್ಕೂಟ ವ್ಯವಸ್ಥೆ'. ಸ್ವಾತಂತ್ರ್ಯ ಬಂದ ನಂತರ ಅಪಾರ ವೈವಿಧ್ಯತೆ, ಭಿನ್ನತೆ, ಬಹುಸಂಸ್ಕೃತಿಯ ಭಾರತದಲ್ಲಿ 'ಒಕ್ಕೂಟ ವ್ಯವಸ್ಥೆ'ಯನ್ನು ಮತ್ತಷ್ಟು ವಿಕೇಂದ್ರೀಕರಣಗೊಳಿಸುವ ಬದಲಿಗೆ ಕೇಂದ್ರೀಕರಣಕ್ಕೆ ಒತ್ತು ಕೊಟ್ಟಿರುವುದಕ್ಕೆ ಅನೇಕ ಕಾರಣಗಳಿದ್ದವು. ಆದರೆ ಯಾವ ಸಂದರ್ಭದಲ್ಲಿಯೂ ಸಂಪೂರ್ಣವಾಗಿ ಕೇಂದ್ರಕ್ಕೆ ಅಧಿಪತ್ಯ ಕೊಟ್ಟಿರಲಿಲ್ಲ. ಕಳೆದ ಶತಮಾನದ ಎಂಬತ್ತರ ದಶಕದ ನಂತರ ಈ ಒಕ್ಕೂಟ ವ್ಯವಸ್ಥೆ ಕ್ರಮೇಣ ಕುಸಿಯುತ್ತಾ ಹೋದಂತೆ ಫ್ಯಾಸಿಸಂನ ಆಡಳಿತ ಗಟ್ಟಿಗೊಳ್ಳತೊಡಗಿತು.

ಮೋದಿ ನೇತೃತ್ವದ ಬಿಜೆಪಿ ಸರಕಾರದ ಹತ್ತು ವರ್ಷಗಳ ಆಡಳಿತದಲ್ಲಿ ಸಮಾಜೋ ರಾಜಕೀಯ–ಆರ್ಥಿಕ ವ್ಯವಸ್ಥೆ ಕೇಂದ್ರೀಕರಣಗೊಳ್ಳುತ್ತಾ ಹೋದಂತೆ ಒಕ್ಕೂಟ ವ್ಯವಸ್ಥೆ ಕುಸಿಯತೊಡಗಿತು. ರಾಜ್ಯಗಳ ಸ್ವಾಯತ್ತತೆ, ಸ್ವಾತಂತ್ರ್ಯಕ್ಕೆ ಧಕ್ಕೆ ಉಂಟಾಗತೊಡಗಿತು. ರಾಜ್ಯಗಳ ಸ್ಥಳೀಯ ಅಸ್ಮಿತೆ, ಬಹುಸಂಸ್ಕೃತಿ, ನೆಲ, ಜಲ, ಭಾಷೆ ಮತ್ತು ಸಾಮಾಜಿಕ ನ್ಯಾಯ ಎಲ್ಲವೂ ದುರ್ಬಲಗೊಳ್ಳತೊಡಗಿದವು. ರಾಜ್ಯಗಳು ತಮ್ಮ ಹಕ್ಕನ್ನು ಕಳೆದುಕೊಳ್ಳತೊಡಗಿದವು. ಬಲಿಷ್ಠ ಕೇಂದ್ರದ ನೆಪದಲ್ಲಿ ರಾಜ್ಯಗಳ ಕತ್ತು ಹಿಚುಕಲಾಯಿತು. ದೇಶವನ್ನು ಹುಸಿ ರಾಷ್ಟ್ರೀಯತೆ ಮತಾಂಧತೆಯ, ಬ್ರಾಹ್ಮಣಶಾಹಿ ಚಾತುರ್ವರ್ಣದ ಮೂಲಕ ಸೋಲಿಸಲಾಯಿತು.

ಇಂತಹ ಬಿಕ್ಕಟ್ಟಿನ ಸಂದರ್ಭದಲ್ಲಿ ರಾಜ್ಯಗಳ ಸ್ವಾಯತ್ತತೆ ಮತ್ತು ರಾಷ್ಟ್ರೀಯ ಸಮಗ್ರತೆ, ಕೇಂದ್ರೀಕರಣ ಮತ್ತು ವಿಕೇಂದ್ರೀಕರಣ, ರಾಷ್ಟ್ರೀಕರಣ ಮತ್ತು ಪ್ರಾದೇಶೀಕರಣಗಳ ನಡುವೆ ಸಮತೋಲನ ಸಾಧಿಸುವಂತಹ ಒಕ್ಕೂಟ ವ್ಯವಸ್ಥೆಯ ಅವಶ್ಯಕತೆ ಇದೆ. ಇದು ಸಾಧ್ಯವಾಗಬೇಕಾದರೆ ಸಾರ್ವಜನಿಕ ಸಂಸ್ಥೆಗಳಿಗೆ ಸ್ವಾಯತ್ತತೆ ದೊರಕಬೇಕು. ಮುಖ್ಯವಾಗಿ ರಾಜ್ಯಗಳಿಗೆ ರಾಜಕೀಯ, ಆರ್ಥಿಕ ಸ್ವಾತಂತ್ರ್ಯ ದೊರಕಬೇಕು. ಸ್ಥಳಿಯ ಸಂಸ್ಥೆಗಳು ಸಬಲೀಕರಣಗೊಳ್ಳಬೇಕು. 'ಹಿಂದಿ–ಹಿಂದೂ–ಹಿಂದುಸ್ತಾನ' ಎಂಬ ಮತೀಯವಾದಕ್ಕೆ ಸೋಲುಂಟಾಗಬೇಕು. ಸಾಮಾಜಿಕ, ಭಾಷಾ ಬಹುತ್ವಕ್ಕೆ ಮಹತ್ವ ದೊರಕಬೇಕು. ಈ 'ಬೇಕುಗಳು' ಬೆಳೆದಷ್ಟು ಒಕ್ಕೂಟ ವ್ಯವಸ್ಥೆ ಸಬಲೀಕರಣಕ್ಕೆ ಸಹಕಾರಿಯಾಗುತ್ತದೆ.

ಬಿ.ಶ್ರೀಪಾದ ಭಟ್ (ಪ್ರಸ್ತಾವನೆಯಿಂದ)

ಭೂಮಿಯಿಂದ ಓಡಿಸಿದ ರೈತರು........ ಪುಟ 2 ರಿಂದ

ಸಣ್ಣ ವಯಸ್ಸಿನಲ್ಲೇ ಅಪ್ರೆಂಟಿಸ್‌ಗಳಾಗಿ ಒಪ್ಪಿಸಲಾಗುತ್ತಿತ್ತು. ಹಾಗೆ ಅಪ್ರೆಂಟಿಸ್‌ಗಳಾಗಿ ಪಡೆದು ದುಡಿಸಿಕೊಳ್ಳಲು ಅವರಿಗೆ ಹಣ ಕೂಡ ನೀಡಲಾಗುತ್ತಿತ್ತು! ಅಂತಹವರು ಈ ಬಾಲಕರನ್ನು ಹೊಡೆದು, ಬಡಿದು ಶಿಕ್ಷಿಸಲು, ಉಪವಾಸ ಹಾಕಲು ಎಲ್ಲ ಸ್ವಾತಂತ್ರ್ಯ ಇರುತ್ತಿತ್ತು. ಹೀಗೆ ಈ ಬಾಲಕರ ಪರಿಸ್ಥಿತಿ ಬೆಂಕಿಯಿಂದ ಬಾಣಲೆಗೆ ಎನ್ನುವಂತಾಗಿತ್ತು. ಹಲವರು ಇಂತಹ ಶ್ರಮಾಗಾರಗಳ ಯಾತನೆಯನ್ನು ತಪ್ಪಿಸಿಕೊಳ್ಳಲು ಓಡಿ ಹೋಗಿ ಮತ್ತೆ ಅಲೆಮಾರಿ ಭಿಕ್ಷುಕರಾಗುತ್ತಿದ್ದರು. ಅಂತವರನ್ನು ಸರ್ಕಾರಿ ಸಿಬ್ಬಂದಿ ಬೆನ್ನಟ್ಟಿಕೊಂಡು ಹೋಗಿ ಹಿಡಿದು ತಂದು ಮತ್ತೆ ಅವರಿಗೆ ಒಪ್ಪಿಸುತ್ತಿದ್ದರು.

ಅಂದಿನ ಚರ್ಚೆಯಲ್ಲಿ ಪ್ರಧಾನ ಅಭಿಪ್ರಾಯ ಹೀಗಿತ್ತು "ದುಷ್ಟತನಗಳಲ್ಲಿ ಅತ್ಯಂತ ದೊಡ್ಡದು ಸೋಮಾರಿತನ. ಬಡವರು ಬಲಿಪಶುಗಳು ನಿಜ. ಅವರ ಬದುಕಿನ ದುಸ್ಥಿತಿಯ ಬಲಿಪಶುಗಳಲ್ಲ. ಅದು ಅವರದೇ ಸೋಮಾರಿತನ, ಅಕ್ರಮ ಬದುಕು, ದುಷ್ಟತನಗಳಿಗೆ ಅವರು ಬಲಿಪಶುಗಳು. ಆದ್ದರಿಂದ ಸಮಸ್ಯೆಗೆ ಪರಿಹಾರ ಅವರಿಗೆ ದಾನ ಧರ್ಮ ನೀಡುವುದಲ್ಲ ಬದಲಾಗಿ ಅವರನ್ನು ದುಡಿಯುವಂತಹ ಮನಸ್ಥಿತಿ ಮೂಡುವಂತೆ ಸುಧಾರಿಸುವುದೇ ಮುಖ್ಯ." ಇಂತಹ ಚಿಂತನೆಗಳು ಮೇಲೆ ವಿವರಿಸಿದ ಕ್ರೂರ ಶಿಕ್ಷೆಗಳು ಪಾಪವಲ್ಲ, ಬದಲಾಗಿ ಕರ್ತವ್ಯ ಎಂದು ಆಳುವವರು,ಅಧಿಕಾರಿಗಳು ಭಾವಿಸುವಂತಾಯ್ತು.

ಹೀಗೆ ಪೂರ್ ಲಾ ಅಗ್ಗದ ಕೂಲಿಕಾರರನ್ನು ಒದಗಿಸುವ ಒಂದು ಮಾರ್ಗವಾಗಿತ್ತು.

ಈ ಕಾನೂನಿನ ಪ್ರಕಾರ ಪೂರ್ ರೇಟ್ ಎಂದು ಕನಿಷ್ಠ ಕೂಲಿಯನ್ನು ನಿಗದಿ ಮಾಡಲಾಗುತ್ತಿತ್ತು. ಯಾವ ಪ್ರದೇಶದಲ್ಲಿ ಕೂಲಿ ಈ ಪ್ರಮಾಣಕ್ಕಿಂತ ಕಡಿಮೆ ಇರುತ್ತಿತ್ತೋ ಅಲ್ಲಿ ಈ ಕೂಲಿದರಗಳ ವ್ಯತ್ಯಾಸವನ್ನು ಇವರನ್ನು ದುಡಿಸಿಕೊಳ್ಳುತ್ತಿದ್ದ ಜಮೀನುದಾರರಿಗೆ ಕೊಡಲಾಗುತ್ತಿತ್ತು. ಗಮನಿಸಿ, ಒಕ್ಕಲೆಬ್ಬಿಸಲ್ಪಟ್ಟ ಕೂಲಿಕಾರರಿಗಲ್ಲ, ಇವರನ್ನು ಅಗ್ಗವಾಗಿ ದುಡಿಸಿಕೊಳ್ಳಲು ಬಂಡವಾಳಶಾಹಿ ಕೃಷಿಯ ತೀವ್ರ ಬೇಸಾಯ ಕೈಗೊಂಡಿದ್ದ ಭೂ ಒಡೆಯರಿಗೆ ನೀಡುತ್ತಿದ್ದ ಸಹಾಯಧನ.

ಒಂದೆಡೆ ನಗರ ಪಟ್ಟಣಗಳ ವಿವಿಧ ಕೆಲಸಗಳಲ್ಲಿ ದುಡಿಸಿಕೊಳ್ಳುವವರಿಗೆ, ಬಂಡವಾಳಶಾಹಿ ಕೃಷಿಕರಿಗೆ ಬಹಳ ಫಲದಾಯಕವಾದ ಕಾನೂನಾಗಿತ್ತು ಈ ಬಡವರ ಕಾನೂನುಗಳು.

ಭೂಮಿಯಿಂದ ರೈತರನ್ನು ಒಕ್ಕಲೆಬ್ಬಿಸುವುದು ಮಾತ್ರ ಹೆಚ್ಚಾಗುತ್ತಲೇ ಹೋಯಿತು. ಬ್ರಿಟನ್‌ನ ಇಂಗ್ಲೆಂಡ್ ಪ್ರದೇಶಗಳಿಂದ ಐರ್ಲ್ಯಾಂಡ್, ಸ್ಕಾಟ್ಲೆಂಡ್‌ಗಳಿಗೆ ಹಬ್ಬಿತು. ಎರಡು ಶತಮಾನಗಳ ನಂತರ 1851 ರಲ್ಲಿ ಇಂಗ್ಲೆಂಡಿನ ಕೆಲ ಭಾಗಗಳಲ್ಲಿ ಹತ್ತು ಲಕ್ಷದಷ್ಟು ಬಡವರು ಇದ್ದರು. 1846–47 ರಲ್ಲಿ ಐರ್ಲೆಂಡ್ ಒಂದರಲ್ಲಿಯೇ 85 ಲಕ್ಷ ರೈತರು ಬಡತನಕ್ಕೆ ದೂಡಲ್ಪಟ್ಟರು. ಆಗ ಉಂಟಾದ ವಿಶ್ವದ ಚರಿತ್ರೆಯಲ್ಲಿ ದಾಖಲಾದ ಭೀಕರ ಕ್ಷಾಮದಲ್ಲಿ ಹತ್ತು ಲಕ್ಷ ಜನರು ಸಾವನ್ನಪ್ಪಿದರು. ಇಂಗ್ಲೆಂಡಿನಲ್ಲಿ ಜವಳಿ ಕೈಗಾರಿಕೆಗಳ ಪರಿಣಾಮವಾಗಿ ಐದು ಲಕ್ಷ ತಮ್ಮ ಜೀವನಾಧಾರವನ್ನು ಕಳೆದುಕೊಂಡ ನೇಕಾರರೂ ಬಡವರ ಲೆಕ್ಕಕ್ಕೆ ಸೇರಿದರು.

ಈ ವಿದ್ಯಮಾನ ಕೇವಲ ಇಂಗ್ಲೆಂಡಿಗೆ ಸೀಮಿತವಾಗಿರಲಿಲ್ಲ. ಫ್ರಾನ್ಸ್, ನೆದರ್‌ಲ್ಯಾಂಡ್ ಮೊದಲಾದ ಇತರ ಬಂಡವಾಳಶಾಹಿ ದೇಶಗಳಲ್ಲೂ ಕಣ್ಣಿಗೆ ಹೊಡೆಯುವಂತೆ ಕಾಣುತ್ತಿತ್ತು. ಇದನ್ನು ಭಿಕ್ಷುಕರೆಂಬ ಪ್ಲೇಗ್ ಪೀಡೆ ಎಂದು ಕರೆಯಲಾಗಿದೆ.

ಪೂರ್ ಲಾ ಗಳು ಸೋಮಾರಿತನದ ತಾಯಿ:

ಈ ಸಂಖ್ಯೆಗಳು ಪೂರ್ ಲಾ ಗಳಿದ್ದರೂ ಒಂದು ಕಡೆ ಬಡವರ ಸಂಖ್ಯೆ ವಿಪರೀತ ಹೆಚ್ಚಾಯಿತು ಎಂಬುದನ್ನು ಎತ್ತಿ ತೋರಿಸುತ್ತವೆ. ಮತ್ತೊಂದು ಕಡೆ ಈ ಕಾನೂನುಗಳ ಜಾರಿಗೆ ಸರ್ಕಾರದ ವೆಚ್ಚ ಬಹಳ ಹೆಚ್ಚಾಗುತ್ತಿದೆ ಎಂದು ಬಂಡವಾಳಶಾಹಿಗಳು ಕೂಗೆಬ್ಬಿಸಿದರು.

"ಈ ಪೂರ್ ಲಾ (ಬಡವರ ಕಾನೂನು) ಎಂಬುದು ಸೋಮಾರಿತನದ ತಾಯಿ. ಅವರು ಅವಮಾನಕ್ಕೋ, ಕಾನೂನಿಗೋ ಹೆದರಿ ದುಡಿಯುವಂತಾಗಬೇಕು. ಅದಕ್ಕೆ ಬದಲಾಗಿ ಅವರಿಗೆ ದುಡಿಯದೆ ಊಟ ನೀಡಿದರೆ, ಅವರ ಮಕ್ಕಳನ್ನೂ ಸಾಕಿದರೆ, ಅವರು ಮುದುಕರಾದ ಮೇಲೂ ಅವರನ್ನು ನೋಡಿಕೊಳ್ಳುವ ವ್ಯವಸ್ಥೆ ಮಾಡಿದರೆ ಅವರೇಕೆ ದುಡಿಯುತ್ತಾರೆ? ಅದರಿಂದಾಗಿ ಕೂಲಿಗಳ ದರ ಹೆಚ್ಚಾಗುತ್ತದೆ. ಇಡೀ ಸಮಾಜದ ಮೇಲೆ ಹೊರೆಯಾಗುತ್ತದೆ" ಎಂದು ಅಂದಿನ ಅರ್ಥಶಾಸ್ತ್ರಜ್ಞರು ಹೇಳಲಾರಂಭಿಸಿದರು.

ಅಂದಿನ ವ್ಯಾಪಾರಿಗಳು, ಕೈಗಾರಿಕಾ ಮಾಲೀಕರ ಬದುಕಿನ ತತ್ವವೇ ಅವರ ಸಾಧನೆಗಳಿಗೆ ಅವರು ಯಾರ ಸಹಾಯವಿಲ್ಲದೆ ಮಾಡಿದ ಸ್ವಂತ ಪ್ರಯತ್ನಗಳೇ ಕಾರಣ. ಸಮಾಜದ, ಪರಿಸ್ಥಿತಿಯ ಯಾವ ಕಾರಣವೂ ಅಲ್ಲ ಎಂಬ ಅವರ ಈ ತತ್ವ ಅಂದಿನ ಸಮಾಜದ ಪ್ರಧಾನ ಚಿಂತನೆ ಎಂಬಂತೆ ಮೂಡಿಸಲಾಗಿತ್ತು. ಈ ವ್ಯಕ್ತಿವಾದದ ಇನ್ನೊಂದು ಮುಖವೇ ಬಡತನಕ್ಕೆ ಕೂಡಾ ಆಯಾ ವ್ಯಕ್ತಿಗಳೇ ಕಾರಣ. ಸಮಾಜವಲ್ಲ. ಸಮಾಜ ಅವರ ಬಡತನದ ಹೊಣೆ ಹೊರಬೇಕಾಗಿಲ್ಲ.

ಇದು ಬಂಡವಾಳಶಾಹಿ ಯುಗದ ಪ್ರಧಾನ ಸಿದ್ಧಾಂತ. ಅಂದೂ ಇಂದೂ. ಬ್ರಿಟನ್‌ನಲ್ಲೂ ಭಾರತದಲ್ಲೂ, ಇಡೀ ವಿಶ್ವದಲ್ಲೂ.

ಸುಪ್ರೀಂ ಕೋರ್ಟ್ ತಂಟೆಗೆ ಹೋಗಬೇಡಿ

ಪ್ರಕಾಶ್ ಕಾರಟ್

ಬಿಜೆಪಿ ನಾಯಕರು ಮತ್ತು ಭಾರತದ ಉಪ ರಾಷ್ಟ್ರಪತಿ ಜಗದೀಪ್ ಧನಕರ್, ಸುಪ್ರೀಂ ಕೋರ್ಟ್ ಮೇಲೆ ದುಷ್ಟ ದಾಳಿಯನ್ನು ಆರಂಭಿಸಿದ್ದಾರೆ. ರಾಜ್ಯ ಶಾಸನಸಭೆ ಅಂಗೀಕರಿಸಿದ ಮಸೂದೆಗಳನ್ನು ತಡೆ ಹಿಡಿಯುವಲ್ಲಿ ತಮಿಳುನಾಡು ರಾಜ್ಯಪಾಲರ ಅಸಾಂವಿಧಾನಿಕ ಪಾತ್ರದ ಬಗ್ಗೆ ಸುಪ್ರೀಂ ಕೋರ್ಟ್‌ನ ತೀರ್ಪು ಹಾಗೂ ಆನಂತರ, ವಕ್ಫ್ ತಿದ್ದುಪಡಿ ಕಾನೂನು ಬಗ್ಗೆ ಭಾರತದ ಮುಖ್ಯ ನ್ಯಾಯಮೂರ್ತಿ (ಸಿಜೆಐ) ನೇತೃತ್ವದ ಪೀಠ ಹೊರಡಿಸಿದ ಮಧ್ಯಂತರ ಆದೇಶದ ಹಿನ್ನೆಲೆಯಲ್ಲಿ ಈ ದಾಳಿಗಳನ್ನು ನಡೆಸಲಾಗುತ್ತಿದೆ. ದೇಶದ ಕಾನೂನು ತಮಗೆ ಅನ್ವಯವಾಗದಿರುವುದರಿಂದ ಜಡ್ಜ್‌ಗಳು ಯಾವುದೇ ಹೊಣೆಗಾರಿಕೆಯಿಲ್ಲದ 'ಸೂಪರ್ ಸಂಸತ್ತು' ಆಗುತ್ತಿದ್ದಾರೆ ಎಂದು ಧನಕರ್ ಹೇಳಿದ್ದಾರೆ. ಸಂಪೂರ್ಣ ನ್ಯಾಯ ಒದಗಿಸಲು ಕೋರ್ಟ್‌ಗೆ ವಿಶೇಷ ಅಧಿಕಾರಗಳನ್ನು ಕೊಡುವ ಸಂವಿಧಾನದ 142ನೇ ವಿಧಿಯು 'ಪ್ರಜಾಸತ್ತಾತ್ಮಕ ಶಕ್ತಿಗಳ ವಿರುದ್ಧದ ನ್ಯೂಕ್ಲಿಯರ್ ಕ್ಷಿಪಣಿಯಾಗಿದೆ' ಎಂದು ಧನಕರ್ ವರ್ಣಿಸಿದ್ದಾರೆ.

ಬಿಜೆಪಿ ಸಂಸದ ನಿಶಿಕಾಂತ್ ದುಬೆ ಸಿಜೆಐ ಸಂಜೀವ್ ಖನ್ನಾ ವಿರುದ್ಧ ಹೆಚ್ಚು ನಿಂದನಾತ್ಮಕವಾಗಿ ಮಾತನಾಡಿದ್ದು, 'ದೇಶದಲ್ಲಿನ ಎಲ್ಲ ಅಂತಃಕಲಹಗಳಿಗೆ ಸಿಜೆಐ ಖನ್ನಾ ಅವರೇ ಹೊಣೆ' ಎಂದು ವರ್ಣಿಸಿದ್ದಾರೆ. ಸುಪ್ರೀಂ ಕೋರ್ಟೇ ಕಾನೂನುಗಳನ್ನು ಮಾಡುವುದಾದರೆ ಸಂಸತ್ತನ್ನೇ ಮುಚ್ಚಿಬಿಡಬಹುದು ಎಂದೂ ದುಬೆ ಹೇಳಿದ್ದಾರೆ.

ಸಂಸತ್ತಿಗೆ ಅಧೀನ

ನ್ಯಾಯಾಂಗವು ಸಂಸತ್ತಿಗೆ ಅಧೀನವಾಗಿರಬೇಕೆಂಬುದು ಧನಕರ್ ಮತ್ತು ಕಂಪನಿಯ ಬಯಕೆಯಾಗಿದೆ. ಇದು ಸಂವಿಧಾನದ ಯೋಜನೆಗೆ ವಿರುದ್ಧವಾಗಿದೆ. ಶಾಸಕಾಂಗ ಅಂಗೀಕರಿಸಿದ ಯಾವುದೇ ಕಾನೂನು ಸಂವಿಧಾನಕ್ಕೆ ಅನುಗುಣವಾಗಿದೆಯೇ ಎಂದು ಪರಿಶೀಲಿಸುವ ಅಧಿಕಾರ ಉನ್ನತ ನ್ಯಾಯಾಂಗಕ್ಕಿದೆ. ಸಂಸತ್ತು ಅಂಗೀಕರಿಸಿದ ಸಂವಿಧಾನ ತಿದ್ದುಪಡಿಗಳನ್ನು ಕೂಡ ಅವು 'ಮೂಲ ಸಂರಚನೆ'ಯ ಚೌಕಟ್ಟಿನಲ್ಲಿ ಇದೆಯೇ ಎನ್ನುವುದನ್ನು ಸುಪ್ರೀಂ ಕೋರ್ಟ್ ಪರಿಶೀಲಿಸಬಹುದಾಗಿದೆ.

ತಮಿಳುನಾಡು ರಾಜ್ಯಪಾಲ ಆರ್.ಎನ್. ರವಿ, ರಾಜ್ಯ ವಿಧಾನಸಭೆ ಅಂಗೀಕರಿಸಿದ ಹತ್ತು ಮಸೂದೆಗಳಿಗೆ ಅಂಕಿತ ಹಾಕದೇ ತಡೆ ಹಿಡಿದದ್ದನ್ನು ಅಸಾಂವಿಧಾನಿಕ ಎಂದು ಇಬ್ಬರು ಸದಸ್ಯರ ಸುಪ್ರೀಂ ಕೋರ್ಟ್ ಪೀಠ ತನ್ನ ಐತಿಹಾಸಿಕ ತೀರ್ಪಿನಲ್ಲಿ ಹೇಳಿದ್ದು ಬಿಜೆಪಿ ಮತ್ತು ಉಪ ರಾಷ್ಟ್ರಪತಿಯಂಥ ಅದರ ಪಕ್ಷಪಾತಿ ಬೆಂಬಲಿಗರ ಕಣ್ಣು ಕೆಂಪಾಗಲು ಕಾರಣವಾಗಿದೆ. ಶಾಸನಸಭೆ ಮಸೂದೆಗಳನ್ನು ಮತ್ತೆ ಅಂಗೀಕರಿಸಿದ ನಂತರವೂ ಸಂವಿಧಾನದ ನಿಯಮಗಳಂತೆ ಮಸೂದೆಗಳನ್ನು ಅಂಗೀಕರಿಸದೆ ರಾಜ್ಯಪಾಲರು ಅವುಗಳನ್ನು ರಾಷ್ಟ್ರಪತಿಗೆ ರವಾನಿಸಿದ್ದರು. ರಾಜ್ಯಪಾಲರ ಈ ಕ್ರಮ ಕಾನೂನು ಪ್ರಕಾರ ತಪ್ಪು ಹಾಗೂ ಅಕ್ರಮ ಎಂದು ಕೋರ್ಟ್ ಘೋಷಿಸಿದೆ. 142ನೇ ವಿಧಿಯನ್ನು ಅನ್ವಯಿಸಿ ಆ ಹತ್ತು ಮಸೂದೆಗಳು ಅಂಗೀಕಾರವಾಗಿ ಕಾನೂನಾಗಿವೆ ಎಂದೂ ಸರ್ವೋನ್ನತ ನ್ಯಾಯಾಲಯ ಘೋಷಿಸಿದೆ. ಈ ಪ್ರಕರಣದಲ್ಲಿ, ರಾಜ್ಯಪಾಲರ ಅಸಾಂವಿಧಾನಿಕ ಕ್ರಮವನ್ನು ಸರಿಪಡಿಸುವಲ್ಲಿ ಕೋರ್ಟ್ ಸರಿಯಾಗಿಯೇ ಮಧ್ಯಪ್ರವೇಶ ಮಾಡಿದೆ. ಬಿಜೆಪಿಯೇತರ ರಾಜ್ಯ ಸರಕಾರಗಳು ಹಾಗೂ ಶಾಸಕಾಂಗಳ ಕೆಲಸಗಳಿಗೆ ಅಡ್ಡಿಪಡಿಸಲು ಹಾಗೂ ಹಸ್ತಕ್ಷೇಪ ನಡೆಸಲು ರಾಜ್ಯಪಾಲರುಗಳನ್ನು



ಒಂದು ಸಾಧನವಾಗಿ ಬಳಸುವ ಬಿಜೆಪಿಗೆ ಇದು ಕಾರ್ಯಾಂಗ ಹಾಗೂ ಸಂಸತ್ತನ್ನು ಮೀರಿ ಸುಪ್ರೀಂ ಕೋರ್ಟ್ ನಡೆದುಕೊಳ್ಳುವಂತೆ ಕಾಣುತ್ತದೆ. ಬಿಜೆಪಿ ನೇತೃತ್ವದ ಕೇಂದ್ರ ಸರಕಾರದ ಈ ಸರ್ವಾಧಿಕಾರಿ ಧೋರಣೆಯನ್ನು ಈಗ ಸುಪ್ರೀಂ ಕೋರ್ಟ್‌ನಲ್ಲಿ ಯಶಸ್ವಿಯಾಗಿ ಪ್ರಶ್ನಿಸಲಾಗಿದೆ.

ವಕ್ಫ್ ತಿದ್ದುಪಡಿ ಮಸೂದೆ ವಿಚಾರದಲ್ಲಿ ಸಿಜೆಐ ಸಂಜೀವ್ ಖನ್ನಾ ನೇತೃತ್ವದ ಮೂವರು ಸದಸ್ಯರ ಪೀಠ, ಒಂದು ಧಾರ್ಮಿಕ ಗುಂಪು ಅಥವಾ ಅಲ್ಪಸಂಖ್ಯಾತರಿಗೆ ಸಂವಿಧಾನ ಕೊಡಮಾಡಿರುವ ಹಕ್ಕುಗಳನ್ನು ಉಲ್ಲಂಘಿಸುವ ಮಸೂದೆಯ ಕೆಲವು ಅಂಶಗಳನ್ನು ಪ್ರಶ್ನಿಸಿದೆ. 'ಬಳಕೆದಾರರಿಂದ ವಕ್ಫ್' (ವಕ್ಫ್–ಬೈ–ಯೂಸ್) ಪರಿಕಲ್ಪನೆಯನ್ನು ತೆಗೆದು ಹಾಕುವ ಅತಿರೇಕದ ನಿಯಮವನ್ನು ತರಲಾಗಿದೆ ಎಂದು ಕೋರ್ಟ್ ಹೇಳಿದೆ. ಈ ಮೂಲಕ, ಈ ಕಾನೂನು ಅನುಷ್ಠಾನಕ್ಕೆ ಬಂದಲ್ಲಿ, ಒಂದೇ ಏಟಿನಲ್ಲಿ ಹತ್ತಾರು ಸಾವಿರ ವಕ್ಫ್ ಆಸ್ತಿಗಳು ಕಾನೂನಿನ ಸಿಂಧುತ್ವ ಹೊಂದಿರುವುದಿಲ್ಲ ಎನ್ನುವುದನ್ನು ಕೋರ್ಟ್ ಗಮನಿಸಿದೆ. ಎರಡನೆಯದಾಗಿ, ಮುಸ್ಲಿಮೇತರರನ್ನು ವಕ್ಫ್ ಮಂಡಳಿಗೆ ಹೇಗೆ ನೇಮಿಸಿಕೊಳ್ಳಬಹುದು ಎಂದು ಕೋರ್ಟ್ ಪ್ರಶ್ನಿಸಿದೆ. ಅಲ್ಲದೆ, ದೇವಸ್ಥಾನಗಳ ಟ್ರಸ್ಟ್‌ಗಳು ಮತ್ತು ಮಂಡಳಿಗೆ ಮುಸ್ಲಿಮರನ್ನು ನೇಮಿಸಿಕೊಳ್ಳಲಾಗುತ್ತದೆಯೇ ಎಂದೂ ಪ್ರಶ್ನಿಸಿದೆ. ಮೂರನೆಯದಾಗಿ, ವಕ್ಫ್ ಆಸ್ತಿಗಳ ವಿಚಾರದಲ್ಲಿ ಉದ್ಭವಿಸುವ ವಿವಾದಗಳನ್ನು ನಿರ್ಧರಿಸುವಲ್ಲಿ ಜಿಲ್ಲಾಧಿಕಾರಿಗಳ ಪಾತ್ರವನ್ನು ಕೂಡ ಸುಪ್ರೀಂ ಕೋರ್ಟ್ ಪ್ರಶ್ನೆಗೆ ಒಳಪಡಿಸಿದೆ.

ಈ ನಿಯಮಗಳ ವಿಚಾರದಲ್ಲಿ ಕೋರ್ಟ್ ಮಧ್ಯಂತರ ಆದೇಶ ಹೊರಡಿಸುವುದರಿಂದ ತಪ್ಪಿಸಿಕೊಳ್ಳುವ ಸಲುವಾಗಿ, ಕೋರ್ಟ್‌ನ ಅಂತಿಮ ನಿರ್ಧಾರ ಪ್ರಕಟವಾಗುವವರೆಗೂ ವಕ್ಫ್–ಬೈ–ಯೂಸ್ ಪ್ರಾಪರ್ಟಿಗಳ ಸ್ವರೂಪವನ್ನು ಸರಕಾರ ಯಾವ ರೀತಿಯಲ್ಲೂ ಬದಲಾಯಿಸುವುದಿಲ್ಲ ಎಂದು ಸಾಲಿಸಿಟರ್ ಜನರಲ್ ಮುಂದಿನ ವಿಚಾರಣೆಯಲ್ಲಿ ಹೇಳಿದರು. ವಕ್ಫ್ ಮಂಡಳಿಗಳಿಗೆ ಯಾವುದೇ ನೇಮಕಗಳನ್ನು ಮಾಡುವುದಿಲ್ಲ ಎಂದೂ ಅವರು ಹೇಳಿದರು. ಸುಪ್ರೀಂ ಕೋರ್ಟ್ ಹೊರಡಿಸಿದ ಆದೇಶದಲ್ಲಿ ಈ ಎರಡೂ ಹೇಳಿಕೆಗಳನ್ನು ದಾಖಲಿಸಿಕೊಳ್ಳಲಾಗಿದೆ. ಮೇ 5ರಂದು ಈ ಪ್ರಕರಣದ ಮುಂದಿನ ವಿಚಾರಣೆ ನಡೆಯಲಿದೆ.

ವಕ್ಫ್ ತಿದ್ದುಪಡಿ ಕಾನೂನು ಕುರಿತ ಸುಪ್ರೀಂ ಕೋರ್ಟ್‌ನ ಈ ಧೋರಣೆಯೇ ನಿಶಿಕಾಂತ್ ದುಬೆಯಂಥ ಬಿಜೆಪಿ ನಾಯಕರ ಕಣ್ಣು ಕಿಸುರಾಗಲು ಕಾರಣವಾಗಿದೆ. ಅವರ ಹೇಳಿಕೆಗಳು ಉನ್ನತ ನ್ಯಾಯಾಂಗಕ್ಕೆ ಬೆದರಿಕೆ ಹಾಗೂ ದಬ್ಬಾಳಿಕೆ ಎಂದೇ ಕಾಣಬೇಕಾಗುತ್ತದೆ. ದುಬೆಯ ಈ ಹೇಳಿಕೆಗಳನ್ನು ಸುಪ್ರೀಂ ಕೋರ್ಟ್ ವಕೀಲರ ಸಂಘ (ಬಾರ್ ಅಸೋಸಿಯೇಶನ್) ಖಂಡಿಸಿದ್ದು ಅವು ಸಿಜೆಐಯವರಿಗೆ ಮಾನಹಾನಿಕರವಾದ ಹೇಳಿಕೆಗಳು ಎಂದು ಅಭಿಪ್ರಾಯಪಟ್ಟಿದೆ. ದುಬೆ ವಿರುದ್ಧ ಮಾನನಷ್ಟ ಪ್ರಕರಣ ನಡೆಸಲು ಅನುಮತಿ ನೀಡುವಂತೆ ಬಾರ್ ಎಸೋಸಿಯೇಶನ್ ಅಟಾರ್ನಿ ಜನರಲ್‌ರಿಗೆ ಮನವಿ ಮಾಡಿದೆ.

ಎಲ್ಲ ಸಾಂವಿಧಾನಿಕ ಸಂಸ್ಥೆಗಳನ್ನು ತನ್ನ ನಿಯಂತ್ರಣಕ್ಕೆ ತರುವ ಸರ್ವಾಧಿಕಾರಿ ಕ್ರಮದ ಭಾಗವಾಗಿ ಮೋದಿ ಸರಕಾರವು ಸುಪ್ರೀಂ ಕೋರ್ಟ್‌ಅನ್ನು ಕೂಡ ಬಿಟ್ಟಿಲ್ಲ. ಆದರೆ, ತನ್ನ ಎಲ್ಲ ಪ್ರಯತ್ನಗಳ ಹೊರತಾಗಿಯೂ ಉನ್ನತ ನ್ಯಾಯಾಂಗವನ್ನು ವಶಪಡಿಸಿಕೊಳ್ಳಲು ಹಾಗೂ ಸಂಪೂರ್ಣವಾಗಿ ತನಗೆ ಅಧೀನಗೊಳಿಸಿಕೊಳ್ಳಲು ಅದಕ್ಕೆ ಸಾಧ್ಯವಾಗಿಲ್ಲ.

ಇತ್ತೀಚಿನ ದಿನಗಳಲ್ಲಿ, ಕೇಂದ್ರೀಯ ಸಂಸ್ಥೆಗಳಿಗೆ ಟಾರ್ಗೆಟ್ ಆಗಿರುವ ವ್ಯಕ್ತಿಗಳ ಹಕ್ಕುಗಳನ್ನು ರಕ್ಷಿಸುವ ಹಲವು ತೀರ್ಪುಗಳನ್ನು ಸುಪ್ರೀಂ ಕೋರ್ಟ್ ನೀಡಿದೆ. ಹಲವು ಕೇಸ್‌ಗಳಲ್ಲಿ ಜಾಮೀನು ಮಂಜೂರು ಮಾಡಿದೆ. ಇದರೊಂದಿಗೆ, ರಾಜ್ಯ ಶಾಸಕಾಂಗಳ ಹಕ್ಕುಗಳ ರಕ್ಷಣೆ ಮತ್ತು ರಾಜ್ಯಪಾಲರುಗಳು ಅಧಿಕಾರ ದುರುಪಯೋಗ ಪಡಿಸಿಕೊಳ್ಳುವುದಕ್ಕೆ ಕಡಿವಾಣ ಹೇರುವ ತೀರ್ಪುಗಳನ್ನು ಕೊಟ್ಟಿರುವುದು; ಹಾಗೂ ವಕ್ಫ್ ಆಸ್ತಿಗಳ ವಿಚಾರದಲ್ಲಿ ಮುಸ್ಲಿಮರ ಹಕ್ಕುಗಳನ್ನು ದಮನಿಸುವ ಕ್ರಮದ ಪರವಾಗಿ ತಾನು ನಿಲ್ಲುವುದಿಲ್ಲ ಎಂಬ ಕೋರ್ಟ್ ಸಂದೇಶ ಇವೇ ಮುಂತಾದವು ಉನ್ನತ ನ್ಯಾಯಾಂಗದ ಮೇಲೆ ದಾಳಿ ನಡೆಸಲು ಇನ್ನೊಂದು ಸಂದರ್ಭವನ್ನು ಒದಗಿಸಿದೆ. ಜನತಾಂತ್ರಿಕ ವಿಭಾಗಗಳೆಲ್ಲವೂ ಒಂದಾಗಿ ನ್ಯಾಯಾಂಗದ ಸ್ವಾತಂತ್ರ್ಯವನ್ನು ರಕ್ಷಿಸಲು ಒಗ್ಗಟ್ಟಿನಿಂದ ಹೋರಾಡಲು ಮತ್ತು 'ಸುಪ್ರೀಂ ಕೋರ್ಟ್ ತಂಟೆಗೆ ಬರಬೇಡಿ' (ಹ್ಯಾಂಡ್ಸ್ ಆಫ್ ದಿ ಸುಪ್ರೀಂ ಕೋರ್ಟ್) ಎಂದು ಹೇಳಲು ಇದು ಸಕಾಲವಾಗಿದೆ.

ಅನು: ವಿಶ್ವ

ಕೃಷಿಯನ್ನು ಆವಿಷ್ಕರಿಸಿದ ಮಹಿಳೆ...... ಪುಟ 5 ರಿಂದ

ಒಳಗಾಗುತ್ತಿದ್ದಾನೆ. ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಸುಲಭವಾಗಿ ಕೃಷಿ ಸಾಲಗಳು ಸಿಗದಿರುವುದರಿಂದ ಗ್ರಾಮೀಣ ಪ್ರದೇಶದಲ್ಲಿನ ಮಹಿಳೆಯರು ಮಹಿಳಾ ಸ್ವಸಹಾಯ ಗುಂಪುಗಳ ಮೂಲಕ ಸಿಗುವ ಸಾಲ ತೆಗೆದುಕೊಂಡು, ಆ ಸಾಲ ತೀರಿಸಲಾಗದೆ ಆತ್ಮಹತ್ಯೆಗೆ ಶರಣಾದ ಪ್ರಕರಣಗಳೂ ಇತ್ತೀಚೆಗೆ ವರದಿಯಾಗಿವೆ. ಇಂತಹ ಮೈಕ್ರೋ ಫೈನಾನ್ಸ್ ಸಂಸ್ಥೆಗಳು ಪ್ರತಿದಿನ ಮಹಿಳೆಯರಿಗೆ ಸಾಲ ವಸೂಲಾತಿಯ ಹೆಸರಿನಲ್ಲಿ ಮಾನಸಿಕ ಹಿಂಸೆ ಮತ್ತು ಕಿರುಕುಳ ನೀಡುತ್ತಿವೆ. ಈ ಸಮಾಜ ಎಷ್ಟು ಸಂವೇದನಾ ರಹಿತವಾಗಿದೆಯೆಂದರೆ, ರೈತ ಮಹಿಳೆಯರ ಆತ್ಮಹತ್ಯೆಗಳನ್ನು ರೈತರ ಆತ್ಮಹತ್ಯೆ ಎಂದು ಪರಿಗಣಿಸದ ಸ್ಥಿತಿಗೆ ತಲುಪಿದೆ. ಗ್ರಾಮೀಣ ಪ್ರದೇಶದಲ್ಲಿರುವ ಒಂಟಿ ಮಹಿಳೆಯರು, ಪರಿತ್ಯಕ್ತ ಮಹಿಳೆಯರು, ದಲಿತ ಮಹಿಳೆಯರು ಇನ್ನಷ್ಟು ಸಂಕಷ್ಟಗಳನ್ನು ಅನುಭವಿಸುತ್ತಿದ್ದಾರೆ.

ಒಟ್ಟಾರೆಯಾಗಿ ಕೃಷಿಯ ಹುಟ್ಟಿಗೆ ಮೂಲ ಕಾರಣವಾದ ಮಹಿಳೆಯರನ್ನು ಇಂದು ಕೃಷಿಯ ಒಡೆತನದಿಂದ ದೂರವಿಡಲಾಗಿದೆ. ಮತ್ತೆ ಕೃಷಿಯ ಮೇಲಿನ ಒಡೆತನ ಪುರುಷನಷ್ಟೇ ಸಮಾನವಾಗಿ ಮಹಿಳೆಗೂ ಸಿಕ್ಕಾಗ ಭಾರತದ ಕೃಷಿಯೂ ಬದಲಾಗುತ್ತದೆ. ಮತ್ತು ಮಹಿಳೆಯರ ಸ್ಥಿತಿಗತಿಗಳೂ ಸುಧಾರಿಸುತ್ತವೆ. ಈ ಹಿನ್ನೆಲೆಯಲ್ಲಿ ಭಾರತದ ಇಂದಿನ ಕೃಷಿ ಬಿಕ್ಕಟ್ಟನ್ನು ಮಹಿಳಾ ಕಣ್ಣುಗಳ ಮೂಲಕ ನೋಡುವ ಪ್ರಯತ್ನ ಇದಾಗಿದೆ.

ಕೊನೆಗೊಂದು ಮಾತು: ಡಾ.ಬಿ.ಆರ್. ಅಂಬೇಡ್ಕರ್ ರವರು ಹೇಳಿದ್ದು ಹೀಗೆ "ಯಾವುದೇ ಒಂದು ಸಮಾಜದ ಪ್ರಗತಿಯನ್ನು ಆ ಸಮಾಜದ ಮಹಿಳೆಯರು ಎಷ್ಟು ಸ್ವತಂತ್ರರಾಗಿದ್ದಾರೆಂದು ನೋಡಿ ಅಳೆಯಬಹುದು". ಈ ಹಿನ್ನೆಲೆಯಲ್ಲಿ ಇಂದಿನ ಭಾರತದ ಸಮಾಜವನ್ನು ವಿಶ್ಲೇಷಿಸಿದರೆ ನಮಗೆ ವಾಸ್ತವದ ಅರಿವಾಗುತ್ತದೆ.

ಕೇವಲ ಪ್ರವಾಸಿಗರ ಮೇಲಿನ ದಾಳಿಯಲ್ಲ..... ಪುಟ 3 ರಿಂದ

ಸಿಪಿಐ(ಎಂ) ಕೇಂದ್ರ ಸಮಿತಿ ಸದಸ್ಯರು ಮತ್ತು ಕಾಶ್ಮೀರ ಕಣಿವೆಯ ಕುಲಗಾಮ್‌ನಿಂದ ಆರು ಬಾರಿ ಆರಿಸಿ ಬಂದಿರುವ ಶಾಸಕರೂ ಆಗಿರುವ ಮಹಮ್ಮದ್ ಯುಸುಫ್ ತರಿಗಾಮಿ ಬಹಳ ವೇದನೆಯಿಂದ ಹೇಳಿದ್ದಾರೆ. ಈ ಬಾರಿ ಇವರು ಜಮಾತೇ ಇಸ್ಲಾಮಿ ಅಭ್ಯರ್ಥಿಯನ್ನೇ ಸೋಲಿಸಿ ಶಾಸಕರಾಗಿದ್ದಾರೆ.

ಈ ಹೇಯ ಕೃತ್ಯದ ವಿರುದ್ಧ ಕಾಶ್ಮೀರದಲ್ಲಿ ಅಪಾರ ನೋವು ಮತ್ತು ದುಃಖವಿದೆ. ಭಯೋತ್ಪಾದನೆಗೆ ಯಾವುದೇ ಧರ್ಮ ಅಥವಾ ಸಮರ್ಥನೆ ಇಲ್ಲ. ನಾವು, ಕಾಶ್ಮೀರದ ಜನರು, ಸೌಹಾರ್ದದಿಂದ ಇಡೀ ದೇಶದೊಂದಿಗೆ ನಿಲ್ಲುತ್ತೇವೆ, ದುಃಖ ಮತ್ತು ಸಂವೇದನೆಯಲ್ಲಿ ಒಂದಾಗಿದ್ದೇವೆ. ಈ ದಾಳಿಗಳು ನಮ್ಮೆಲ್ಲರ ಮಾನವೀಯತೆಯ ಮೇಲಿನ ದಾಳಿಯಾಗಿದ್ದು, ಧಾರ್ಮಿಕ ಅಥವಾ ಕೋಮು ಆಧಾರದ ಮೇಲೆ ನಮ್ಮನ್ನು ವಿಭಜಿಸಲು ಬಿಡಲಾಗದು ಎಂದು ಅವರು ಹೇಳಿದ್ದಾರೆ.

28 ಜೀವಗಳನ್ನು, ಬಲಿ ತೆಗೆದುಕೊಂಡ ಪಹಲ್ಗಾಮ್‌ನ ಬೈಸರನ್‌ನಲ್ಲಿ ನಡೆದ ಭಯೋತ್ಪಾದಕ ದಾಳಿಯು ಜಮ್ಮು ಮತ್ತು ಕಾಶ್ಮೀರದ ಇಡೀ ಪ್ರದೇಶವನ್ನು ಬೆಚ್ಚಿಬೀಳಿಸಿದ ಅತ್ಯಂತ ದುರದೃಷ್ಟಕರ ಮತ್ತು ದುರಂತ ಘಟನೆಯಾಗಿದೆ. ಹೀಗೆ ಬಲಿಯಾದವರಲ್ಲಿ ಅನಂತ್‌ನಾಗ್‌ನ ಸ್ಥಳೀಯ ಕುದುರೆಯವನೂ ಸೇರಿದ್ದಾನೆ ಎಂದಿರುವ ಅವರು, "ಹಿಂಸೆ ಯಾವುದೇ ಉದ್ದೇಶವನ್ನು ಪೂರೈಸುವುದಿಲ್ಲ, ಅದನ್ನು ನಿಸ್ಸಂದಿಗ್ಧವಾಗಿ ಖಂಡಿಸಬೇಕು. ಭಯೋತ್ಪಾದಕರು ನಮ್ಮನ್ನು ನಿರ್ದೇಶಿಸಲು ಸಾಧ್ಯವಿಲ್ಲ ಮತ್ತು ಮುಗ್ಧ ನಾಗರಿಕರನ್ನು ಗುರಿಯಾಗಿಸಿಕೊಂಡು ನಡೆದ ಇಂತಹ ಹೇಡಿತನದ ಕೃತ್ಯಗಳಿಗೆ ಯಾವುದೇ ನಾಗರಿಕ ಸಮಾಜದಲ್ಲಿ ಸ್ಥಾನವಿಲ್ಲ. ಅಪರಾಧಿಗಳನ್ನು ಪತ್ತೆ ಹಚ್ಚಿ ವಿಳಂಬವಿಲ್ಲದೆ ಶಿಕ್ಷಿಸಬೇಕು." ಎಂದು ಆಗ್ರಹಿಸಿದ್ದಾರೆ.

ಈ ಘಟನೆಯ ನಂತರ, ಅನೇಕ ಕಾಶ್ಮೀರಿಗಳು ಗಾಯಗೊಂಡವರಿಗೆ ರಕ್ತದಾನ ಮಾಡಲು ಮತ್ತು ಇತರ ರೀತಿಗಳಲ್ಲಿ ಸಹಾಯ ಮಾಡಲು ಮುಂದೆ ಬಂದರು. ಪ್ರವಾಸಿಗರನ್ನು ಉಳಿಸಲು ಪ್ರಯತ್ನಿಸಿದ್ದರಿಂದಾಗಿ ಕೊಲ್ಲಲ್ಪಟ್ಟ ಕಾಶ್ಮೀರಿ ಕುದುರೆಯವನ ಯತ್ನ ಕಾಶ್ಮೀರದ ಸಾಮಾನ್ಯ ಜನರು ಕೋಮು ಭಾವನೆಗಳನ್ನು ಕೆರಳಿಸುವ ಯಾವುದೇ ಪ್ರಯತ್ನಗಳಿಗೆ ಬಲಿಯಾಗಲು ನಿರಾಕರಿಸಿದ್ದಾರೆ ಎಂಬುದರ ಸಂಕೇತವಾಗಿದೆ ಎಂದು ಮುಂದುವರೆದು ಅವರು ಹೇಳಿದ್ದಾರೆ. ಬಿಕ್ಕಟ್ಟಿನ ಈ ಸಮಯದಲ್ಲಿ, ಜನರು ಒಗ್ಗಟ್ಟಿನಿಂದ ಇರಬೇಕು, ಭಯೋತ್ಪಾದಕರ ವಿಭಜಕ ಮತ್ತು ಮೋಸಗೊಳಿಸುವ ಕಾರ್ಯಸೂಚಿಗೆ ಬಲಿಯಾಗಬಾರದು ಎಂದು ಅವರು ಕರೆ ನೀಡಿದ್ದಾರೆ.

ಪಕ್ಷಾತೀತವಾಗಿ ಕಾಶ್ಮೀರದ ಜನರು ತೀವ್ರ ದುಃಖ ವ್ಯಕ್ತಪಡಿಸಿದ್ದಾರೆ. ಪ್ರತಿಭಟನೆಗಳು, ಮೇಣದಬತ್ತಿ ಮೌನಾಚರಣೆ ಮತ್ತು ಬಂದ್‌ಗಳನ್ನು ಆಚರಿಸಲಾಗಿದೆ. ವ್ಯಾಪಾರಿಗಳು, ಉದ್ಯಮಿಗಳು, ಟ್ಯಾಕ್ಸಿ ನಿರ್ವಾಹಕರು ಮತ್ತು ರಾಜಕೀಯ ನಾಯಕರು ಏಕಕಂಠದಲ್ಲಿ ದಾಳಿಯನ್ನು ಖಂಡಿಸಿದ್ದಾರೆ ಎಂದು ಹೇಳುತ್ತ, ಜಮ್ಮು ಮತ್ತು ಕಾಶ್ಮೀರಕ್ಕೆ ಸಂಬಂಧಿಸಿದಂತೆ ಭದ್ರತಾ ಕ್ರಮಗಳನ್ನು ಮರುಪರಿಶೀಲಿಸಬೇಕು ಮತ್ತು ಅಂತಹ ಅಮಾನವೀಯ ಕೃತ್ಯಗಳು ಮರುಕಳಿಸದಂತೆ ನೋಡಿಕೊಳ್ಳಬೇಕು ಎಂದು ಕೇಂದ್ರ ಸರ್ಕಾರವನ್ನು ಅವರು ಒತ್ತಾಯಿಸಿದ್ದಾರೆ.

ಗಾಯಗೊಂಡ ಪ್ರವಾಸಿಗರ ಸ್ಥಿತಿಯ ಬಗ್ಗೆ ವಿಚಾರಿಸಲು ಆಸ್ಪತ್ರೆಗೆ ಭೇಟಿ ನೀಡಲು ತಾನು ಅಧಿಕಾರಿಗಳಿಂದ ಅನುಮತಿ ಕೋರಿದ್ದೆ, ಆದರೆ ದುರದೃಷ್ಟವಶಾತ್, ಆ ವಿನಂತಿಯನ್ನು ನಿರಾಕರಿಸಲಾಯಿತು ಎಂದೂ ಅವರು ಹೇಳಿದ್ದಾರೆ.

ಏಪ್ರಿಲ್ 22ರಂದು ಕಾಶ್ಮೀರದ ಪಹಲ್ಗಾಮ್ ನಲ್ಲಿ ನಡೆದ ಭಯೋತ್ಪಾದಕರ ಗುಂಡಿನ ದಾಳಿಗೆ 28 ಪ್ರವಾಸಿಗರು ಬಲಿಯಾಗಿದ್ದಾರೆ. ಇದು ರಾಷ್ಟ್ರವನ್ನೇ ಬೆಚ್ಚಿಬೀಳಿಸಿದೆ. ಈ ಕೃತ್ಯ ಖಂಡಿಸಿ ಮರುದಿನವೇ ಸಂಪೂರ್ಣ 'ಕಾಶ್ಮೀರ ಬಂದ್' ಮಾಡುವ ಮೂಲಕ ಕಾಶ್ಮೀರದ ಜನತೆ ಭಯೋತ್ಪಾದಕತೆ ವಿರುದ್ಧ ಒಗ್ಗಟು ತೋರಿದ್ದಾರೆ. ಜಮ್ಮು ಮತ್ತು ಕಾಶ್ಮೀರಕ್ಕೆ ಸ್ವಾಯತ್ತತೆಯನ್ನು ನೀಡಿದ್ದ 370ನೇ ವಿಧಿಯನ್ನು ರದ್ದುಗೊಳಿಸುವಂತಹ ಕ್ರಮಗಳ ಮೂಲಕ ಭಯೋತ್ಪಾದನೆಯನ್ನು ನಿಗ್ರಹಿಸಿದ್ದೇವೆ, ಅಲ್ಲಿ ಶಾಂತಿಯುತ ವಾತಾವರಣವನ್ನು ಸ್ಥಾಪಿಸಿದ್ದೇವೆ ಎಂದು ಮೋದಿ ಸರ್ಕಾರ ಹೆಮ್ಮೆಪಡುತ್ತಿರುವ ಸಮಯದಲ್ಲಿ ಈ ಭಯೋತ್ಪಾದಕ ದಾಳಿ ನಡೆದಿದೆ. ಭಯೋತ್ಪಾದಕ ದಾಳಿಗಳನ್ನು ಧಾರ್ಮಿಕ ದೃಷ್ಟಿಕೋನದಿಂದ ನೋಡುವುದು ಮತ್ತು ದ್ವೇಷವನ್ನು ಮತ್ತಷ್ಟು ಪ್ರಚೋದಿಸುವ ಪ್ರಚಾರವನ್ನು ಉತ್ತೇಜಿಸುವುದು ದೇಶದ ಭವಿಷ್ಯಕ್ಕೆ ಒಳ್ಳೆಯದಲ್ಲ.

ಪಹಲ್ಗಾಮ್: ರಾಷ್ಟ್ರವನ್ನೇ ಬೆಚ್ಚಿಬೀಳಿಸಿದ ಭಯೋತ್ಪಾದಕ ದಾಳಿ

ಜಮ್ಮು ಕಾಶ್ಮೀರದ ಅನಂತ್‌ನಾಗ್ ಜಿಲ್ಲೆಯ ಪಹಲ್ಗಾಮ್ (Pahalgam)ನಲ್ಲಿ ಏಪ್ರಿಲ್ 22ರಂದು ಉಗ್ರರು ನಡೆಸಿದ ಗುಂಡಿನ ದಾಳಿಯಲ್ಲಿ 28 ಪ್ರವಾಸಿಗರು ಹತ್ಯೆಗೀಡಾಗಿದ್ದಾರೆ. ಇದು ರಾಷ್ಟ್ರವನ್ನೇ ಬೆಚ್ಚಿಬೀಳಿಸಿದೆ. ಗಂಭೀರ ಗಾಯಗಳೊಂದಿಗೆ 20ಕ್ಕೂ ಹೆಚ್ಚು ಜನರನ್ನು ಆಸ್ಪತ್ರೆಯಲ್ಲಿ ತೀವ್ರ ನಿಗಾ ಘಟಕಕ್ಕೆ ದಾಖಲಿಸಲಾಗಿದೆ. ದಾಳಿಯಲ್ಲಿ ಮೃತಪಟ್ಟ 28 ಜನರಲ್ಲಿ ಇಬ್ಬರು ವಿದೇಶಿ ಪ್ರವಾಸಿಗರು. ಕರ್ನಾಟಕ ಮತ್ತು ಮಹಾರಾಷ್ಟ್ರದಿಂದ ತಲಾ ಇಬ್ಬರು ಮತ್ತು ಉತ್ತರ ಪ್ರದೇಶ, ಹರಿಯಾಣ ಮತ್ತು ಗುಜರಾತ್‌ನಿಂದ ತಲಾ ಒಬ್ಬರು ಇದ್ದಾರೆ ಎಂದು ತಿಳಿದುಬಂದಿದೆ. ಜಮ್ಮು ಮತ್ತು ಕಾಶ್ಮೀರ ಸರ್ಕಾರ ಮೃತರ ಕುಟುಂಬಗಳಿಗೆ 10 ಲಕ್ಷ ರೂಪಾಯಿ ಮತ್ತು ಗಂಭೀರವಾಗಿ ಗಾಯಗೊಂಡವರಿಗೆ 2 ಲಕ್ಷ ರೂಪಾಯಿ ಪರಿಹಾರ ಘೋಷಿಸಿದೆ. ಜಮ್ಮು ಮತ್ತು ಕಾಶ್ಮೀರ ಮುಖ್ಯಮಂತ್ರಿ ಒಮರ್ ಅಬ್ದುಲ್ಲಾ ಅವರು ಸರ್ವಪಕ್ಷಗಳ ಸಭೆ ಕರೆದು ಮುಂದೆ ತೆದುಕೊಳ್ಳಬೇಕಾದ ಕ್ರಮಗಳ ಕುರಿತು ಚರ್ಚಿಸಿದ್ದಾರೆ.

ಜಮ್ಮು ಮತ್ತು ಕಾಶ್ಮೀರಕ್ಕೆ ಸ್ವಾಯತ್ತತೆಯನ್ನು ನೀಡಿದ್ದ 370ನೇ ವಿಧಿಯನ್ನು ರದ್ದುಗೊಳಿಸುವಂತಹ ಕ್ರಮಗಳ ಮೂಲಕ ಭಯೋತ್ಪಾದನೆಯನ್ನು ನಿಗ್ರಹಿಸಿ ಕಾಶ್ಮೀರದಲ್ಲಿ ಶಾಂತಿಯುತ ವಾತಾವರಣವನ್ನು ಸ್ಥಾಪಿಸಿದ್ದೇವೆ ಎಂದು ಮೋದಿ ಸರ್ಕಾರ ಹೆಮ್ಮೆಪಡುತ್ತಿರುವ ಸಮಯದಲ್ಲಿ ಈ ಭಯೋತ್ಪಾದಕ ದಾಳಿ ನಡೆದಿದೆ. 2019ರ ಪುಲ್ವಾಮಾ ಭಯೋತ್ಪಾದಕ ದಾಳಿಯಲ್ಲಿ 44 ಸೈನಿಕರು ಸಾವನ್ನಪ್ಪಿದ ನಂತರ... ಇಂದಿನ ಈ ದಾಳಿಯು ಕೇಂದ್ರ ಸರ್ಕಾರದ ಭದ್ರತಾ ವೈಫಲ್ಯವನ್ನು ಎತ್ತಿ ತೋರಿಸುತ್ತದೆ. ಸೇನೆ ಮತ್ತು ಜಮ್ಮು ಮತ್ತು ಕಾಶ್ಮೀರ ಪೊಲೀಸರು ಕೇಂದ್ರ ಸರ್ಕಾರದ ನಿಯಂತ್ರಣದಲ್ಲಿದ್ದಾರೆ ಎಂಬುದನ್ನು ಯಾರೂ ಮರೆಯಬಾರದು. ಈ ಭಯೋತ್ಪಾದಕ ದಾಳಿಯು ಬಲವಾದ ಭದ್ರತಾ ಕ್ರಮಗಳೊಂದಿಗೆ ನಾಗರಿಕರು ಮತ್ತು ಪ್ರವಾಸಿಗರನ್ನು ರಕ್ಷಿಸುವ ಜವಾಬ್ದಾರಿಯನ್ನು ನೆನಪಿಸುತ್ತದೆ.



ಮಿನಿ ಸ್ವಿಟ್ಜರ್ಲ್ಯಾಂಡ್!

ಭಯೋತ್ಪಾದಕ ದಾಳಿಯಲ್ಲಿ ರಕ್ತಸಿಕ್ತವಾಗಿದ್ದ ಪಹಲ್ಗಾಮ್‌ನ ಬೈಸರನ್ ಪ್ರದೇಶವನ್ನು ಮಿನಿ ಸ್ವಿಟ್ಜರ್ಲ್ಯಾಂಡ್ ಎಂದು ಕರೆಯಲಾಗುತ್ತದೆ. ಸುಂದರವಾದ ಹುಲ್ಲುಗಾವಲುಗಳು, ದಟ್ಟವಾದ ಪೈನ್ ಕಾಡುಗಳು ಮತ್ತು ಹಿನ್ನೆಲೆಯಲ್ಲಿ ಎತ್ತರದ ಹಿಮನದಿಗಳು ಪ್ರಕೃತಿ ಪ್ರಿಯರಿಗೆ ಆನಂದವನ್ನು ನೀಡುತ್ತವೆ. ಸಮುದ್ರ ಮಟ್ಟದಿಂದ 8,000 ಅಡಿ ಎತ್ತರದಲ್ಲಿರುವ ಈ ಪ್ರದೇಶವು ತಂಪಾಗಿರುತ್ತದೆ, ಇಲ್ಲಿ ಬೇಸಿಗೆಯ ಮಧ್ಯದಲ್ಲಿಯೂ ಹತ್ತು ಡಿಗ್ರಿ ಸೆಲ್ಸಿಯಸ್‌ಗಿಂತ ಕಡಿಮೆ ತಾಪಮಾನವಿರುತ್ತದೆ. ಅದಕ್ಕಾಗಿಯೇ ಪ್ರತಿ ವರ್ಷ ಈ ಋತುವಿನಲ್ಲಿ ಸಾವಿರಾರು ಪ್ರವಾಸಿಗರು ಬೈಸರನ್‌ಗೆ ಭೇಟಿ ನೀಡುತ್ತಾರೆ. ಅಂತಹ ಸ್ಥಳದಲ್ಲಿ ಸಂಭ್ರಮದಿಂದ ಅಡ್ಡಾಡುತ್ತಿದ್ದ ಪ್ರವಾಸಿಗರ ಮೇಲೆ ಭಯೋತ್ಪಾದಕರ ಗುಂಪೊಂದು ಗುಂಡಿನ ದಾಳಿ ನಡೆಸಿದೆ. ಬದುಕುಳಿದ ಕುಟುಂಬ ಸದಸ್ಯರಿಗೆ ಇದು ಭಯಾನಕ ದೃಶ್ಯವಾಗಿತ್ತು. ಕಣ್ಣೆದುರೇ ಗಂಡನನ್ನು ಕಳೆದುಕೊಂಡು ಅಸಹಾಯಕಳಾದ ನವವಿವಾಹಿತ ವಧು; ತಮ್ಮ ತಂದೆಯನ್ನು ಗುಂಡಿಕ್ಕಿ ಕೊಲ್ಲುವುದನ್ನು ನೋಡುತ್ತಲೇ ಇದ್ದ ಮಕ್ಕಳು, ಶಸ್ತ್ರಸಜ್ಜಿತ ಭಾರತೀಯ ಸೈನಿಕರು ರಕ್ಷಣೆಗೆ ಬಂದಾಗಲೂ ಭಯಭೀತರಾಗಿದ್ದ ತಾಯಿಯೊಬ್ಬಳು, "ನೀವು ನನ್ನನ್ನು ಕೊಂದರೆ, ನನ್ನನ್ನು ಕೊಂದುಬಿಡಿ.. ಆದರೆ ನನ್ನ ಮಗಳನ್ನು ಬಿಟ್ಟುಬಿಡಿ" ಎಂದು ಬೇಡಿಕೊಳ್ಳುತ್ತಿರುವುದು... ಇವೆಲ್ಲವೂ ದುಷ್ಟರು ಸೃಷ್ಟಿಸಿದ ಅಮಾನವೀಯತೆಯ ಸಂಕೇತಗಳಾಗಿವೆ.

ಆಕ್ರೋಶಗೊಂಡ ಕಾಶ್ಮೀರಿಗಳಿಂದ ಪ್ರತಿಭಟನೆ; ಕಾಶ್ಮೀರ ಸಂಪೂರ್ಣ ಬಂದ್

ಹೆಚ್ಚಿನ ಬಲಿಪಶುಗಳು ಪ್ರವಾಸಿಗರಾಗಿದ್ದ ಈ ಕ್ರೂರ ದಾಳಿಯನ್ನು ಖಂಡಿಸಿ ಬುಧವಾರ (ಏಪ್ರಿಲ್ 23) ಕಾಶ್ಮೀರ ಕಣಿವೆಯಾದ್ಯಂತ ಸಂಪೂರ್ಣ ಬಂದ್ ಆಚರಿಸಲಾಯಿತು. 35 ವರ್ಷಗಳಲ್ಲಿ ಮೊದಲ ಬಾರಿಗೆ ಕಾಶ್ಮೀರಿಗಳು ಭಯೋತ್ಪಾದಕ ದಾಳಿಯನ್ನು ಖಂಡಿಸಿ ಸಂಪೂರ್ಣ ಬಂದ್ ಪ್ರತಿಭಟನೆ ನಡೆಸಿದರು. ಹಲವೆಡೆ ಪ್ರತಿಭಟನೆಗಳು ನಡೆದವು, ಮೇಣದಬತ್ತಿ ಹಚ್ಚಿ ಮೌನಾಚರಣೆಗಳನ್ನು ಆಚರಿಸಿದ್ದಾರೆ. ಈ ಘಟನೆಯ ನಂತರ, ಅನೇಕ ಕಾಶ್ಮೀರಿಗಳು ಗಾಯಗೊಂಡವರಿಗೆ ರಕ್ತದಾನ ಮಾಡಲು ಮತ್ತು ಇತರ ರೀತಿಗಳಲ್ಲಿ ಸಹಾಯ ಮಾಡಲು ಮುಂದೆ ಬಂದರು.

ಕಾಶ್ಮೀರದ ಪ್ರಮುಖ ಪತ್ರಿಕೆಗಳು ಸಹ ತಮ್ಮ ಮುಖಪುಟಗಳನ್ನು ಸಂಪೂರ್ಣವಾಗಿ ಕಪ್ಪು ಬಣ್ಣದಲ್ಲಿ ಮುದ್ರಿಸಿ, ಈ ಘೋರ ದಾಳಿಗೆ ತಮ್ಮ ವಿರೋಧವನ್ನು ದಾಖಲಿಸಿದವು. 'ಗ್ರೇಟರ್ ಕಾಶ್ಮೀರ್', 'ರೈಸಿಂಗ್ ಕಾಶ್ಮೀರ್', 'ಕಾಶ್ಮೀರ್ ಉಸ್ಮಾ', 'ಅಫ್ತಾಬ್' ಮತ್ತು 'ಟೈಮ್ಸ್ ಆಫ್ ಇರ್ಷಾದ್' ಸೇರಿದಂತೆ ಇಂಗ್ಲಿಷ್ ಮತ್ತು ಉರ್ದು ಭಾಷಾ ಪತ್ರಿಕೆಗಳು ಪ್ರತಿಭಟನೆಯಲ್ಲಿ ಭಾಗವಹಿಸಿದ್ದವು. ಅದೇ ರೀತಿ, ಭಯೋತ್ಪಾದಕ ದಾಳಿಯ ನಂತರ, ಕಾಶ್ಮೀರದ ಜನರು ಭಯಭೀತರಾದ ಪ್ರವಾಸಿಗರಿಗೆ ಆಹಾರ ಸೇರಿದಂತೆ ಇತರ ಸೌಲಭ್ಯಗಳೊಂದಿಗೆ ಮಸೀದಿಗಳಲ್ಲಿ ಆಶ್ರಯ ನೀಡುವ ಮೂಲಕ ಬೆಂಬಲದ ಹಸ್ತ ಚಾಚಿದ್ದಾರೆ.

ಧಾರ್ಮಿಕ ದೃಷ್ಟಿಕೋನದಿಂದ ನೋಡುವುದು ಒಳ್ಳೆಯದಲ್ಲ

ಭಯೋತ್ಪಾದಕರು ಧರ್ಮದ ಆಧಾರದ ಮೇಲೆ ಪ್ರತಿಯೊಬ್ಬ ಪ್ರವಾಸಿಗರನ್ನು ಗುಂಡಿಕ್ಕಿ ಕೊಂದರು ಎಂದು ಮಾಧ್ಯಮಗಳು ವರದಿ ಮಾಡಿವೆ. ಭಯೋತ್ಪಾದಕ ದಾಳಿಗಳನ್ನು ಧಾರ್ಮಿಕ ದೃಷ್ಟಿಕೋನದಿಂದ ನೋಡುವುದು ಮತ್ತು ದ್ವೇಷವನ್ನು ಮತ್ತಷ್ಟು ಪ್ರಚೋದಿಸುವ ಪ್ರಚಾರವನ್ನು ಉತ್ತೇಜಿಸುವುದು ದೇಶದ ಭವಿಷ್ಯಕ್ಕೆ ಒಳ್ಳೆಯದಲ್ಲ. ಮತಾಂಧತೆಯಿಂದ ನಡೆಸಲ್ಪಡುವ ಭಯೋತ್ಪಾದನೆ ಮತ್ತು ಮತಾಂಧತೆಗೆ ಯಾವುದೇ ಧರ್ಮ ಅಥವಾ ಪ್ರದೇಶ ತಿಳಿದಿಲ್ಲ. ತಮ್ಮ ಹುಚ್ಚುತನಕ್ಕೆ ಅಡ್ಡಿಯಾಗುವ ಯಾರನ್ನಾದರೂ ಅವರು ತಮ್ಮ ಶತ್ರು ಎಂದು ಪರಿಗಣಿಸುತ್ತಾರೆ.

ಈ ದಾಳಿಗೆ ತುತ್ತಾದವರಲ್ಲಿ ಇಬ್ಬರು ವಿದೇಶಿ ಪ್ರವಾಸಿಗರು ಮತ್ತು ಅವರ ಬಂದೂಕುಗಳನ್ನು ಕಸಿದುಕೊಂಡು ಪ್ರವಾಸಿಗರನ್ನು ರಕ್ಷಿಸಲು ಹೋರಾಡಿದ ಅನಂತನಾಗ್ ನ ಸೈಯದ್ ಹುಸೇನ್ ಶಾ ಎಂಬ ಮುಸ್ಲಿಂ ಯುವಕನನ್ನೂ ಭಯೋತ್ಪಾದಕರು ಗುಂಡಿಕ್ಕಿ ಕೊಂದರು. ಆತ ಪ್ರವಾಸಿಗರನ್ನು ಕುದುರೆ ಸವಾರಿ ಮಾಡಿಸುವ ಕಾಯಕ ಮಾಡಿ ಬದುಕು ಕಟ್ಟಿಕೊಂಡಿದ್ದ. "ನಮ್ಮ ಕುಟುಂಬದಲ್ಲಿ ನನ್ನ ಮಗ ಮಾತ್ರ ಆದಾಯ ಗಳಿಸುವವನಾಗಿದ್ದ. ಈಗ ಅವನೂ ಸತ್ತಿದ್ದಾನೆ" ಎಂದು ಸೈಯದ್ ಹುಸೇನ್ ಶಾ ಅವರ ತಾಯಿ ಕಣ್ಣೀರಿನ ಸಂದರ್ಶನವೊಂದರಲ್ಲಿ ಹೇಳಿದರು.

ದಾಳಿಯ ಹೊಣೆ ಹೊತ್ತ ದಿ ರೆಸಿಸ್ಟೆನ್ಸ್ ಫ್ರಂಟ್

ಹಲವು ರಾಷ್ಟ್ರಗಳ ನಾಯಕರು ಮತ್ತು ಎಲ್ಲಾ ರಾಜಕೀಯ ಪಕ್ಷಗಳು ಈ ದಾಳಿಯನ್ನು ಒಮ್ಮತದಿಂದ ಖಂಡಿಸಿವೆ. ಪ್ರವಾಸಿಗರ ಹತ್ಯೆಗೆ ಪಾಕಿಸ್ತಾನದ ವಿದೇಶಾಂಗ ಸಚಿವಾಲಯ ಸಂತಾಪ ಸೂಚಿಸಿದೆ. ಈ ಮಧ್ಯೆ, ಪಾಕಿಸ್ತಾನದ ರಕ್ಷಣಾ ಸಚಿವ ಖವಾಜಾ ಆಸಿಫ್, "ಕಾಶ್ಮೀರ ದಾಳಿಯಲ್ಲಿ ನಮ್ಮ ಪಾತ್ರವಿಲ್ಲ" ಎಂದು ಹೇಳಿದ್ದಾರೆ. ದಿ ರೆಸಿಸ್ಟೆನ್ಸ್ ಫ್ರಂಟ್ (ಟಿಆರ್‌ಎಫ್) ಎಂಬ ಭಯೋತ್ಪಾದಕ ಗುಂಪು ದಾಳಿಯ ಹೊಣೆಯನ್ನು ಹೊತ್ತುಕೊಂಡಿದೆ. ಜಮ್ಮು ಮತ್ತು ಕಾಶ್ಮೀರದ ಸ್ವಾಯತ್ತತೆಯನ್ನು ರದ್ದುಗೊಳಿಸಿದ ನಂತರ 2019ರಲ್ಲಿ ಈ ಸಂಘಟನೆಯನ್ನು ರಚಿಸಲಾಗಿದೆ ಮತ್ತು ಇದು ಲಷ್ಕರ್–ಎ–ತೊಯ್ಬಾದೊಂದಿಗೆ ಸಂಯೋಜಿತವಾಗಿದೆ ಎಂದು ಗುಪ್ತಚರ ಸಂಸ್ಥೆಗಳು ಘೋಷಿಸಿವೆ.

ಪಾಕಿಸ್ತಾನಿ ಭಯೋತ್ಪಾದಕ ಹಫೀಜ್ ಸಯೀದ್‌ನ ಲಷ್ಕರ್–ಎ–ತೊಯ್ಬಾ (ಎಲ್‌ಇಟಿ) ಮುಂಚೂಣಿ ಸಂಘಟನೆಯಾದ ದಿ ರೆಸಿಸ್ಟೆನ್ಸ್ ಫ್ರಂಟ್ ದಾಳಿಯ ಹೊಣೆಯನ್ನು ಹೊತ್ತುಕೊಂಡ ನಂತರ ಭಯೋತ್ಪಾದಕರ ಹುಡುಕಾಟ ತೀವ್ರಗೊಂಡಿದೆ. ಅರಣ್ಯ ಪ್ರದೇಶಗಳಲ್ಲಿ ಅವರು ಅಡಗಿಕೊಂಡಿರಬಹುದು ಎಂಬ ಕಾರಣಕ್ಕೆ ಹೆಲಿಕಾಪ್ಟರ್‌ಗಳನ್ನು ಬಳಸಿಕೊಂಡು ಶೋಧ ಕಾರ್ಯಾಚರಣೆ ನಡೆಯುತ್ತಿದೆ. ಜಮ್ಮು ಮತ್ತು ಕಾಶ್ಮೀರ ಪೊಲೀಸರಿಗೆ ಸಹಾಯ ಮಾಡಲು ರಾಷ್ಟ್ರೀಯ ತನಿಖಾ ಸಂಸ್ಥೆಯ (ಎನ್‌ಐಎ) ತಂಡವೂ ದಾಳಿ ನಡೆದ ಸ್ಥಳಕ್ಕೆ ತಲುಪಿದೆ.

ಗಡಿಯಲ್ಲಿ ಉದ್ವಿಗ್ನತೆ

ಪಹಲ್ಗಾಮ್ ಭಯೋತ್ಪಾದಕ ದಾಳಿಗೆ ಪ್ರತಿಯಾಗಿ ಭಾರತ 'ಸರ್ಜಿಕಲ್ ಸ್ಟ್ರೈಕ್' ನಡೆಸಬಹುದು ಎಂಬ ಭಯದಿಂದ ಪಾಕಿಸ್ತಾನ ಮುನ್ನೆಚ್ಚರಿಕೆ ಕ್ರಮವಾಗಿ ಭಾರತದ ಗಡಿಯಲ್ಲಿ ಯುದ್ಧ ವಿಮಾನಗಳನ್ನು ಪುಟ 15 ಕ್ಕೆ

ಜಮ್ಮು ಕಾಶ್ಮೀರದ ಅನಂತ್‌ನಾಗ್ ಜಿಲ್ಲೆಯ ಪಹಲ್ಗಾಮ್ ನಲ್ಲಿ ನಡೆದ ಭಯೋತ್ಪಾದಕರ ದಾಳಿ ಖಂಡಿಸಿ ಮತ್ತು ಕಾಶ್ಮೀರದಲ್ಲಿ ಶಾಂತಿ ನೆಲೆಸಲು ಪಣತೊಡುವ ಘೋಷಣೆಗಳೊಂದಿಗೆ ಸಿಪಿಐ(ಎಂ) ಪಕ್ಷ ಮತ್ತು ಅದರ ಸಾಮೂಹಿಕ ಸಂಘಟನೆಗಳ ಕಾರ್ಯಕರ್ತರು ಕರ್ನಾಟಕ ಸೇರಿದಂತೆ ದೇಶಾದ್ಯಂತ ಹಲವು ಸ್ಥಳಗಳಲ್ಲಿ ಪ್ರತಿಭಟನೆ ನಡೆಸಿದ್ದಾರೆ. ಕರ್ನಾಟಕದ ಹಲವು ಜಿಲ್ಲೆ ಮತ್ತು ತಾಲೂಕು ಕೇಂದ್ರಗಳಲ್ಲಿ ಪ್ರತಿಭಟನೆಗಳು ನಡೆದ ವರದಿಗಳು ಬಂದಿವೆ. ಬೆಂಗಳೂರಿನಲ್ಲಿರುವ ಪಕ್ಷದ ರಾಜ್ಯ ಕೇಂದ್ರ ಕಛೇರಿ ಬಳಿ ನಡೆದ ಪ್ರತಿಭಟನಾ ಕಾರ್ಯಕ್ರಮದಲ್ಲಿ ಪಕ್ಷದ ರಾಜ್ಯ ಕಾರ್ಯದರ್ಶಿ ಕೆ.ಪ್ರಕಾಶ್, ಪಕ್ಷದ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರುಗಳಾದ ಯು.ಬಸವರಾಜ, ಕೆ.ನೀಲಾ, ಎಸ್.ವರಲಕ್ಷ್ಮಿ, ಕೆ.ಯಾದವಶೆಟ್ಟಿ, ಕೆ.ಎಸ್.ವಿಮಲಾ, ಗೋಪಾಲಕೃಷ್ಣ ಹರಳಹಳ್ಳಿ, ಮೀನಾಕ್ಷಿ ಸುಂದರಂ, ಸಯ್ಯದ್ ಮುಜೀಬ್, ಮುನಿವೆಂಕಟಪ್ಪ, ಕೆ.ಮಹಂತೇಶ್ ಸೇರಿದಂತೆ ಪಕ್ಷದ ಇತರೆ ನಾಯಕರು ಮತ್ತು ಕಾರ್ಯಕರ್ತರು ಭಾಗವಹಿಸಿದ್ದರು. ಬೆಂಗಳೂರಿನ ಕೆ.ಆರ್.ಪುರಂ, ಬಸವನಗುಡಿ, ಶ್ರೀರಾಮ್ ಪುರ, ರಾಜಾಜಿನಗರ, ಜಾಲಹಳ್ಳಿ ಕ್ರಾಸ್ ಸೇರಿದಂತೆ ಹಲವೆಡೆಗಳಲ್ಲಿ, ಚಿಕ್ಕಬಳ್ಳಾಪುರ ಜಿಲ್ಲೆಯ ಬಾಗೇಪಲ್ಲಿ ಪಟ್ಟಣದಲ್ಲಿ, ಗುಲ್ಬರ್ಗ, ಕಾರವಾರ, ತುಮಕೂರು ಟೌನ್ ಮತ್ತು ಜಿಲ್ಲೆಯ ತಿಪಟೂರು, ಹಾವೇರಿ ಸೇರಿದಂತೆ ರಾಜ್ಯ ವಿವಿಧ ಭಾಗಗಳಲ್ಲಿ ಭಯೋತ್ಪಾದಕರ ವಿರುದ್ಧ ಪ್ರತಿಭಟನೆ ಮತ್ತು ಮೊಂಬತ್ತಿ ಹಚ್ಚಿ ಈ ದಾಳಿಯಲ್ಲಿ ಪ್ರಾಣ ಕಳೆದುಕೊಂಡವರಿಗೆ ಶ್ರದ್ಧಾಂಜಲಿ ಅರ್ಪಿಸಿದ ವರದಿಗಳು ಬಂದಿವೆ.



ತುಮಕೂರು



ಕಲಬುರಗಿ



ಕೆ.ಆರ್. ಪುರಂ



ಮೇ ಡೇ: ಸಂಕಷ್ಟಗಳ ಎದುರು ಸೆಣೆಸುವ ಸಂಕಲ್ಪ

ದುಡಿಯುವ ಜನರ ವರ್ಗ ಏಕತೆ ಮತ್ತು ಒಗ್ಗಟ್ಟನ್ನು ರಕ್ಷಿಸಲು

ಇವರ ಮೇಲಿನ ಎಲ್ಲಾ ರೀತಿಯ ದಾಳಿ, ದೌರ್ಜನ್ಯಗಳ ವಿರುದ್ಧ ಹೋರಾಡಲು ಸಿಐಟಿಯು ಪ್ರತಿಜ್ಞೆ

ವ್ಯವಸ್ಥಿತ ಬಿಕ್ಕಟ್ಟಿನಲ್ಲಿ ಮುಳುಗಿರುವ ನವ ಉದಾರವಾದಿ ಬಂಡವಾಳಶಾಹಿ ವ್ಯವಸ್ಥೆಯ ಆಕ್ರಮಣಕಾರಿ ದಾಳಿಯ ವಿರುದ್ಧ ಮತ್ತು ಹೋರಾಟದಿಂದ ಗಳಿಸಿದ ಹಕ್ಕುಗಳನ್ನು ರಕ್ಷಿಸಲು ಸಮರಧೀರ ಹೋರಾಟ ನಡೆಸುತ್ತಿರುವ ವಿಶ್ವದ ದುಡಿಯುವ ಜನರಿಗೆ ಸಿಐಟಿಯು ಕ್ರಾಂತಿಕಾರಿ ಶುಭಾಶಯಗಳನ್ನು ಕೋರುತ್ತದೆ. ಸಿಐಟಿಯು ದುಡಿಯುವ ವರ್ಗದ ಅಂತರರಾಷ್ಟ್ರೀಯತೆಗೆ ತನ್ನ ಬದ್ಧತೆಯನ್ನು ಹೊಂದಿದೆ. ಶೋಷಣೆ, ತಾರತಮ್ಯದ ವಿರುದ್ಧ, ಶಾಂತಿ ಮತ್ತು ಸಾಮರಸ್ಯಕ್ಕಾಗಿ ಎಲ್ಲಾ ದುಡಿಯುವ ಜನರ ಹೋರಾಟಗಳಲ್ಲಿ ಅವರೊಂದಿಗೆ ಒಗ್ಗೂಡಿ ನಿಲ್ಲುತ್ತದೆ.

ಅಭೂತಪೂರ್ವ ಸಂಕಷ್ಟ ಎದುರಿಸುತ್ತಿರುವ ಭಾರತೀಯ ಕಾರ್ಮಿಕ ವರ್ಗದ ಚಳುವಳಿ

ಸಮಕಾಲೀನ ಬಂಡವಾಳಶಾಹಿಯ ಆಳವಾಗುತ್ತಿರುವ ಬಿಕ್ಕಟ್ಟಿನಿಂದ ಉದ್ಭವಿಸಿರುವ ಸವಾಲಿನ ಪರಿಸ್ಥಿತಿಯಿಂದ ಭಾರತೀಯ ಕಾರ್ಮಿಕ ವರ್ಗದ ಚಳುವಳಿ ಅಭೂತಪೂರ್ವ ಸಂಕಷ್ಟವನ್ನು ಎದುರಿಸುತ್ತಿದೆ ಎಂಬುದನ್ನು ಸಿಐಟಿಯು ಅರಿತುಕೊಂಡಿದೆ. ಆಡಳಿತ ವರ್ಗದ ಪ್ರತಿಕ್ರಿಯೆಯು ಹೆಚ್ಚೆಚ್ಚು ಆಕ್ರಮಣಕಾರಿ ಮತ್ತು ಸರ್ವಾಧಿಕಾರಿಯಾಗಿ ಮಾರ್ಪಟ್ಟಿದೆ. ಸಾಮೂಹಿಕ ಕ್ರಿಯೆಯಲ್ಲಿ ತೊಡಗಿಸಿಕೊಳ್ಳುವ ಜನರ ಪ್ರಜಾಸತ್ತಾತ್ಮಕ ಹಕ್ಕುಗಳನ್ನು ವ್ಯವಸ್ಥಿತವಾಗಿ ಕಸಿದುಕೊಳ್ಳಲಾಗುತ್ತಿದೆ. ಕೆಲಸದ ಸ್ಥಳದಲ್ಲಿ ಮತ್ತು ರಾಷ್ಟ್ರೀಯ ಮಟ್ಟದಲ್ಲಿ ಕಾರ್ಮಿಕ ವರ್ಗದ ಮೇಲಿನ ಈ ದಾಳಿಯು ನವ-ಫ್ಯಾಸಿಸ್ಟ್ ಗುಣಲಕ್ಷಣಗಳನ್ನು ಪ್ರದರ್ಶಿಸುವ ಬಿಜೆಪಿ ನೇತೃತ್ವದ ಎನ್‌ಡಿಎ ಆಡಳಿತದ ವಿಶಿಷ್ಟ ಲಕ್ಷಣವಾಗಿದೆ.

18ನೇ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ–ಆರ್‌ಎಸ್‌ಎಸ್ ಕೂಟವು ಲೋಕಸಭೆಯಲ್ಲಿ ಬಹುಮತ ಕಳೆದುಕೊಂಡಿದೆ. ದುಡಿಯುವ ವರ್ಗಗಳು, ವಿಶೇಷವಾಗಿ ರೈತರು ಮತ್ತು ಕಾರ್ಮಿಕ ವರ್ಗವು ನಡೆಸಿದ ನಿರಂತರ ಪ್ರತಿರೋಧ ಚಳುವಳಿಗಳು ಇದಕ್ಕೆ ಪ್ರಮುಖ ಕಾರಣ ಎಂಬುದನ್ನು ಗಮನಿಸಬೇಕಿದೆ.

ಕಾರ್ಮಿಕ ಸಂಹಿತೆಗಳ ಅನುಷ್ಠಾನಕ್ಕೆ ತಡೆಯಲು ಸಾಧ್ಯವಾಗಿದೆ

ಸಂಸತ್ತಿನಲ್ಲಿ ಬಲ ಕುಗ್ಗಿಹೋಗಿದ್ದರೂ, ಕಾರ್ಪೊರೇಟ್–ಕೋಮುವಾದಿ ಮೈತ್ರಿಕೂಟವನ್ನು ಪ್ರತಿನಿಧಿಸುವ ಮೋದಿ ನೇತೃತ್ವದ ಎನ್‌ಡಿಎ ಸರ್ಕಾರವು, ಆರ್ಥಿಕ ನಿರ್ವಹಣೆ ಮತ್ತು ಸಾಮಾಜಿಕ ಆಡಳಿತ ಎರಡನ್ನೂ ಒಳಗೊಂಡ ಎಲ್ಲಾ ರಂಗಗಳಲ್ಲಿಯೂ ಉಗ್ರವಾದ ಸರ್ವಾಧಿಕಾರಿ ಕ್ರಮಗಳ ಮೂಲಕ ನವ ಉದಾರವಾದಿ ನೀತಿಗಳನ್ನು ಮುಂದಿಡುವಲ್ಲಿ ಪ್ರಯತ್ನಿಸುತ್ತಿದೆ. ಕಾರ್ಮಿಕ ವರ್ಗದ ಮೇಲೆ ವಾಸ್ತವದಲ್ಲಿ ಗುಲಾಮಗಿರಿಯ ಪರಿಸ್ಥಿತಿಗಳನ್ನು ಹೇರುವ ಗುರಿಯನ್ನು ಹೊಂದಿರುವ ಕಾರ್ಮಿಕ ಸಂಹಿತೆಗಳನ್ನು ಜಾರಿಗೆ ತರುವ ಪ್ರಯತ್ನಗಳನ್ನು ತೀವ್ರಗೊಳಿಸುತ್ತಿದೆ. ಈ ಕಾರ್ಮಿಕ ಸಂಹಿತೆಗಳು ಸಂಸತ್ತಿನಲ್ಲಿ ಅಂಗೀಕರಿಸಿದ ನಂತರವೂ 2025ರವರೆಗೆ ಅಂದರೆ ಸರಿಸುಮಾರು 5 ವರ್ಷಗಳ ಕಾಲ ಅನುಷ್ಠಾನಕ್ಕೆ ಬರುವುದನ್ನು ದೇಶದ ಕಾರ್ಮಿಕವರ್ಗವು ತನ್ನ ವಲಯ, ಕ್ಷೇತ್ರ ಹಾಗು ರಾಷ್ಟ್ರಮಟ್ಟದಲ್ಲಿ ನಡೆಸಿದ ನಿರಂತ ಹೋರಾಟಗಳು ಹಾಗು ಪ್ರತಿರೋಧದ ಮೂಲಕ ತಡೆಯಲು ಸಾಧ್ಯವಾಗಿದೆ.

"ಹಕ್ಕುಗಳಿಲ್ಲದ ಕಾರ್ಮಿಕರು–ಕಾರ್ಮಿಕ ಸಂಘಗಳಿಲ್ಲದ ಉದ್ದಿಮೆಗಳು" ನಿರ್ಮಿಸುವ ಗುರಿಯತ್ತ

ಸಂಘಟಿತ ಮತ್ತು ಅಸಂಘಟಿತ ವಲಯಗಳಲ್ಲಿನ ಉದ್ಯೋಗ ಸಂಬಂಧಗಳನ್ನು ನಿರಂತರವಾಗಿ ಪುನರ್ರಚಿಸಲಾಗುತ್ತಿದೆ. ಇದರಿಂದಾಗಿ ಒಟ್ಟಾರೆ ಉದ್ಯೋಗ ಸಂಬಂಧಗಳಲ್ಲಿ ತೀವ್ರ ದುರ್ಬಲತೆ ಮತ್ತು ಅನಿಶ್ಚಿತತೆಯನ್ನು ಉತ್ತೇಜಿಸಲಾಗುತ್ತಿದೆ ಎಂದು ಸಿಐಟಿಯು ಗಮನಿಸಿದೆ. ಲಾಭ ಹೆಚ್ಚಿಸಿಕೊಳ್ಳಲು ದುಡಿಯುವ ಜನರ ಹಿತಾಸಕ್ತಿಗೆ ವಿರುದ್ಧವಾಗಿ ಕೃತಕ ಬುದ್ಧಿಮತ್ತೆ(ಎಐ) ಸೇರಿದಂತೆ ಮುಂದುವರಿದ ತಂತ್ರಜ್ಞಾನವನ್ನು ಬಳಸಲಾಗುತ್ತಿದೆ. ಕಾರ್ಮಿಕರ ಸಂಘಟಿತ ಬಲವನ್ನು ನಿರ್ಮೂಲನೆ ಮಾಡುವ ಮೂಲಕ, ಎಲ್ಲಾ ರೀತಿಯ ಕಾನೂನು ರಕ್ಷಣೆಯಿಂದ ಕಾರ್ಮಿಕರನ್ನು ಹೊರದಬ್ಬುವ ಮೂಲಕ "ಹಕ್ಕುಗಳಿಲ್ಲದ ಕಾರ್ಮಿಕರು–ಕಾರ್ಮಿಕ ಸಂಘಗಳಿಲ್ಲದ ಉದ್ದಿಮೆಗಳು" ಎಂಬ ಸ್ಥಿತಿಯನ್ನು ದೇಶದಲ್ಲಿ ನಿರ್ಮಿಸುವುದನ್ನು ಸರ್ಕಾರವು ತನ್ನ ಗುರಿಯಾಗಿಸಿಕೊಂಡಿದೆ. ಇದು ಕೇವಲ ಕಾರ್ಮಿಕ ವೆಚ್ಚವನ್ನು ಕಡಿಮೆ ಮಾಡುವುದು ಮಾತ್ರವಲ್ಲದೆ, ಕಾರ್ಮಿಕರ ಹಕ್ಕುಗಳಿಗಾಗಿ ಹೋರಾಡುವ ಕಾರ್ಮಿಕ ಸಂಘಗಳನ್ನು ನಿರ್ಮೂಲನೆ ಮಾಡುವುದು ಹಾಗು ಕಾರ್ಮಿಕರ ಮೇಲೆ ಗುಲಾಮಗಿರಿಯ ಸ್ಥಿತಿಯನ್ನು ಹೇರುವುದು ಇದರ ಉದ್ದೇಶವಾಗಿದೆ. ಕಾರ್ಮಿಕ ಸಂಹಿತೆಗಳು ಈ ಪ್ರಕ್ರಿಯೆಯನ್ನು ಸುಗಮಗೊಳಿಸುತ್ತವೆ. ಸಾಮೂಹಿಕ ಹೊರಗುತ್ತಿಗೆ, ಅಪ್ರೆಂಟಿಸ್‌ಗಳು, ತರಬೇತಿದಾರರು, ಇಂಟರ್ನ್‌ಗಳು ಇತ್ಯಾದಿಗಳಿಂದ ಖಾಯಂ ಉದ್ಯೋಗವನ್ನು ಇಲ್ಲವಾಗಿಸುವುದು ಈ ಸಂಹಿತೆಗಳ ಪ್ರಮುಖ ವಿಷಯವಾಗುತ್ತದೆ. ಕಾರ್ಮಿಕರನ್ನು ಕಾರ್ಮಿಕ ಕಾನೂನುಗಳ ರಕ್ಷಣೆಯ ವ್ಯಾಪ್ತಿಯಿಂದ ಹೊರಗುಳಿಸಲು ನವೀನ ಪರಿಭಾಷೆಯನ್ನು ಬಳಸಲಾಗುತ್ತದೆ.

ಕ್ರೂರ ಕೃಷಿ ಕಾನೂನುಗಳನ್ನು ಮತ್ತೆ ಜಾರಿಗೆ ತರುವ ಪ್ರಯತ್ನ

ಮೋದಿ ನೇತೃತ್ವದ ಎನ್‌ಡಿಎ ಸರ್ಕಾರವು ಹಿಂಬಾಗಿಲಿನ ಮೂಲಕ ಕ್ರೂರ ಕೃಷಿ ಕಾನೂನುಗಳನ್ನು ಮತ್ತೆ ಜಾರಿಗೆ ತರಲು ಪ್ರಯತ್ನಿಸುತ್ತಿದೆ. ರೈತ ಚಳುವಳಿಯು ಐತಿಹಾಸಿಕ ರೈತರ ಹೋರಾಟದ ಮೂಲಕ ಈ ಕಾನೂನುಗಳನ್ನು ಸರ್ಕಾರವನ್ನು ರದ್ದುಗೊಳಿಸುವಂತೆ ಒತ್ತಾಯ ಮಾಡಿದವು. ಹೊಸ ಕೃಷಿ ಮಾರುಕಟ್ಟೆ ನೀತಿಯು ರೈತರನ್ನು ಮೋಸಮಾಡುವ ಮತ್ತು ಅವರನ್ನು ಮೋಸಗೊಳಿಸುವ ಕ್ರಮಗಳ ಅಭಿವ್ಯಕ್ತಿಯಾಗಿದೆ. ಕೇಂದ್ರ ಸರ್ಕಾರವು ನಮ್ಮ ದೇಶದ ಕೃಷಿ ಮಾರುಕಟ್ಟೆಯನ್ನು ಅಮೆರಿಕದ ಉತ್ಪನ್ನಗಳಿಗೆ ತೆರೆದಿಡಬೇಕೆಂಬ ಒತ್ತಡಕ್ಕೆ ನಾಚಿಕೆಯಿಲ್ಲದೆ ಶರಣಾಗುತ್ತಿದೆ. ಅರಣ್ಯಗಳು, ಗಣಿಗಳು ಮತ್ತು ಸಾಗರ ಸೇರಿದಂತೆ ನಮ್ಮ ನೈಸರ್ಗಿಕ ಸಂಪನ್ಮೂಲಗಳನ್ನು ತನ್ನ ಆಪ್ತಮಿತ್ರರಿಗೆ ಮತ್ತು ಏಕಸ್ವಾಮ್ಯದ ಬಂಡವಾಳಶಾಹಿಗಳಿಗೆ ಲಾಭವಾಗುವಂತೆ ಎಲ್ಲಾ ರೀತಿಯ ಕ್ರಮಗಳನ್ನು ಮಾಡಲು ಉದ್ದೇಶಿಸಲಾಗಿದೆ. ಇವೆಲ್ಲವೂ ಪರಿಸರದ ಮೇಲೆ ಹಾನಿಕಾರಕ ಪರಿಣಾಮ ಬೀರುತ್ತವೆ ಮತ್ತು ಹಾನಿಕಾರಕ ಹವಾಮಾನ ಬದಲಾವಣೆಗೆ ಕಾರಣವಾಗುತ್ತಿವೆ.

ಖಾಸಗೀಕರಣದ ವಿರುದ್ಧ ಹೋರಾಡುತ್ತಿರುವ ಕಾರ್ಮಿಕರಿಗೆ ಅಭಿನಂದನೆ

ಖಾಸಗೀಕರಣವನ್ನು ಆಕ್ರಮಣಕಾರಿಯಾಗಿ ಅನುಸರಿಸಲಾಗತ್ತದೆ. ವಿಶೇಷವಾಗಿ ವಿದ್ಯುತ್, ಕಲ್ಲಿದ್ದಲು, ಇತರ ಖನಿಜಗಳು, ಬಂದರು ಮತ್ತು ಡಾಕ್, ಬ್ಯಾಂಕಿಂಗ್ ಮತ್ತು ವಿಮಾ ಕ್ಷೇತ್ರಗಳಲ್ಲಿ ಖಾಸಗೀಕರಣವನ್ನು ಜಾರಿಗೆ ತರಲಾಗುತ್ತದೆ. ಇದರ ವಿರುದ್ಧ ಹಾಗು ಸಾರ್ವಜನಿಕ ವಲಯ ಮತ್ತು ಭಾರತದ ಜನರ ಹಿತಾಸಕ್ತಿಯನ್ನು ರಕ್ಷಿಸಲು ಸರ್ವಶಕ್ತಿಯಿಂದ ಹೋರಾಡುತ್ತಿರುವ ಈ ಕಾರ್ಯತಂತ್ರದ ವಲಯಗಳ ಕಾರ್ಮಿಕರನ್ನು ಸಿಐಟಿಯು ಅಭಿನಂದಿಸುತ್ತದೆ.

ಕಾರ್ಪೊರೇಟ್‌ಗಳ ನೂರಕ್ಕೂ ಹೆಚ್ಚು ಅಪರಾಧಗಳನ್ನು ಅಪರಾಧ ಮುಕ್ತಗೊಳಿಸಿದೆ

ಬಂಡವಾಳಶಾಹಿ ವರ್ಗಗಳಿಗೆ ರಾಷ್ಟ್ರೀಯ ಖಜಾನೆಯಿಂದ ನೇರವಾಗಿ ಸಬ್ಸಿಡಿ ನೀಡಲು ವಿವಿಧ ಕ್ರಮಗಳನ್ನು ಪರಿಚಯಿಸಲಾಗುತ್ತಿದೆ. ಮತ್ತು ಪೂರಕ ಕ್ರಮವಾಗಿ, ಜನರ ಪ್ರಜಾಸತ್ತಾತ್ಮಕ ಮತ್ತು ಸಾಂವಿಧಾನಿಕ ಹಕ್ಕುಗಳನ್ನು ನಿಗ್ರಹಿಸುವ ಮೂಲಕ ನವ ಉದಾರವಾದದ ವಿರುದ್ಧದ ಎಲ್ಲಾ ವಿರೋಧಗಳನ್ನು ನಿಗ್ರಹಿಸಲು ಪ್ರಯತ್ನಿಸುತ್ತಿದೆ. ಭಾರತೀಯ ನ್ಯಾಯ ಸಂಹಿತೆ, ಯುಎಪಿಎ, ಪಿಎಂಎಲ್‌ಎ ಮುಂತಾದ ಹೊಸ ಶಾಸನಗಳ ಮೂಲಕ ಜನರು ನಡೆಸುವ ಯಾವುದೇ ಸಾಮೂಹಿಕ ಪ್ರತಿಭಟನೆಗಳನ್ನು ಅಪರಾಧವೆಂದು ಪರಿಗಣಿಸುವ ತೀವ್ರ ಮಟ್ಟಕ್ಕೆ ಹೋಗುತ್ತಿದೆ.

ಅದೇ ಸಮಯದಲ್ಲಿ, ಮೋದಿ ಸರ್ಕಾರವು ಬಾಯ್ಲರ್ ಕಾಯ್ದೆ, ಅರಣ್ಯ ಕಾಯ್ದೆ, ಚಹಾ ಕಾಯ್ದೆ, ರಬ್ಬರ್ ಕಾಯ್ದೆ, ಹಲವಾರು ಔಷಧ ವಲಯಕ್ಕೆ ಸಂಬಂಧಿಸಿದ ಶಾಸನಗಳು ಸೇರಿದಂತೆ 41 ಕಾನೂನುಗಳ ಅಡಿಯಲ್ಲಿ ಕಾರ್ಪೊರೇಟ್‌ಗಳ 180 ಅಪರಾಧಗಳನ್ನು ಅಪರಾಧ ಮುಕ್ತಗೊಳಿಸಿದೆ. ಇದನ್ನು ಜನ್ ವಿಶ್ವಾಸ್ ಕಾಯ್ದೆಯ ನಿಬಂಧನೆಗಳ ಪ್ರಕಾರ ಮಾಡಲಾಗಿದೆ. ಆ ಕಾನೂನುಗಳನ್ನು ಉಲ್ಲಂಘಿಸಿದ್ದಕ್ಕಾಗಿ ಮಾಲಿಕರು ಎದುರಿಸಬೇಕಾದ ಜೈಲು ಶಿಕ್ಷೆಯನ್ನು ಹಿಂತೆಗೆದುಕೊಳ್ಳಲಾಗಿದೆ. ಶಿಕ್ಷೆಯನ್ನು ಸ್ವಲ್ಪ ದಂಡ ಪಾವತಿಸುವುದಕ್ಕೆ ಸೀಮಿತಗೊಳಿಸಲಾಗಿದೆ. ಇತ್ತೀಚಿನ ಕೇಂದ್ರ ಬಜೆಟ್‌ನಲ್ಲಿ ಹಣವಂತರು ಮಾಡುವ ನೂರಕ್ಕೂ ಹೆಚ್ಚು ಅಪರಾಧಗಳನ್ನು ಅಪರಾಧ ಮುಕ್ತಗೊಳಿಸಲಾಗಿದೆ. ಇದು ಕಾರ್ಮಿಕ ಕಾನೂನುಗಳು ಸೇರಿದಂತೆ ಹಲವು ಕಾನೂನುಗಳನ್ನು ಶಿಕ್ಷಾರ್ಹವಾಗಿ ಉಲ್ಲಂಘಿಸಲು ಬಂಡವಾಳಿಗರಿಗೆ ಪರವಾನಗಿ ನೀಡಿದಲ್ಲದೆ ಇನ್ನೇನು ಅಲ್ಲ. ಶ್ರಮಸಮಾಧನ್ ಮತ್ತು ಶ್ರಮಸುವಿಧಾ ಪೋರ್ಟಲ್‌ಗಳು ಉದ್ಯೋಗದಾತರಿಂದ ಅನಿಯಂತ್ರಿತ ಕಾರ್ಮಿಕ ಕಾನೂನು ಉಲ್ಲಂಘನೆಗಳಿಗೆ ಅನುಕೂಲವಾಗುವಂತೆ ದೂರು ಆಧಾರಿತ ತಪಾಸಣೆಯನ್ನು ರದ್ದುಗೊಳಿಸಿವೆ.

ಕಾರ್ಮಿಕರು ನಡೆಸುವ ಸಂಘಟಿತ ಕ್ರಮಗಳನ್ನು ಅಪರಾಧೀಕರಿಸಲಾಗುತ್ತಿದೆ

ಮತ್ತೊಂದೆಡೆ, ಕಾರ್ಮಿಕರು ತಾವು ಹೋರಾಡಿ ಗಳಿಸಿದ ಹಕ್ಕುಗಳನ್ನು ಪ್ರತಿಪಾದಿಸಲು ನಡೆಸುವ ಸಂಘಟಿತ ಕ್ರಮಗಳನ್ನು ಅಪರಾಧೀಕರಿಸಲಾಗುತ್ತಿದೆ. ಕಾರ್ಮಿಕರು ಮತ್ತು ಅವರ ಸಂಘಗಳು ಸಾಮೂಹಿಕವಾಗಿ ದೂರು ನೀಡುವುದನ್ನು ಕೂಡ ಬಿಎನ್‌ಎಸ್ (ಭಾರತೀಯ ನ್ಯಾಯ ಸಂಹಿತಾ) ಸೆಕ್ಷನ್ 111 ರ ಅಡಿಯಲ್ಲಿ 'ಸಂಘಟಿತ ಅಪರಾಧ' ಎಂದು ವ್ಯಾಖ್ಯಾನಿಸಲು ಪ್ರಯತ್ನಿಸಲಾಗುತ್ತಿದೆ. ಇದು ಜಾಮೀನುರಹಿತ ಜೈಲು ಶಿಕ್ಷೆ ಸೇರಿದಂತೆ ಪೊಲೀಸ್ ಕ್ರಮಕ್ಕೆ ಕಾರಣವಾಗುತ್ತದೆ. ಈಗಾಗಲೇ ಹಲವಾರು ರಾಜ್ಯಗಳಲ್ಲಿ ಕಾರ್ಮಿಕ ಸಂಘಗಳ ನಾಯಕರನ್ನು ಆಡಳಿತ ಮಂಡಳಿ ಅಥವಾ ಕಾರ್ಮಿಕ ಇಲಾಖೆಗೆ ಕಾರ್ಮಿಕರ ಕುಂದುಕೊರತೆಗಳನ್ನು ಪ್ರತಿನಿಧಿಸಿದ್ದಕ್ಕಾಗಿ ಸುಳ್ಳು ಕ್ರಿಮಿನಲ್ ಪ್ರಕರಣಗಳಲ್ಲಿ ಸಿಲುಕಿಸಲಾಗುತ್ತಿದೆ. ಕಾರ್ಮಿಕ ಸಂಹಿತೆಗಳನ್ನು ಜಾರಿಗೆ ತರುವ ಮೊದಲೇ, ಗೇಟ್ ಮೀಟಿಂಗ್‌ಗಳು, ಇಲಾಖಾ ಸಭೆಗಳು, ಕರಪತ್ರಗಳ ವಿತರಣೆ, ಜ್ಞಾಪಕ ಪತ್ರಗಳನ್ನು ಸಲ್ಲಿಸುವುದು ಮುಂತಾದ ನಿಯಮಿತ ಟ್ರೇಡ್ ಯೂನಿಯನ್ ಚಟುವಟಿಕೆಗಳನ್ನು, ವಿಶೇಷವಾಗಿ ಸರ್ಕಾರಿ ಸಂಸ್ಥೆಗಳು/ಇಲಾಖೆಗಳಲ್ಲಿ ನಿಷೇಧಿಸಲಾಗುತ್ತಿದೆ. ಇವು ಕಾರ್ಮಿಕರಲ್ಲಿ ಭಯದ ವಾತಾವರಣವನ್ನು ಸೃಷ್ಟಿಸುವ ಉದ್ದೇಶವನ್ನು ಹೊಂದಿವೆ.

ನೈಜ ವೇತನದಲ್ಲಿ ನಿರಂತರ ಕುಸಿತ

ದೇಶವು ಅಭೂತಪೂರ್ವ ನಿರುದ್ಯೋಗ ಮತ್ತು ನೈಜ ವೇತನದಲ್ಲಿ ನಿರಂತರ ಕುಸಿತವನ್ನು ಕಾಣುತ್ತಿದೆ. ನಿವ್ವಳ ಮೌಲ್ಯವರ್ಧನೆಯಲ್ಲಿ ವೇತನದ ಪಾಲು 2020ರಲ್ಲಿ ಶೇ. 18.9 ರಿಂದ 2023ರಲ್ಲಿ ಶೇ. 15.9ಕ್ಕೆ ಇಳಿದಿದೆ. ಅದೇ ಅವಧಿಯಲ್ಲಿ ಲಾಭದ ಪಾಲು ಶೇ. 38.7ರಿಂದ ಶೇ. 51.9ಕ್ಕೆ ಏರಿದೆ. ತೀವ್ರ ಬಡತನ ಮತ್ತು ಅಪೌಷ್ಟಿಕತೆ ಹೆಚ್ಚುತ್ತಿದೆ. ಬೃಹತ್ ಬಜೆಟ್ ಕಡಿತದೊಂದಿಗೆ ಉದ್ಯೋಗ, ಆಹಾರ, ಶಿಕ್ಷಣ ಮತ್ತು ಆರೋಗ್ಯದಲ್ಲಿ ಸಾರ್ವಜನಿಕ ವೆಚ್ಚದಲ್ಲಿ ತೀವ್ರ ಇಳಿಕೆ ಕಂಡುಬಂದಿದೆ. ಕೇಂದ್ರ ಮತ್ತು ವಿವಿಧ ರಾಜ್ಯಗಳಲ್ಲಿ ಬಿಜೆಪಿ ಆಡಳಿತದಿಂದ ಭ್ರಷ್ಟಾಚಾರವನ್ನು ಸಾಂಸ್ಥೀಕರಣಗೊಳಿಸಲಾಗಿದೆ. ಸೂಪರ್ ಲಾಭಗಳಿಸುತ್ತಿರುವ ಖಾಸಗಿ ಕಿರುಬಂಡವಾಳ ಸಂಸ್ಥೆಗಳ(ಮೈಕ್ರೋ ಫೈನಾನ್ಸ್ ಕಂಪನಿಗಳ) ಮೂಲಕ ಬಡ ವರ್ಗಗಳಲ್ಲಿ ಸಾಲದ ಹೊರೆ ಆತಂಕಕಾರಿಯಾಗಿ ಹೆಚ್ಚುತ್ತಿದೆ, ಇದು ಅನೇಕ ಸಾಲಗಾರರನ್ನು ಆತ್ಮಹತ್ಯೆಗೆ ತಳ್ಳುತ್ತದೆ. ಈ ಮೇ ದಿನದಂದು, ಈ ಎಲ್ಲಾ ದಾಳಿಗಳು ಮತ್ತು ದೌರ್ಜನ್ಯಗಳ ವಿರುದ್ಧ ಹೋರಾಡಲು ಸಿಐಟಿಯು ಪ್ರತಿಜ್ಞೆ ಮಾಡುತ್ತದೆ.

ಒಗ್ಗಟ್ಟಿನ ಹೋರಾಟವನ್ನು ದುರ್ಬಲಗೊಳಿಸುವ ಕೋಮುವಾದಿಕರಣ

ಆರ್‌ಎಸ್‌ಎಸ್ ನೇತೃತ್ವದ ಹಿಂದುತ್ವ ಶಕ್ತಿಗಳು ಸಮಾಜವನ್ನು ಕೋಮುವಾದಿಕರಣಗೊಳಿಸುತ್ತಿರುವುದು ಹೆಚ್ಚುತ್ತಿರುವ ಬಗ್ಗೆ ಸಿಐಟಿಯು ಕಳವಳ ವ್ಯಕ್ತಪಡಿಸುತ್ತದೆ. ಇದು ನವ ಉದಾರವಾದಿ ದಾಳಿಯ ವಿರುದ್ಧದ ಒಗ್ಗಟ್ಟಿನ ಹೋರಾಟವನ್ನು ಪುಟ 10 ಕ್ಕೆ

ಸಾರ್ವತ್ರಿಕ ಮುಷ್ಕರಕ್ಕೆ ಸಜ್ಜಾಗುತ್ತಿರುವ ಕಾರ್ಮಿಕ ವರ್ಗಕ್ಕೆ ಅಭಿನಂದನೆ

ಕೇಂದ್ರ ಕಾರ್ಮಿಕ ಸಂಘಗಳು ಮತ್ತು ಸ್ವತಂತ್ರ ವಲಯ ಒಕ್ಕೂಟಗಳ ಜಂಟಿ ವೇದಿಕೆಯಡಿಯಲ್ಲಿ 2025ರ ಮೇ 20 ರಂದು ನಡೆಯಲಿರುವ ಅಖಿಲ ಭಾರತ ಸಾರ್ವತ್ರಿಕ ಮುಷ್ಕರಕ್ಕೆ ಸಜ್ಜಾಗುತ್ತಿರುವ ಭಾರತದ ಕಾರ್ಮಿಕ ವರ್ಗವನ್ನು ಸಿಐಟಿಯು ಅಭಿನಂದಿಸುತ್ತದೆ. ಈ ಮುಷ್ಕರವು ದುಡಿಯುವ ಜನರ ಹಕ್ಕುಗಳು ಮತ್ತು ಜೀವನೋಪಾಯದ ಮೇಲೆ ಆಡಳಿತ ವರ್ಗಗಳ ಕ್ರೂರ ದಾಳಿಯ ವಿರುದ್ಧ ಭಾರತೀಯ ಕಾರ್ಮಿಕ ವರ್ಗದ ಅತಿದೊಡ್ಡ ಕ್ರಮವಾಗಲಿದೆ. ದೇಶದ ವರ್ಗ ಆಧಾರಿತ ಕಾರ್ಮಿಕ ಸಂಘವಾಗಿ, ಸಿಐಟಿಯು ಈ ಸಾರ್ವತ್ರಿಕ ಮುಷ್ಕರವನ್ನು ಕಾರ್ಮಿಕ ವರ್ಗದ ನೇತೃತ್ವದಲ್ಲಿ ಹೊಸ ಹಂತದ ಪ್ರತಿದಾಳಿಯ ಆರಂಭವನ್ನಾಗಿ ಮಾಡುವ ಐತಿಹಾಸಿಕ ಕಾರ್ಯವನ್ನು ಕೈಗೆತ್ತಿಕೊಂಡಿದೆ. ಇಂದಿನ ಹೋರಾಟವು ರಾಷ್ಟ್ರೀಯ ಆರ್ಥಿಕತೆಯ ಮೇಲಿನ ಕಾರ್ಪೊರೇಟ್ ಲೂಟಿಯ ವಿರುದ್ಧವಾಗಿದೆ. ಇದು ದುಡಿಯುವ ಜನರ ಮೂಲಭೂತ ಪ್ರಜಾಪ್ರಭುತ್ವ, ಸಾಂವಿಧಾನಿಕ ಮತ್ತು ಹೋರಾಟ ಮಾಡಿ ಗಳಿಸಿದ ಕೆಲಸದ ಸ್ಥಳದಲ್ಲಿನ ಹಕ್ಕುಗಳ ಮೇಲಿನ ದಾಳಿಯ ವಿರುದ್ಧವಾಗಿದೆ.

ಅಂತರರಾಷ್ಟ್ರೀಯ ವರ್ಗಾಧಾರಿತ ಕಾರ್ಮಿಕ ವರ್ಗದ ಚಳುವಳಿಗೆ ಬೆಂಬಲ

ಸಾಮ್ರಾಜ್ಯಶಾಹಿ ಮತ್ತು ಬಲಪಂಥೀಯ ನವ–ಫ್ಯಾಸಿಸ್ಟ್ ರಾಜಕೀಯ ಶಕ್ತಿಗಳ ವಿರುದ್ಧ ವಿವಿಧ ರಾಷ್ಟ್ರಗಳಲ್ಲಿ ಧೀರ ಹೋರಾಟಗಳನ್ನು ಸಂಘಟಿಸಿದ್ದಕ್ಕಾಗಿ ವಿಶ್ವ ಕಾರ್ಮಿಕ ಸಂಘಗಳ ಒಕ್ಕೂಟದ (ಡಬ್ಲ್ಯುಎಫ್‌ಟಿಯು) ನೇತೃತ್ವದಲ್ಲಿ ಅಂತರರಾಷ್ಟ್ರೀಯ ವರ್ಗಾಧರಿತ ಕಾರ್ಮಿಕ ವರ್ಗ ಚಳುವಳಿಯನ್ನು ಸಿಐಟಿಯು ಬೆಂಬಲಿಸುತ್ತದೆ ಮತ್ತು ಅಭಿನಂದಿಸುತ್ತದೆ.

ಸಮಾಜವಾದದ ಧ್ವಜವನ್ನು ಎತ್ತರಕ್ಕೆ ಎತ್ತಿ ಹಿಡಿದಿದ್ದಕ್ಕಾಗಿ ಚೀನಾ, ಕ್ಯೂಬಾ, ವಿಯೆಟ್ನಾಂ, ಲಾವೋಸ್ ಮತ್ತು ಉತ್ತರ ಕೊರಿಯಾದ ಸಮಾಜವಾದಿ ದೇಶಗಳ ಕಾರ್ಮಿಕ ವರ್ಗವನ್ನು ಸಿಐಟಿಯು ಅಭಿನಂದಿಸುತ್ತದೆ. ಸಮಾಜವಾದಿ ರಾಷ್ಟ್ರಗಳು ಹಾಗು ಸಮಾಜವಾದವನ್ನು ರಕ್ಷಿಸಲು, ಸಾಮ್ರಾಜ್ಯಶಾಹಿ ಕುತಂತ್ರಗಳನ್ನು ವಿರೋಧಿಸುತ್ತಾ ತಮ್ಮ ಜನರ ಜೀವನ ಮಟ್ಟವನ್ನು ಸುಧಾರಿಸಲು ತಮ್ಮ ಕೈಲಾದಷ್ಟು ಪ್ರಯತ್ನಿಸುತ್ತಿವೆ ಎಂಬುದನ್ನು ನಾವು ಹೆಮ್ಮೆಯಿಂದ ಗಮನಿಸುತ್ತೇವೆ. ಆರು ದಶಕಗಳಿಗೂ ಹೆಚ್ಚು ಕಾಲದ ಅಮಾನವೀಯ ಅಮೆರಿಕದ ನಿರ್ಬಂಧಗಳು ಮತ್ತು ದಿಗ್ಬಂಧನಗಳನ್ನು ಜಯಿಸುವ ಹೋರಾಟದಲ್ಲಿ ಭರವಸೆ ಮತ್ತು ಸ್ಫೂರ್ತಿಯ ದಾರಿದೀಪವಾದ ಸಮಾಜವಾದಿ ಕ್ಯೂಬಾದೊಂದಿಗೆ ಸಿಐಟಿಯು ಸೌಹಾರ್ದತೆ ಹಾಗು ಬೆಂಬಲವನ್ನು ವ್ಯಕ್ತಪಡಿಸುತ್ತದೆ.

ಅಮೆರಿಕದ ಸಾಮ್ರಾಜ್ಯಶಾಹಿ ಆಕ್ರಮಣಕಾರಿ ರಾಜಕೀಯ ಮತ್ತು ಆರ್ಥಿಕ ದಾಳಿಯ ಬಗ್ಗೆ ಸಿಐಟಿಯು ತೀವ್ರ ಕಳವಳ ಹಾಗು ವಿರೋಧವನ್ನು ವ್ಯಕ್ತಪಡಿಸಿದೆ. ಬಿಕ್ಕಟ್ಟಿನಿಂದ ತುಂಬಿರುವ ಅಮೆರಿಕ ಸರ್ಕಾರವು ಟ್ರಂಪ್ ನೇತೃತ್ವದಲ್ಲಿ ಪ್ರಕಟಿಸುತ್ತಿರುವ ವ್ಯಾಪಾರ ಯುದ್ಧ ಇದಾಗಿದೆ. ಅನೇಕ ರಾಷ್ಟ್ರಗಳು ಇದಕ್ಕೆ ಪ್ರತೀಕಾರ ತೀರಿಸಿಕೊಳ್ಳುತ್ತಿವೆ. ಚೀನಾ ಬಹುಧ್ರುವೀಯತೆಯನ್ನು ಅಭಿವೃದ್ಧಿಪಡಿಸುವಲ್ಲಿ ಮುಂಚೂಣಿಯಲ್ಲಿದೆ. ಸುಂಕ ಯುದ್ಧವು ಜಾಗತಿಕ ದಕ್ಷಿಣದ ಜನರ ಮೇಲೆ ಗಂಭೀರ ಪರಿಣಾಮ ಬೀರುವುದು ಖಚಿತ.

ಗಾಜಾ ಮೇಲೆ ಇಸ್ರೇಲ್ ನಡೆಸುತ್ತಿರುವ ನರಮೇಧದ ದಾಳಿಗೆ ಸಿಐಟಿಯು ತನ್ನ ದುಃಖವನ್ನು ವ್ಯಕ್ತಪಡಿಸುತ್ತದೆ. ಇಸ್ರೇಲ್ ಆಕ್ರಮಣದಲ್ಲಿ 50,000ಕ್ಕೂ ಹೆಚ್ಚು ಪ್ಯಾಲೆಸ್ಟೀನಿಯನ್ನರು ಸಾವನ್ನಪ್ಪಿದ್ದಾರೆ ಮತ್ತು ಲಕ್ಷಾಂತರ ಜನರು ಗಾಯಗೊಂಡಿದ್ದಾರೆ. ಈ ಯುದ್ಧದಲ್ಲಿ ಅಮೆರಿಕ ನೇತೃತ್ವದ ಸಾಮ್ರಾಜ್ಯಶಾಹಿಯ ಸಂಪೂರ್ಣ ಬೆಂಬಲದೊಂದಿಗೆ ಎಲ್ಲಾ ಅಂತರರಾಷ್ಟ್ರೀಯ ಕಾನೂನುಗಳನ್ನು ಉಲ್ಲಂಘಿಸಲಾಗಿದೆ. ಶಾಲೆಗಳು, ಆಸ್ಪತ್ರೆಗಳು, ವಿಶ್ವಸಂಸ್ಥೆಯ ನಿರಾಶ್ರಿತರ ಆಶ್ರಯಗಳನ್ನು ಇಸ್ರೇಲ್ ಘೋರವಾಗಿ ಕೆಡವಿತು ಮತ್ತು ಮಹಿಳೆಯರು, ಮಕ್ಕಳು ಸೇರಿದಂತೆ ನಿರಾಯುಧ ನಾಗರಿಕರನ್ನು ಕೊಂದಿತು. ಲೆಬನಾನ್ ಮೇಲೆ ದಾಳಿ ಮಾಡುವ ಮೂಲಕ ಇಸ್ರೇಲ್‌ಗೆ ಸಂಘರ್ಷದ ಪ್ರದೇಶವನ್ನು ವಿಸ್ತರಿಸಿತು. ಅಲ್ಲಿ ಕದನವಿರಾಮ ಘೋಷಿಸುವ ಮೊದಲು 3,700ಕ್ಕೂ ಹೆಚ್ಚು ಜನರು ಸಾವನ್ನಪ್ಪಿದರು. ಅದು ಸಿರಿಯಾ, ಯೆಮೆನ್, ಇರಾನ್ ಮತ್ತು ಇರಾಕ್ ಮೇಲೆ ಬಾಂಬ್ ದಾಳಿ ಮಾಡಿದೆ. ಯೆಮೆನ್ ಮೇಲೆ ದಾಳಿ ಮಾಡುವಲ್ಲಿ ಅಮೆರಿಕ ಮತ್ತು ಯುಕೆ ಕೂಡ ಸೇರಿಕೊಂಡಿವೆ ಮತ್ತು ಇರಾನ್ ಮೇಲೆ ಇಸ್ರೇಲ್ ನಡೆಸಿದ ದಾಳಿಯನ್ನು ಬೆಂಬಲಿಸಿವೆ. ಗಮನಾರ್ಹ ಸಂಗತಿಯೆಂದರೆ, ಈ ನರಮೇಧದ ಯುದ್ಧದಲ್ಲಿ ಶಸ್ತ್ರಾಸ್ತ್ರಗಳನ್ನು ಪೂರೈಸುವ ಮೂಲಕ ಅಮೆರಿಕದ ಶಸ್ತ್ರಾಸ್ತ್ರ ಕಂಪನಿಗಳು ತಮ್ಮ ಲಾಭವನ್ನು ಹಲವು ಪಟ್ಟು ಹೆಚ್ಚಿಸಿಕೊಂಡಿವೆ. ಭಾರತೀಯ ಕಾರ್ಮಿಕ ವರ್ಗವು ಪ್ಯಾಲೆಸ್ಟೀನಿಯನ್ ಜನರಿಗೆ ನೆರವಾಗಿ ನಿಲ್ಲುವಂತೆ ಸಿಐಟಿಯು ಕರೆ ನೀಡುತ್ತದೆ. ಈ ಅನಾಗರಿಕ ಕೃತ್ಯದ ವಿರುದ್ಧ ಅಂತರರಾಷ್ಟ್ರೀಯ ಒತ್ತಡವನ್ನು ನಿರ್ಮಿಸಲು ಜನರನ್ನು ಸಜ್ಜುಗೊಳಿಸುವ ಮೂಲಕ ಸಾಮ್ರಾಜ್ಯಶಾಹಿ ವಿರೋಧಿ ಪರಂಪರೆಯನ್ನು ಮುಂದುವರಿಸಲು ಸಿಐಟಿಯು ಪ್ರತಿಜ್ಞೆ ಮಾಡುತ್ತದೆ.

ಉಕ್ರೇನ್‌ನಲ್ಲಿ ನಡೆಯುತ್ತಿರುವ ಯುದ್ಧವು ಗಂಭೀರ ಭೌಗೋಳಿಕ ರಾಜಕೀಯ ಕಳವಳವನ್ನು ಉಂಟುಮಾಡುತ್ತದೆ. ಶಸ್ತ್ರಾಸ್ತ್ರ ಮತ್ತು ಹಣಕಾಸಿನ ವಿಷಯದಲ್ಲಿ ಯುನೈಟೆಡ್ ಸ್ಟೇಟ್ಸ್ ಮತ್ತು ನ್ಯಾಟೋ ನೀಡಿದ ಎಲ್ಲಾ ಬೆಂಬಲದ ಹೊರತಾಗಿಯೂ, ಉಕ್ರೇನ್ ರಷ್ಯಾವನ್ನು ಹಿಮ್ಮೆಟ್ಟಿಸಲು ಸಾಧ್ಯವಾಗುತ್ತಿಲ್ಲ. ರಷ್ಯಾ ವಿರುದ್ಧದ ವ್ಯಾಪಾರ ನಿರ್ಬಂಧಗಳ ಪರಿಣಾಮ, ಆಹಾರ ಮತ್ತು ಇಂಧನ ಬೆಲೆಗಳ ಏರಿಕೆಯೊಂದಿಗೆ ಯುರೋಪ್‌ಗೆ ಪ್ರತಿಕೂಲ ಪರಿಣಾಮ ಬೀರಿತು. ಯುರೋಪಿನ ದುಃಸ್ಥಿತಿಯಿಂದ ಯುಎಸ್ ಇಂಧನ ಕಂಪನಿಗಳು ಭಾರಿ ಲಾಭ ಗಳಿಸಿದವು. ಟ್ರಂಪ್ ಉಕ್ರೇನ್‌ನೊಂದಿಗಿನ ವ್ಯವಹಾರವು ಸಾಮ್ರಾಜ್ಯಶಾಹಿ ಬಣದಲ್ಲಿ ಕೆಲವು ಬಿರುಕುಗಳನ್ನು ಸೃಷ್ಟಿಸಿದೆ.

ಜಾಗತಿಕವಾಗಿ ಅನೇಕ ದೇಶಗಳಲ್ಲಿ ತೀವ್ರ ಬಲಪಂಥೀಯ ರಾಜಕೀಯವು ನೆಲೆಯೂರುತ್ತಿರುವ ವೇಳೆಯಲ್ಲಿ, ಬ್ರೆಜಿಲ್, ಮೆಕ್ಸಿಕೊ, ಉರುಗ್ವೆ ಮತ್ತು ಶ್ರೀಲಂಕಾದಂತಹ ದೇಶಗಳಲ್ಲಿ ಎಡಪಂಥೀಯ ಮತ್ತು ಪ್ರಗತಿಪರ ಶಕ್ತಿಗಳು ಬಲಪಂಥೀಯ ಶಕ್ತಿಗಳ ವಿರುದ್ಧ ಗೆಲುವು ಸಾಧಿಸಿವೆ ಹಾಗು ನವ ಉದಾರವಾದದ ವಿರುದ್ಧ ನಿರಂತರವಾಗಿ ಹೋರಾಡುತ್ತಿರುವುದು ಸ್ಫೂರ್ತಿ ನೀಡುವ ವಿಚಾರವಾಗಿದೆ.

ಬಂಡವಾಳಶಾಹಿಯ ವ್ಯವಸ್ಥಿತ ಬಿಕ್ಕಟ್ಟಿನಿಂದಾಗಿ, ವಿವಿಧ ಖಂಡಗಳಲ್ಲಿ ಮಿಲಿಟರಿ ದಂಗೆಗಳು ಮತ್ತು ಸಶಸ್ತ್ರ ಸಂಘರ್ಷಗಳು ಹೆಚ್ಚುತ್ತಿವೆ. ಜಾಗತಿಕ ಆರ್ಥಿಕತೆಯು ನಿಧಾನಗತಿಯ ಬೆಳವಣಿಗೆಗೆ ಸಾಕ್ಷಿಯಾಗುತ್ತಿದೆ. ಅಸಮಾನತೆಗಳು, ಬಡತನ, ನಿರುದ್ಯೋಗ, ಹಸಿವು ಮತ್ತು ಅಪೌಷ್ಟಿಕತೆ ಹೆಚ್ಚುತ್ತಿದೆ. ಜಾಗತಿಕ ಬಿಕ್ಕಟ್ಟು ಆಳವಾಗುತ್ತಿದೆ ಮತ್ತು ಜಗತ್ತು ಅನಿಯಮಿತ ಸಾಲದ ಹೊರೆಗೆ ಪ್ರವೇಶಿಸುತ್ತಿದೆ. ಸಾಮ್ರಾಜ್ಯಶಾಹಿ ಶಕ್ತಿಗಳು ಬಿಕ್ಕಟ್ಟಿನ ಸಂಪೂರ್ಣ ಹೊರೆಯನ್ನು ದಕ್ಷಿಣ ಜಗತ್ತಿನ ದೇಶಗಳಲ್ಲಿನ ಕಾರ್ಮಿಕರು ಮತ್ತು ಜನರ ಮೇಲೆ ಹೇರಲು ಪ್ರಯತ್ನಿಸುತ್ತಿವೆ.

ನವ ಉದಾರವಾದಿ ಬಂಡವಾಳಶಾಹಿ ವ್ಯವಸ್ಥೆಯ ದಿವಾಳಿತನವನ್ನು ಸಾಮಾನ್ಯ ಜನರ ಮೇಲೇ ಹೇರುತ್ತಿರುವುದರಿಂದ ಜನರ ಬದುಕು ಸಂಕಷ್ಟಕ್ಕೆ ತುತ್ತಾಗುತ್ತಿರುವಾಗಲೇ, ಈ ದಾಳಿಯನ್ನು ಸಾಮೂಹಿಕವಾಗಿ ಎದುರಿಸಲು ಒಂದು ಅವಕಾಶವನ್ನು ತೆರೆಡುತ್ತಿದೆ ಎಂಬುದನ್ನು ಸಿಐಟಿಯು ಗುರುತಿಸಿದೆ. ನವ ಉದಾರವಾದದ ದಾಳಿಗಳ ವಿರುದ್ಧ ದುಡಿಯುವ ಜನರ ವಿವಿಧ ವರ್ಗಗಳ ಪ್ರತಿರೋಧ ಜಾಗತಿಕವಾಗಿ ಹೆಚ್ಚಾಗಿದೆ.

ಕಳೆದ ವರ್ಷ ವಿವಿಧ ರಾಷ್ಟ್ರಗಳಲ್ಲಿ ಕಾರ್ಮಿಕ ವರ್ಗ ಮತ್ತು ರೈತರ ತೀವ್ರ ಮುಷ್ಕರಗಳು ಮತ್ತು ಹೋರಾಟಗಳು ನಡೆದಿವೆ. ಗ್ರೀಸ್‌ನಲ್ಲಿ ಎರಡು ತಿಂಗಳೊಳಗೆ ಕಾರ್ಮಿಕ ವರ್ಗದ ಎರಡು ಬೃಹತ್ ಮುಷ್ಕರಗಳು ನಡೆದಿದ್ದು, ದೇಶವನ್ನು ಸ್ತಬ್ಧಗೊಳಿಸಿದೆ ಎಂಬುದನ್ನು ವಿಶೇಷವಾಗಿ ಉಲ್ಲೇಖಿಸಬೇಕಾಗಿದೆ. ಗಾಜಾದಲ್ಲಿ ಇಸ್ರೇಲಿ ನರಮೇಧದ ವಿರುದ್ಧ ಮತ್ತು ಪ್ಯಾಲೆಸ್ಟೀನಿಯನ್ ಜನರ ಹಕ್ಕುಗಳಿಗಾಗಿ ಪ್ರಪಂಚದಾದ್ಯಂತ ಲಕ್ಷಾಂತರ ಜನರು ಎದ್ದು ನಿಂತಿರುವುದು ಸಹ ಹೃದಯಸ್ಪರ್ಶಿಯಾಗಿದೆ.

ಸಿಐಟಿಯು ನಮ್ಮ ನೆರೆಯ ರಾಷ್ಟ್ರಗಳಾದ ಬಾಂಗ್ಲಾದೇಶ, ನೇಪಾಳ ಮತ್ತು ಪಾಕಿಸ್ತಾನದಲ್ಲಿನ ರಾಜಕೀಯ ಬೆಳವಣಿಗೆಗಳು ಮತ್ತು ಅಸ್ಥಿರತೆಯನ್ನು ಕಾಳಜಿಯಿಂದ ಗಮನಿಸುತ್ತದೆ.

ಸಿಐಟಿಯು: ಮೇ ದಿನದ ಪ್ರಣಾಳಿಕೆ ಸಂಕಲ್ಪ...... ಪುಟ 9 ರಿಂದ

ದುರ್ಬಲಗೊಳಿಸುತ್ತದೆ ಮತ್ತು ಏಕತೆಯನ್ನು ಅಡ್ಡಿಪಡಿಸುತ್ತದೆ. ಮೋದಿ ನೇತೃತ್ವದ ಸರ್ಕಾರವು ಆಡಳಿತಾತ್ಮಕ ಮತ್ತು ಕಾನೂನು ಆಡಳಿತ ಪ್ರಕ್ರಿಯೆಯನ್ನು ಮತ್ತು ಅದರ ವಿಷಯಗಳು ಮತ್ತು ಆಡಳಿತ ಸೇರಿದಂತೆ ಇಡೀ ಶಿಕ್ಷಣ ವ್ಯವಸ್ಥೆಯನ್ನು ಅಲ್ಪಸಂಖ್ಯಾತರ ವಿರುದ್ಧ ಕೋಮು ವಿಷ ಮತ್ತು ದ್ವೇಷವನ್ನು ಹರಡಲು ಕುಶಲತೆಯಿಂದ ಬಳಸುತ್ತಿದೆ.

ಅಲ್ಪಸಂಖ್ಯಾತರಲ್ಲಿ ಕೋಮುವಾದಿ ಮೂಲಭೂತವಾದಿ ಶಕ್ತಿಗಳು ಸಕ್ರಿಯವಾಗಿ ಕಾರ್ಯನಿರ್ವಹಿಸುತ್ತಿವೆ. ಕೋಮುವಾದಿ ಶಕ್ತಿಗಳ ವಿರುದ್ಧ ಸೈದ್ಧಾಂತಿಕವಾಗಿ, ರಾಜಕೀಯವಾಗಿ, ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ ಮತ್ತು ಬೀದಿಗಳಲ್ಲಿ ಹೋರಾಡುವ ತನ್ನ ಸಂಕಲ್ಪವನ್ನು ಸಿಐಟಿಯು ಪುನರುಚ್ಚರಿಸುತ್ತದೆ. ಮತ್ತು ದುಡಿಯುವ ಜನರ ವರ್ಗ ಏಕತೆ ಮತ್ತು ಒಗ್ಗಟ್ಟನ್ನು ರಕ್ಷಿಸಲು ಶ್ರಮಿಸುತ್ತದೆ.

ಉಲ್ಬಣಗೊಂಡ ಮಹಿಳೆಯರು ಮತ್ತು ಮಕ್ಕಳ ಮೇಲಿನ ದೌರ್ಜನ್ಯಗಳು

ಮೂಲಭೂತವಾದಿ ಶಕ್ತಿಗಳು ಉತ್ತೇಜಿಸುತ್ತಿರುವ ನವ ಉದಾರವಾದಿ ಗ್ರಾಹಕೀಕರಣ ಮತ್ತು ಪಿತೃಪ್ರಭುತ್ವದ ಮಾರಕ ಸಂಯೋಜನೆಯಿಂದ ಉಲ್ಬಣಗೊಂಡ ಮಹಿಳೆಯರು ಮತ್ತು ಮಕ್ಕಳ ಮೇಲಿನ ದೌರ್ಜನ್ಯಗಳು ಆತಂಕಕಾರಿಯಾಗಿ ಹೆಚ್ಚುತ್ತಿರುವ ಬಗ್ಗೆ ಸಿಐಟಿಯು ತೀವ್ರ ಕಳವಳ ವ್ಯಕ್ತಪಡಿಸುತ್ತದೆ. ಸಮಾಜದಲ್ಲಿ ಅಸ್ಪೃಷ್ಯತೆ, ಪ್ರತಿಗಾಮಿ ಪದ್ಧತಿಗಳು, ಜಾತಿ–ದಬ್ಬಾಳಿಕೆ ಮತ್ತು ಇತರ ರೀತಿಯ ತಾರತಮ್ಯಗಳು ಪ್ರಗತಿ ಸಾಧಿಸುತ್ತಿರುವುದು ಕಳವಳಕಾರಿ ವಿಷಯವಾಗಿದೆ. ವೈಜ್ಞಾನಿಕ ಮನೋಭಾವ ಮತ್ತು ಸಮಾನತೆಯ ಮೌಲ್ಯಗಳೊಂದಿಗೆ ಕಾರ್ಮಿಕ ವರ್ಗದ ಸಂಸ್ಕೃತಿಯನ್ನು ಮುನ್ನಡೆಸಲು ಮತ್ತು ಅವನತಿ ಹೊಂದುತ್ತಿರುವ ಸಂಸ್ಕೃತಿಯನ್ನು ಸರಿಪಡಿಸಲು ಸಿಐಟಿಯು ಪ್ರತಿಜ್ಞೆ ಮಾಡುತ್ತದೆ.

ದೇಶದ ಕಾರ್ಮಿಕವರ್ಗ ಧೈರ್ಯದಿಂದ ವಿರೋಧಿಸುತ್ತಿವೆ

ಕಾರ್ಮಿಕ ವರ್ಗಾಧರಿತ ಟ್ರೇಡ್ ಯೂನಿಯನ್ ನಾಯಕತ್ವದ ಅಡಿಯಲ್ಲಿ ದೇಶದ ಕಾರ್ಮಿಕ ವರ್ಗದ ವಿವಿಧ ವಿಭಾಗಗಳು ಹೋರಾಡಿ ಪಡೆದುಕೊಂಡ ಹಕ್ಕುಗಳು ಮತ್ತು ಸಾಂಸ್ಕೃತಿಕ, ಸಾಮಾಜಿಕ ಸವಲತ್ತುಗಳ ಮೇಲೆ ತೀವ್ರ ದಾಳಿಗಳು ನಡೆಯುತ್ತಿರುವ ಇಂತಹ ಪ್ರತಿಕೂಲ ಮತ್ತು ಕತ್ತಲೆಯಾದ ಪರಿಸ್ಥಿತಿಯನ್ನು ಧೈರ್ಯದಿಂದ ದೇಶದ ಕಾರ್ಮಿಕವರ್ಗ ವಿರೋಧಿಸುತ್ತಿವೆ ಎಂದು ಸಿಐಟಿಯು ಹೆಮ್ಮೆಯಿಂದ ಗಮನಿಸುತ್ತದೆ. ಮೂಲಭೂತ ಹಕ್ಕುಗಳಿಗಾಗಿ ಮತ್ತು ದೌರ್ಜನ್ಯಗಳ ವಿರುದ್ಧ ಅಸಂಖ್ಯಾತ ಹೋರಾಟಗಳು ಮತ್ತು ಸಜ್ಜುಗೊಳಿಸುವಿಕೆಗಳನ್ನು ಕಾರ್ಮಿಕ ಸಂಘಗಳು ದೇಶಾದ್ಯಂತ ಆಯೋಜಿಸಿವೆ. ತಮಿಳುನಾಡಿನಲ್ಲಿ ಸ್ಯಾಮ್‌ಸಂಗ್ ಕಾರ್ಮಿಕರ ಮುಷ್ಕರವು ಪ್ರಪಂಚದಾದ್ಯಂತ ಕಾರ್ಮಿಕ ವರ್ಗವನ್ನು ಪ್ರೇರೇಪಿಸಿದೆ. ಜೊತೆಗೆ ಭಾರತದ ಕಾರ್ಮಿಕ ವರ್ಗಕ್ಕೆ ಹೆಚ್ಚಿನ ಚೈತನ್ಯವನ್ನು ನೀಡಿದೆ. ವಿದ್ಯುತ್ ನೌಕರರ ಹೋರಾಟಗಳು ಮತ್ತು ಮುಷ್ಕರಗಳು ವರ್ಗವನ್ನು ಸಜ್ಜುಗೊಳಿಸುವಲ್ಲಿ ಹೊಸ ಮಾನದಂಡಗಳನ್ನು ಸ್ಥಾಪಿಸುತ್ತಿವೆ ಮತ್ತು ವಿದ್ಯುತ್ ಖಾಸಗೀಕರಣದ ಬಲಿಪಶುಗಳಾದ ಜನರಿಂದ ಒಗ್ಗಟ್ಟು ಮತ್ತು ಬೆಂಬಲವನ್ನು ಪಡೆಯುತ್ತಿವೆ. ಈ ಅವಧಿಯಲ್ಲಿ ಅನೇಕ ಸಂಸ್ಥೆಗಳಲ್ಲಿ ಗುತ್ತಿಗೆ ಕಾರ್ಮಿಕರ ಕೆಲವು ಯಶಸ್ವಿ ಹೋರಾಟಗಳು ನಡೆದಿದೆ. ಕಾರ್ಮಿಕ ವರ್ಗದ ಚಳುವಳಿಯು ಕಾರ್ಮಿಕ ವರ್ಗದವರನ್ನು ವರ್ಗ ಹೋರಾಟದಲ್ಲಿ ಸಂಘಟಿಸುವ ಮತ್ತು ವರ್ಗ–ಹೋರಾಟದಲ್ಲಿ ಸರಿಯಾದ ದಿಕ್ಕಿನಲ್ಲಿ ಹೋರಾಟಾತ್ಮಕವಾಗಿ ಪ್ರತಿಪಾದಿಸಿದರೆ, ಕಾರ್ಮಿಕ ವರ್ಗದ ಅನೌಪಚಾರಿಕೀಕರಣ ಮತ್ತು ದುರ್ಬಲಗೊಳಿಸುವ ಆಡಳಿತ ವರ್ಗದ ಕ್ರೂರ ಪ್ರಯತ್ನಗಳನ್ನು ಅಂತಿಮವಾಗಿ ಸೋಲಿಸಲು ಸಾಧ್ಯ ಎಂಬ ವಿಶ್ವಾಸವನ್ನು ಸೃಷ್ಟಿಸುತ್ತಿವೆ. ವಿವಿಧ ವಿಭಾಗಗಳ ಯೋಜನಾ ಕಾರ್ಯಕರ್ತರು, ವಿಶೇಷವಾಗಿ ಅಂಗನವಾಡಿ, ಆಶಾ ಮತ್ತು ಎಂಡಿಎಂ ಕಾರ್ಯಕರ್ತರು ರಾಜ್ಯ ಮತ್ತು ಅಖಿಲ ಭಾರತ ಮಟ್ಟದಲ್ಲಿ ನಿರಂತರ ಮತ್ತು ದೃಢನಿಶ್ಚಯದ ಹೋರಾಟಗಳಲ್ಲಿ ತೊಡಗಿದ್ದು, ಅನೇಕ ಸಾಧನೆಗಳನ್ನು ಮಾಡಿದ್ದಾರೆ.

ರೈತರು ತಮ್ಮ ಜೀವನೋಪಾಯದ ಮೇಲಿನ ದಾಳಿಯ ವಿರುದ್ಧ ಹೋರಾಡುತ್ತಿದ್ದಾರೆ. ಕಳೆದ ಒಂದು ವರ್ಷದಲ್ಲಿ ಎಲ್ಲಾ ಹಂತಗಳಲ್ಲಿ ಕಾರ್ಮಿಕ ಸಂಘಗಳು ಮತ್ತು ರೈತ ಸಂಘಟನೆಗಳಾದ ಎಸ್‌ಕೆಎಂ–ನ ರಾಷ್ಟ್ರೀಯ ವೇದಿಕೆಗಳು ನಡೆಸಿದ ಸಮನ್ವಯ ಮತ್ತು ಒಗ್ಗಟ್ಟಿನ ಕ್ರಮಗಳನ್ನು ಸಿಐಟಿಯು ಸ್ವಾಗತಿಸುತ್ತದೆ.

ಕೇರಳದ ಎಲ್‌ಡಿಎಫ್ ಸರ್ಕಾರಕ್ಕೆ ಬೆಂಬಲವಾಗಿ ನಿಲ್ಲುತ್ತದೆ

ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರದ ಪ್ರತೀಕಾರ ಮತ್ತು ತಾರತಮ್ಯದ ಸಂವಿಧಾನ ವಿರೋಧಿ ಕ್ರಮಗಳನ್ನು ಪ್ರಶ್ನಿಸುತ್ತಾ, ದುಡಿಯುವ ಜನರ ಹಕ್ಕುಗಳು ಮತ್ತು ಜೀವನೋಪಾಯವನ್ನು ರಕ್ಷಿಸುತ್ತಾ, ಜನಪರ ನೀತಿಗಳನ್ನು ಜಾರಿಗೆ ತರುತ್ತಿರುವ ಕೇರಳದ ಎಲ್‌ಡಿಎಫ್ ಸರ್ಕಾರವನ್ನು ಸಿಐಟಿಯು ಅಭಿನಂದಿಸುತ್ತದೆ. ವಿವಿಧ ವಲಯಗಳಿಂದ ಎಲ್‌ಡಿಎಫ್ ಸರ್ಕಾರವನ್ನು ಕೆಣಕುವ ಪ್ರಯತ್ನಗಳ ವಿರುದ್ಧ ಸಿಐಟಿಯು ಕೇರಳದ ಎಲ್‌ಡಿಎಫ್ ಸರ್ಕಾರಕ್ಕೆ ಬೆಂಬಲವಾಗಿ ನಿಲ್ಲುತ್ತದೆ. ಬಿಜೆಪಿ ಗೂಂಡಾಗಳಿಂದ ಕ್ರೂರ ದಾಳಿಗೆ ಒಳಗಾಗಿರುವ ತ್ರಿಪುರಾದ ಹೋರಾಟಗಾರ ಜನರು ಮತ್ತು ಅದರ ಕಾರ್ಯಕರ್ತರು ಮತ್ತು ಸದಸ್ಯರಿಗೆ ಸಿಐಟಿಯು ತನ್ನ ದೃಢವಾದ ಬೆಂಬಲವನ್ನು ವ್ಯಕ್ತಪಡಿಸುತ್ತದೆ. ಟಿಎಂಸಿ ಆಡಳಿತದ ಹಿಂಸಾಚಾರವನ್ನು ಎದುರಿಸುವ ಹೋರಾಟಗಳಿಗಾಗಿ ಪಶ್ಚಿಮ ಬಂಗಾಳದ ದುಡಿಯುವ ಜನರನ್ನು ಸಿಐಟಿಯು ಅಭಿನಂದಿಸುತ್ತದೆ.

ಬಲವಾದ ಕಾರ್ಮಿಕ– ರೈತ ಒಗ್ಗಟ್ಟನ್ನು ನಿರ್ಮಿಸುವ ಮೂಲಕ ಆಡಳಿತ ವ್ಯವಸ್ಥೆಯನ್ನು ಉರುಳಿಸುವ, ಈ ಕೊಳೆತ ಬಂಡವಾಳಶಾಹಿ ವ್ಯವಸ್ಥೆಯನ್ನು ಬದಲಾಯಿಸಲು ಮತ್ತು ಎಲ್ಲಾ ರೀತಿಯ ಶೋಷಣೆ ಮತ್ತು ತಾರತಮ್ಯವನ್ನು ಕೊನೆಗೊಳಿಸಲು ಸಿಐಟಿಯು ತನ್ನ ಸಂವಿಧಾನದಲ್ಲಿ ಪ್ರತಿಪಾದಿಸಿರುವ ಬದ್ಧತೆಯನ್ನು ಪುನರುಚ್ಚರಿಸುತ್ತದೆ.

ಈ ಮೇ ದಿನದಂದು, ನ್ಯಾಯಯುತ ಜಗತ್ತಿಗಾಗಿ ಹೋರಾಟದಲ್ಲಿ ತಮ್ಮ ಪ್ರಾಣವನ್ನೇ ಅರ್ಪಿಸಿದ ಅಸಂಖ್ಯಾತ ಹುತಾತ್ಮರನ್ನು ಸ್ಮರಿಸುತ್ತಾ, ಸಿಐಟಿಯು ಈ ಕೆಳಗಿನ ಪ್ರತಿಜ್ಞೆಗಳನ್ನು ಸ್ವೀಕರಿಸುತ್ತದೆ:

* ಕಾರ್ಮಿಕ ವರ್ಗ ಮತ್ತು ಎಲ್ಲಾ ಶ್ರಮಜೀವಿಗಳ ದಿನನಿತ್ಯದ ಜ್ವಲಂತ ಸಮಸ್ಯೆಗಳ ಮೇಲೆ ಹೋರಾಟ ಮುಂದುವರಿಸುತ್ತಾ, ಬಂಡವಾಳಶಾಹಿ ವ್ಯವಸ್ಥೆಯ ಟೊಳ್ಳನ್ನು ಬಹಿರಂಗಪಡಿಸುವುದು.
* ಪ್ರಜಾಪ್ರಭುತ್ವ ಮತ್ತು ಜಾತ್ಯತೀತತೆಯ ರಕ್ಷಣೆಗಾಗಿ ಜಂಟಿ ಕ್ರಿಯೆಗಳ ಮೂಲಕ ಕಾರ್ಮಿಕ ವರ್ಗ ಮತ್ತು ರೈತರ ಐಕ್ಯತೆಯನ್ನು ನಿರ್ಮಿಸುವುದು ಮತ್ತು ಅದನ್ನು ಜನರ ವಿಶಾಲ ಐಕ್ಯತೆಯತ್ತ ನಿರ್ಮಿಸುವುದು.
* ಶೋಷಣಾ ವ್ಯವಸ್ಥೆಯನ್ನು ಬದಲಾಯಿಸುವ ಅಗತ್ಯತೆಯ ಬಗ್ಗೆ ಮಾತ್ರವಲ್ಲದೆ ಸಾಧ್ಯತೆಯ ಬಗ್ಗೆಯೂ ಮತ್ತು ಶೋಷಣೆಯಿಂದ ಮುಕ್ತವಾದ ಪರ್ಯಾಯ ಸಮಾಜವನ್ನು ಸ್ಥಾಪಿಸುವಲ್ಲಿ ಕಾರ್ಮಿಕ ವರ್ಗದ ಪಾತ್ರದ ಬಗ್ಗೆಯೂ ಕಾರ್ಮಿಕ ವರ್ಗದಲ್ಲಿ ಜಾಗೃತಿ ಮೂಡಿಸುವುದು.

ಮೇ ದಿನ ಚಿರಾಯುವಾಗಲಿ!
ಕಾರ್ಮಿಕ–ರೈತ ಐಕ್ಯತೆ ಚಿರಾಯುವಾಗಲಿ!
ಸಮಾಜವಾದ ಚಿರಾಯುವಾಗಲಿ!
ಸಾಮ್ರಾಜ್ಯಶಾಹಿಗೆ ಧಿಕ್ಕಾರ!
ಶ್ರಮಜೀವಿ ಅಂತರರಾಷ್ಟ್ರೀಯತೆ ಚಿರಾಯುವಾಗಲಿ!

ಉಳ್ಳಾಲ: ನಾಗರೀಕರ ಜ್ವಲಂತ ಸಮಸ್ಯೆಗಳು–ಆಂದೋಲನ

ಮಂಗಳೂರಿನ ಉಳ್ಳಾಲ ಪ್ರದೇಶಕ್ಕೆ ಐತಿಹಾಸಿಕ ಮಹತ್ವವಿದೆ. ಇದು ಹಿಂದೆ ರಾಣಿ ಅಬ್ಬಕ್ಕದೇವಿಯ ರಾಜಧಾನಿಯಾಗಿತ್ತು. ಕುಲದೈವ ಸೋಮನಾಥ ದೇವಾಲಯ, ಸುಪ್ರಸಿದ್ಧ ಸಯ್ಯದ್ ಮಹ್ಮದ್ ಷರೀಪ್ ದರ್ಗಾ, ಹೀಗೆ ಸೌಹಾರ್ದತೆಯ ತಾಣವೂ ಹೌದು. ಈ ಪ್ರದೇಶ ಜನಪರ ದುಡಿಯುವ ವರ್ಗದ ಚಳುವಳಿಗೆ ಹೆಸರುವಾಸಿ. ಹಿಂದೆ ಸಿಪಿಐ(ಎಂ) ಶಾಸಕರು ಆಯ್ಕೆಯಾದ ಕ್ಷೇತ್ರ. ಆದರಿಗ ರಾಜಕೀಯ ಚಿತ್ರಣ ಬದಲಾಗಿದೆ. ಕಳೆದ ಕೆಲವು ಚುನಾವಣೆಯಲ್ಲಿ ಸತತವಾಗಿ ಕಾಂಗ್ರೆಸ್ ಗೆಲ್ಲುತ್ತಲೇ ಬಂದಿದೆ. ಆದರೆ ಈ ಪ್ರದೇಶದಲ್ಲಿ ಅಭಿವೃದ್ಧಿ ಶೂನ್ಯ. ಹಲವಾರು ಸಮಸ್ಯೆಗಳ ರಾಢಿ. ಇಂತಹವುಗಳ ವಿರುದ್ಧ ಜನಾಂದೋಲನಕ್ಕೆ ಸಿಪಿಐ(ಎಂ) ಧುಮಿಕಿದೆ. ಅಲ್ಲಿನ ... ವಿವರಿಸುವ ... ವರದಿ ಇಲ್ಲಿದೆ.

ಸಂತೋಷ ಬಜಾಲ್



ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರಿನಿಂದ 8 ಕಿಮೀ ದಕ್ಷಿಣಕ್ಕೆ ನೇತ್ರಾವತಿ ನದಿಯ ದಡದಲ್ಲಿರುವ ಒಂದು ಪಟ್ಟಣವೇ ಉಳ್ಳಾಲ. ಇದು 16ನೇ ಶತಮಾನದಲ್ಲಿದ್ದ ಅಬ್ಬಕ್ಕ ರಾಣಿಯ ರಾಜಧಾನಿಯಾಗಿತ್ತು. ಇಲ್ಲಿ ಇವಳ ಕುಲದೈವವಾದ ಸೋಮನಾಥ ದೇವರ ಸುಂದರ ದೇವಾಲಯವಿದೆ. ಮುಸ್ಲಿಂ ಸಮುದಾಯದ ಪ್ರಸಿದ್ಧ ಸಯ್ಯದ್ ಮೊಹಮ್ಮದ್ ಷರೀಫ ಮದನಿ ದರ್ಗಾ, ಮಸೀದಿಯೊಂದು ಇಲ್ಲಿದ್ದು ಐದು ವರ್ಷಕ್ಕೊಮ್ಮೆ ಇಲ್ಲಿ ನಡೆಯುವ ಉರೂಸ್ ಬಹಳ ಪ್ರಸಿದ್ಧಿಯಾಗಿದೆ. ಸೋಮೇಶ್ವರ ಕಡಲ ಕಿನಾರೆ ಇಲ್ಲಿನ ಪ್ರವಾಸಿ ಆಕರ್ಷಣೆಯ ಕೇಂದ್ರ. 15ನೇ ಶತಮಾನದಲ್ಲಿ ಇದು ಪೋರ್ಚುಗೀಸರ ಆಳ್ವಿಕೆಗೆ ಒಳಪಟ್ಟಿತ್ತು. ಇನ್ನು ಅದರ ಅದ್ಭುತ ಇತಿಹಾಸದ ಅವಶೇಷಗಳನ್ನು ಕಡಲ ತೀರಗಳು ಮತ್ತು ಉಳ್ಳಾಲದ ಇತರ ಭಾಗಗಳಲ್ಲಿ ಕಾಣಬಹುದು.

ನಾಗರಿಕ ಆಡಳಿತ

ಮಂಗಳೂರು ನಗರ ಸಮೂಹದಲ್ಲಿ ಮಂಗಳೂರು ಮಹಾನಗರಪಾಲಿಕೆಯ ನಂತರ ಉಳ್ಳಾಲ ನಗರ ಸಭೆಯು ಎರಡನೇ ಅತಿದೊಡ್ಡ ಆಡಳಿತ ಮಂಡಳಿಯಾಗಿದೆ. ಉಳ್ಳಾಲವನ್ನು 1996ರಲ್ಲಿ ನಗರ ಪಂಚಾಯತ್ ಆಗಿ, 2006ರಲ್ಲಿ ಪಟ್ಟಣ ಪುರಸಭೆಯನ್ನಾಗಿ ಮತ್ತು ನಂತರ 2014ರಲ್ಲಿ ನಗರಸಭೆ ಆಗಿ ಮೇಲ್ದರ್ಜೆಗೇರಿಸಲಾಯಿತು.

2019ರಲ್ಲಿ ಕರ್ನಾಟಕ ರಾಜ್ಯ ಸರಕಾರ ಉಳ್ಳಾಲವನ್ನು ತಾಲೂಕು ಘೋಷಿಸಿ ಇಂದಿಗೆ 5 ವರುಷಗಳಾಗಿವೆ. ಇಲ್ಲಿ 23 ಗ್ರಾಮ ಪಂಚಾಯತ್, ಒಂದು ಪುರಸಭೆ (ಸೋಮೇಶ್ವರ), ಒಂದು ಪಟ್ಟಣ ಪಂಚಾಯತ್ (ಕೋಟೆಕಾರು), ಒಂದು ನಗರಸಭೆ(ಉಳ್ಳಾಲ)ಯನ್ನು ಒಳಗೊಂಡ ನಾಗರಿಕ ಆಡಳಿತ ವ್ಯವಸ್ಥೆಯನ್ನು ಹೊಂದಿದೆ.

ರಾಜಕೀಯ ಹಿನ್ನಲೆ

ಹಿಂದೆ ಉಳ್ಳಾಲ ವಿಧಾನಸಭಾ ಕ್ಷೇತ್ರವಾಗಿದ್ದ ಈ ಪ್ರದೇಶ ಈಗ ಮಂಗಳೂರು ವಿಧಾನಸಭಾ ಕ್ಷೇತ್ರವಾಗಿ ಮರುವಿಂಗಡನೆಗೊಂಡಿದೆ. ಈ ಕ್ಷೇತ್ರ ಒಂದು ಕಾಲಕ್ಕೆ ಕಮ್ಯೂನಿಸ್ಟರ ಭದ್ರಕೋಟೆ. 1962ರಲ್ಲಿ ಈ ಕ್ಷೇತ್ರದಿಂದ ವಿಧಾನಸಭೆಗೆ ಕಮ್ಯೂನಿಸ್ಟ್ ಪಕ್ಷದಿಂದ ಎ. ಕೃಷ್ಣ ಶೆಟ್ಟಿ ಶಾಸಕರಾಗಿ ಆಯ್ಕೆಯಾಗಿದ್ದರು. ಕಾಮ್ರೇಡ್ ಕೃಷ್ಣ ಶೆಟ್ಟಿ ಅಂದರೆ ಆ ದಿನಗಳಲ್ಲಿ ಬಹುದೊಡ್ಡ ಹೆಸರು. ಕಮ್ಯೂನಿಸ್ಟ್ ಪಕ್ಷದ ನೇತೃತ್ವದಲ್ಲಿ ಗೇಣಿದಾರರ ರೈತ ಸಂಘಟನೆ, ಸ್ವಾತಂತ್ರ್ಯ ಹೋರಾಟ, ಕಾರ್ಮಿಕ ವರ್ಗದ ಪರವಾದ ಹೋರಾಟಗಳಿಗೆ ನಾಯಕತ್ವ ನೀಡಿ ಬಹುದೊಡ್ಡ ಬಲ ತಂದು ಕೊಟ್ಟಿರುವ ಕೃಷ್ಣ ಶೆಟ್ಟರು ಕಮ್ಯೂನಿಸ್ಟ್ ಪಕ್ಷದ ಪ್ರಭಾವಿ ನಾಯಕರಾಗಿದ್ದರು. ಮುಂದೆ 1983ರಲ್ಲಿ ನಡೆದ ಚುನಾವಣೆಯಲ್ಲಿ ಇದೇ ಕ್ಷೇತ್ರದಿಂದ ಸಿಪಿಐ(ಎಂ) ಪಕ್ಷದಿಂದ ರಾಮಚಂದ್ರ ರಾವ್ ಶಾಸಕರಾಗಿ ಆಯ್ಕೆಯಾಗಿ ವಿಧಾನಸಭೆ ಪ್ರವೇಶಿಸಿದರು. ಶಾಲಾ ಶಿಕ್ಷಕ ಹುದ್ದೆಯನ್ನು ತ್ಯಜಿಸಿ ಕಮ್ಯೂನಿಸ್ಟ್ ಪಕ್ಷದ ನಾಯಕರಾಗಿ ಬೆಳೆದ ಮೇಷ್ಟ್ರು ರಾಮಚಂದ್ರ ರಾವ್ ರವರು, ಬೀಡಿ ಕಾರ್ಮಿಕರ ತುಟ್ಟಿಭತ್ಯೆಯ ಕಾನೂನಿನ ಜಾರಿಗಾಗಿ ವಿಧಾನಸಭೆಯಲ್ಲಿ ಧ್ವನಿಯೆತ್ತಿ ಆ ಕಾನೂನನ್ನು ಜಾರಿಗೊಳಿಸಿದ ಕೀರ್ತಿಗೆ ಪಾತ್ರರಾದರು. ಬೀಡಿ, ಟೈಲ್ ಕಾರ್ಖಾನೆ, ಗೇರು ಮುಂತಾದ ಕಾರ್ಮಿಕ ವರ್ಗದ ಪ್ರಬಲ ಚಳುವಳಿ ಕಟ್ಟಿದ ನಾಯಕರಿವರು. ಇವರಿಬ್ಬರ ಕಾಲಕ್ಕೆ ಉಳ್ಳಾಲ ವಿಧಾನಸಭಾ ಕ್ಷೇತ್ರದ ಮಹತ್ತರ ಬದಲಾವಣೆಗೆ ಕೊಡುಗೆ ನೀಡಿದರು. ಇಂದಿನ ಬದಲಾದ ಕಾಲಘಟ್ಟಕ್ಕೆ ಹಣ, ಧರ್ಮ, ಜಾತಿ ರಾಜಕಾರಣಗಳೇ ಏಕಾಧಿಪತ್ಯ ಸಾಧಿಸಿದಂತೆ ಆದರ್ಶ, ಮೌಲ್ಯಗಳಿಗೆ ಬೆಲೆ ಇಲ್ಲದಂತಾಗಿದೆ. ಚುನಾವಣೆಯಲ್ಲಿ ಹಣ ಹೊಳೆಯಾಗಿ ಹರಿಯುವ ಕಾಲದಲ್ಲಿ ಎಲ್ಲವೂ ವ್ಯಾಪಾರದ ಹಿತಾಸಕ್ತಿಗಳನ್ನೇ ಕಾಯ್ದುಕೊಂಡಿವೆ. ಊರಿನ ಅಭಿವೃದ್ಧಿ, ಜನರ ಬದುಕಿನ ಪ್ರಶ್ನೆಗಳೆಲ್ಲಾ ಹಿನ್ನೆಲೆಗೆ ಸರಿಯುತ್ತಾ ಹೋದವು. ಅಂತಹ ಪ್ರಶ್ನೆಗಳನ್ನೆತ್ತಿ ಹೋರಾಡುತ್ತಿರುವ ಕಮ್ಯೂನಿಸ್ಟ್ ಚಳುವಳಿಗಳ ಶಕ್ತಿ ಕ್ಷೀಣಿಸತೊಡಗಿದವು.

ಉಳ್ಳಾಲದಲ್ಲಿ ಕಮ್ಯೂನಿಸ್ಟ್ ಪಕ್ಷವು ಸೋಲುತ್ತಾ ಹೋದಂತೆ ಜನರ ಪ್ರಶ್ನೆಗಳು ಕೂಡಾ ಸೋಲುತ್ತಾ ಹೋದವು. ಜನರ ಪ್ರಶ್ನೆಗಳು ನೇಪತ್ಯಕ್ಕೆ ಸರಿದವು. ಆ ನಂತರದ ಕಾಲಕ್ಕೆ ಉಳ್ಳಾಲದಲ್ಲಿ ಸತತವಾಗಿ ಗೆಲ್ಲುತ್ತಾ ಬರುತ್ತಿರುವ ಕಾಂಗ್ರೆಸ್ ಪಕ್ಷ ಅಲ್ಲಿನ ಜನತೆಯನ್ನು ಅವರ ಬದುಕಿನ ಬಗೆಗಿನ ಪ್ರಶ್ನೆಗಳನ್ನು ಗೆಲ್ಲಿಸುವಲ್ಲಿ ಸೋಲುತ್ತಾ ಬಂದವು. ಅಭಿವೃದ್ಧಿ ಇಲ್ಲದಾದವು.

ಅಸಮಾನ ಅಭಿವೃದ್ಧಿ, ತೀರದ ಬವಣೆಗಳು

ಉಳ್ಳಾಲ ತಾಲೂಕು ರಚನೆಯಾಗಿ ಐದು ವರ್ಷ ದಾಟಿದೆ. ಉಳ್ಳಾಲದ ಒಂದೇ ತಾಲೂಕಿನಲ್ಲಿ ನಾಲ್ಕೈದು ಖಾಸಗೀ ಮೆಡಿಕಲ್ ಕಾಲೇಜುಗಳು, ಕಾರ್ಪೊರೇಟ್ ಆಸ್ಪತ್ರೆಗಳು, ವೃತ್ತಿಪರ ಕಾಲೇಜುಗಳು ತುಂಬಿ ಹೋಗಿವೆ. ಖಾಸಗೀ ಶಿಕ್ಷಣ ಸಂಸ್ಥೆಗಳು, ಆಸ್ಪತ್ರೆಗಳು, ಮೆಡಿಕಲ್ ಕಾಲೇಜುಗಳು ತುಂಬಿ ತುಳುಕಿ ಕಣ್ಣು ಕೋರೈಸುವ ಉಳ್ಳಾಲ ತಾಲೂಕಿನ ಅಭಿವೃದ್ಧಿಯ ಹಿಂದೆ ಅಗಾಧವಾದ ಸಮಸ್ಯೆಗಳಿವೆ. ಜನಸಾಮಾನ್ಯರ ತೀರದ ಬವಣೆಗಳಿವೆ. ಭೂಸುಧಾರಣೆ ಕಾಯ್ದೆಯಿಂದ ಸಮೃದ್ಧ ಕೃಷಿ ಭೂಮಿಯ ಒಡೆತನವನ್ನು ಪಡೆದ ಶ್ರಮಜೀವಿ ರೈತರಿಂದ ತುಂಬಿದ್ದ ಉಳ್ಳಾಲದ ಗ್ರಾಮಗಳು ಈಗ ರಿಯಲ್ ಎಸ್ಟೇಟ್ ದಾಳಿಯಿಂದ ಕಂಗೆಟ್ಟಿದೆ. ವಿವಿಧ ಮಸಲತ್ತುಗಳ ಮೂಲಕ ರೈತರಿಂದ ಅಗ್ಗದ ಬೆಲೆಗೆ ಭೂಮಿ ಕಿತ್ತುಕೊಂಡು ನವ ಭೂಮಾಲಕ ವರ್ಗವನ್ನು ಸೃಷ್ಟಿಸಲಾಗಿದೆ. ಮೆಡಿಕಲ್, ಶಿಕ್ಷಣ ಲಾಭಿಗಳಿಂದ ಭೂಮಿಯ ಬೆಲೆ ಗಗನಕ್ಕೇರಿದೆ. ಈ ಲಾಭಿಗಳದ್ದೇ ಹೊಸ ಸಾಮ್ರಾಜ್ಯ ಸೃಷ್ಟಿಯಾಗಿದೆ. ತುಂಡು ಭೂಮಿ ಖರೀದಿಸುವುದು, ಮನೆ ಕಟ್ಟುವುದು, ಮನೆ ಬಾಡಿಗೆ ಪಾವತಿಸುವುದು ಜನಸಾಮಾನ್ಯರ ಪಾಲಿಗಂತೂ ಅಸಾಧ್ಯವಾಗಿದೆ.

ಆಡಳಿತ ವೈಫಲ್ಯ

ಮರಳು ಮಾಫಿಯಾ, ಕೆಂಪು ಮಣ್ಣು ಮಾಫಿಯ, ಉಳ್ಳಾಲದ ನೆಲ ಜಲವನ್ನು ಅಕ್ಷರಶಃ ದೋಚುತ್ತಿದೆ ಮಾತ್ರವಲ್ಲ ಬರಡಾಗಿಸುತ್ತಿದೆ. ಪ್ರಕೃತಿ ಸೌಂದರ್ಯದ ಕಣಜದಂತಿರುವ ನೇತ್ರಾವತಿ ನದಿ ನಡುವಿನ ಕುದ್ರುಗಳು ಮರಳು ಮಾಫಿಯಾದ ದುರಾಸೆಗೆ ಕಳಚಿ ಬೀಳುತ್ತಿದೆ. ಕಳ್ಳತನ ಹಾವಳಿ ಹೆಚ್ಚಾಗಿದೆ. ದರೋಡೆಯಂತಹ ಪ್ರಕರಣಗಳು ಇಡೀ ರಾಜ್ಯವನ್ನೇ ಬೆಚ್ಚಿಬೀಳಿಸಿದೆ. ಗಾಂಜಾ, ಅಫೀಮು, ಮಾದಕ ದ್ರವ್ಯಗಳಿಗೆ ವಿದ್ಯಾರ್ಥಿ ಯುವಜನರು ಬಲಿಯಾಗುತ್ತಿದ್ದಾರೆ. ವ್ಯಸನಿಗಳಾಗಿ ದಾರಿತಪ್ಪುತ್ತಿದ್ದಾರೆ, ಅಲ್ಲದೇ ಸಮಾಜಘಾತುಕ ಕೃತ್ಯಗಳಲ್ಲಿ ತೊಡಗಿಸಿ ಜೈಲು ಸೇರುತ್ತಿದ್ದಾರೆ. ಇವುಗಳನ್ನೆಲ್ಲಾ ಹದ್ದುಬಸ್ತಿನಲ್ಲಿಡಬೇಕಾದ ಪೊಲೀಸ್ ಇಲಾಖೆ ಸಂಪೂರ್ಣ ವೈಫಲ್ಯಗೊಂಡಿದೆ.

ಹದಗೆಟ್ಟ ಆರೋಗ್ಯ ಪರಿಸ್ಥಿತಿ

ಉಳ್ಳಾಲದ ಜನತೆಯ ಆರೋಗ್ಯದ ಪರಿಸ್ಥಿತಿಯಂತೂ ಚಿಂತಾಜನಕವಾಗಿದೆ. ಈ ಭಾಗದಲ್ಲಿ ನಾಯಿಕೊಡೆಗಳಂತೆ ಅಲ್ಲಲ್ಲಿ ಖಾಸಗೀ ಮೆಡಿಕಲ್ ಕಾಲೇಜು ಆಸ್ಪತ್ರೆಗಳ ದರ್ಬಾರೇ ಸೃಷ್ಟಿಯಾಗಿದೆ. ಯಾವುದೇ ಲಂಗುಲಗಾಮಿಲ್ಲದೆ ರೋಗಿಗಳನ್ನು ತಪ್ಪಾದ ಚಿಕಿತ್ಸಾ ಕ್ರಮ, ಅನಗತ್ಯ ಪರೀಕ್ಷೆಗಳನ್ನು ನಡೆಸಿ ವಿಪರೀತ ದರಗಳನ್ನು ವಿಧಿಸುವ ಮೂಲಕ ಚಿಕಿತ್ಸೆ ಹೆಸರಲ್ಲಿ ಹಗಲು ದರೋಡೆ ನಡೆಸಲು ಖಾಸಗೀ ಆಸ್ಪತ್ರೆಗಳಿಗೆ ಅವಕಾಶ ಮಾಡಿಕೊಡಲಾಗಿದೆ. ಸರಕಾರಿ ಆಸ್ಪತ್ರೆಗಳು ಪಾಳುಬಿದ್ದಿವೆ. ಅವುಗಳ ಕಡೆಗಣನೆಯ ಕಾರಣಕ್ಕೆ ಬಡ, ಮಧ್ಯಮ ವರ್ಗದ ಜನತೆಯ ಆರೋಗ್ಯ ರಕ್ಷಣೆಯು ದುಬಾರಿಯಾಗಿದೆ. ಸರಕಾರದ ವೈದ್ಯಕೀಯ ಅಧಿನಿಯಮದಂತೆ ಜನಸಂಖ್ಯೆಗೆ ಅನುಗುಣವಾಗಿ ಇರಬೇಕಾದ ಪ್ರಾಥಮಿಕ ಆರೋಗ್ಯ ಕೇಂದ್ರ, ಹೋಬಳಿಗೆ ಸಮುದಾಯ ಆಸ್ಪತ್ರೆಗಳು ಸರಾಸರಿಗಿಂತ ಕೆಳಮಟ್ಟದಲ್ಲಿವೆ. ತಾಲೂಕಿಗೆ ತಾಲೂಕು ಆಸ್ಪತ್ರೆ ಇರಬೇಕಿದ್ದು ಅದನ್ನು ಈವರೆಗೂ ಸ್ಥಾಪಿಸಲು ಕನಿಷ್ಠ ಘೋಷಿಸಲು ಸಾಧ್ಯವಾಗಿಲ್ಲ.

ಶಿಕ್ಷಣದ ವ್ಯಾಪಾರೀಕರಣ ಮತ್ತು ಸರಕಾರಿ ಶಾಲೆಗಳ ದುಸ್ಥಿತಿ

ಉಳ್ಳಾಲದ ಶಿಕ್ಷಣ ಕ್ಷೇತ್ರದಲ್ಲಿಯೂ ಖಾಸಗೀ ಶಿಕ್ಷಣ ಸಂಸ್ಥೆಗಳೇ ತನ್ನ ಅಧಿಪತ್ಯವನ್ನು ಸ್ಥಾಪಿಸಿವೆ. ದುಬಾರಿ ಶುಲ್ಕ ಮತ್ತು ಡೊನೇಶನ್ ಹಾವಳಿಯಿಂದ ಜನ ತಮ್ಮ ದುಡಿಮೆಯ ಬಹುಪಾಲನ್ನು ಶಿಕ್ಷಣದ ವೆಚ್ಚಕ್ಕೆ ಭರಿಸಬೇಕಾಗಿದೆ. ಇದು ಅವರನ್ನು ಸಾಲದ ಕೂಪಕ್ಕೆ ತಳ್ಳಿದೆ. ಸರಕಾರಿ ಶಿಕ್ಷಣ ಕ್ಷೇತ್ರ ಮೂಲಭೂತ ಸೌಕರ್ಯಗಳಿಲ್ಲದೆ ಸೊರಗಿಹೋಗಿದೆ. ಸರಕಾರಿ ಶಿಕ್ಷಣ ಕೇಂದ್ರಗಳನ್ನು ಕಡೆಗಣಿಸಿದ ಕಾರಣಕ್ಕೆ ಕೊಣಾಜೆಯಲ್ಲಿರುವ ಮಂಗಳೂರು ವಿಶ್ವವಿದ್ಯಾನಿಲಯ ದಿವಾಳಿಯ ಅಂಚಿಗೆ ಬಂದು ತಲುಪಿದೆ. ಸರಕಾರಿ ಪದವಿ ಕಾಲೇಜುಗಳನ್ನು, ಐಟಿಐ, ಪಾಲಿಟೆಕ್ನಿಕ್, ಇಂಜಿನೀಯರಿಂಗ್ ಕಾಲೇಜುಗಳನ್ನು ಸ್ಥಾಪಿಸುವಲ್ಲಿ ಸಂಪೂರ್ಣ ನಿರ್ಲಕ್ಷ್ಯವಹಿಸುವ ಮೂಲಕ ಖಾಸಗೀ ಶಿಕ್ಷಣದ ವ್ಯಾಪಾರಿಗಳ ಹಿತಾಸಕ್ತಿಗಳನ್ನು ರಕ್ಷಿಸಲಾಗುವ ನೀತಿಗಳು ಬಡ ಕುಟುಂಬಗಳ ವಿದ್ಯಾರ್ಥಿಗಳನ್ನು ಗುಣಮಟ್ಟದ ಶಿಕ್ಷಣದಿಂದ ವಂಚಿತರನ್ನಾಗಿಸಲಾಗುತ್ತಿದೆ.

ನಿರುದ್ಯೋಗಿ ಯುವಜನತೆ

ಉಳ್ಳಾಲ ತಾಲೂಕಿನಾದ್ಯಂತ ನಾಯಿಕೊಡೆಗಳಂತೆ ತುಂಬಿ ಹೋಗಿರುವ ವಿವಿಧ ವೃತ್ತಿಪರ ಶಿಕ್ಷಣ ಸಂಸ್ಥೆಗಳಿಂದ ಸರ್ಟಿಫಿಕೇಟ್ ಹಿಡಿದು ಹೊರಬರುತ್ತಿರುವ ಅಸಂಖ್ಯಾತ ಯುವಜನರಿಗೆ ಉದ್ಯೋಗ ಸೃಷ್ಟಿಯಾಗುತ್ತಿಲ್ಲ. ಇಲ್ಲಿನ ಹಲವು ಕಾಲೇಜುಗಳು ನಿರುದ್ಯೋಗಿಗಳನ್ನು ಸೃಷ್ಟಿಸುವ ಕಾರ್ಖಾನೆಗಳಾಗಿ ಮಾರ್ಪಟ್ಟಿದೆ. ಈ ಭಾಗದಲ್ಲಿರುವ ಹಲವು ಬಗೆಯ ಉದ್ಯಮಗಳು, ವ್ಯಾಪಾರಿ ಸಂಸ್ಥೆಗಳು, ಖಾಸಗೀ ಮೆಡಿಕಲ್ ಕಾಲೇಜು, ಆಸ್ಪತ್ರೆಗಳು ಹಾಗೂ ಹಲವು ಕೈಗಾರಿಕೆಗಳಿದ್ದರೂ ಇದು ಸ್ಥಳೀಯ ಯುವಜನರಿಗೆ ಉತ್ತಮ ಉದ್ಯೋಗ ಅವಕಾಶಗಳನ್ನು ಒದಗಿಸುತ್ತಿಲ್ಲ. ಇದರಿಂದ ಯುವಜನರ ಭವಿಷ್ಯ ಅತಂತ್ರಗೊಂಡು ಅರಬ್ ದೇಶಗಳಿಗೆ ವಲಸೆಹೋಗುವ ಅನಿವಾರ್ಯತೆ ಸೃಷ್ಟಿಯಾಗಿದೆ. ಇಂತಹದರಲ್ಲಿ ಮಕ್ಕಳ ಶಿಕ್ಷಣಕ್ಕಾಗಿ ತಮ್ಮ ಬದುಕನ್ನೇ ಧಾರೆ ಎರೆದ ಪೋಷಕರ ಕನಸು ಸಂಪೂರ್ಣ ಭಗ್ನಗೊಂಡಿದೆ.

ಮೂಲಭೂತ ಸೌಕರ್ಯಗಳ ಕಡೆಗಣನೆ

ಉಳ್ಳಾಲ ತಾಲೂಕು ರಚನೆಯಾಗಿ ಐದು ವರ್ಷ ದಾಟಿದರೂ ತಾಲೂಕು ಕಚೇರಿ/ಮಿನಿ ವಿಧಾನಸೌಧ ಹೊಂದುವ ಭಾಗ್ಯ ಉಳ್ಳಾಲಕ್ಕೆ ಇನ್ನು ಒದಗಿಬಂದಿಲ್ಲ. ಸುಸಜ್ಜಿತವಾದ ಮಾರುಕಟ್ಟೆ, ತಾಲೂಕು ಮಟ್ಟದ ಕ್ರೀಡಾಂಗಣ, ರಂಗಮಂದಿರ, ಪುರಭವನ, ಸರಕಾರಿ ಪದವಿ ಕಾಲೇಜು, ಐಟಿಐ, ಪಾಲಿಟೆಕ್ನಿಕ್ ಹೀಗೆ ನಿಯಮದ ಪ್ರಕಾರ ತಾಲೂಕು ಒಂದಕ್ಕೆ ಇರಬೇಕಾದ ಯಾವುದೂ ಇಲ್ಲಿಗೆ ಮಂಜೂರಾಗಿಲ್ಲ. ಮಂಜೂರುಮಾಡುವ ಯೋಜನೆಯೂ ಸಂಬಂಧಪಟ್ಟವರಿಗೆ ಇಲ್ಲ. ಇನ್ನು ಮನೆ ನಿವೇಶನ, ಹೆಚ್ಚಳಗೊಂಡಿರುವ ಸ್ವಯಂ ಘೋಷಿತ ಆಸ್ತಿ ತೆರಿಗೆ, ಕುದ್ರುಗಳ ರಕ್ಷಣೆ, ಪ್ರವಾಸಿತಾಣಗಳ ಅಭಿವೃದ್ಧಿ, ಕುಡಿಯುವ ನೀರು, ಒಳಚರಂಡಿ, ಸರಕಾರಿ ಬಸ್ಸು, ತ್ಯಾಜ್ಯ ವಿಲೇವಾರಿ, ದಲಿತ ಆದಿವಾಸಿಗಳಿಗೆ ನ್ಯಾಯ, ಬೀದಿಬದಿ ವ್ಯಾಪಾರಿಗಳಿಗೆ ಪರ್ಯಾಯ ವ್ಯವಸ್ಥೆ, ಆಟೋರಿಕ್ಷಾ ನಿಲ್ದಾಣಗಳ ಅಭಿವೃದ್ಧಿ ಬಗ್ಗೆ ಪ್ರಸ್ತಾಪಗಳೇ ಇಲ್ಲದಿರುವಾಗ ಉಳ್ಳಾಲ ತೀರಾ ಹಿಂದುಳಿದಂತೆ ಭಾಸವಾಗುತ್ತಿದೆ.

ಈಗಾಗಲೇ ಸಿಪಿಐ(ಎಂ) ಪಕ್ಷ ಉಳ್ಳಾಲವನ್ನು ಬಾಧಿಸಿದ ಎಲ್ಲಾ ಅಸಮಾನ ವ್ಯವಸ್ಥೆಗಳ ವಿರುದ್ಧ ನಿರಂತರ ಹೋರಾಟ ಚಳುವಳಿಗಳನ್ನು ಮುನ್ನಡೆಸುತ್ತಾ ಬಂದಿದೆ. ಇಂತಹ ಹೋರಾಟವನ್ನು ಇನ್ನಷ್ಟು ವಿಸ್ತರಿಸುವ, ಸಾಮೂಹಿಕ ಸಂಘಟನೆಗಳು ನಡೆಸಿದ ಹೋರಾಟಗಳನ್ನು ಕ್ರೋಢೀಕರಿಸುವ ಮೂಲಕ ವಿದ್ಯಾರ್ಥಿ, ಯುವಜನ ಮಹಿಳಾ, ರೈತ, ಕಾರ್ಮಿಕ, ದಲಿತ, ಆದಿವಾಸಿ ಸೇರಿದಂತೆ ಸಮಸ್ತ ಜನತೆಯ ಬೇಡಿಕೆಗಳೊಂದಿಗೆ ಉಳ್ಳಾಲ ತಾಲೂಕಿನ ಸರ್ವಾಂಗೀಣ ಅಭಿವೃದ್ಧಿ ಮತ್ತು ಜನಸಾಮಾನ್ಯರ ಬವಣೆಗಳ ಪರಿಹಾರಕ್ಕಾಗಿ ಒಗ್ಗಟ್ಟಿನಿಂದ ಧ್ವನಿ ಮೊಳಗಿಸುವ ನಿಟ್ಟಿನಲ್ಲಿ ಬೃಹತ್ ರ್‍ಯಾಲಿ ಹಕ್ಕೊತ್ತಾಯ ಸಮಾವೇಶವನ್ನು 2025 ಎಪ್ರಿಲ್ 29ರಂದು ಉಳ್ಳಾಲದಲ್ಲಿ ಸಂಘಟಿಸಿದೆ.

ಈಗಾಗಲೇ ಈ ಹಕ್ಕೊತ್ತಾಯ ಚಳುವಳಿಗೆ ವ್ಯಾಪಕ ಬೆಂಬಲ ಹರಿದು ಬರತೊಡಗಿದೆ. ಪತ್ರೀ ಗ್ರಾಮಗಳಲ್ಲೂ ಜನ ಸ್ಪಂದಿಸುತ್ತಿದ್ದು ವ್ಯಾಪಕ ತಯಾರಿಗಳು ಶುರುವಾಗಿದೆ. ವಿದ್ಯಾರ್ಥಿ ಯುವಜನರು, ಸಿಪಿಐ(ಎಂ) ಪಕ್ಷದ ಕಾರ್ಯಕರ್ತರು, ಸಮಾವೇಶದ ಪ್ರಚಾರ ಕಾರ್ಯಗಳಲ್ಲಿ ಸಕ್ರಿಯತೆಯಿಂದ ತೊಡಗಿಸಿಕೊಂಡಿದ್ದಾರೆ. ಎಪ್ರಿಲ್ 29ರ ಹಕ್ಕೊತ್ತಾಯ ಸಮಾವೇಶ ಯಶಸ್ವಿಯಾಗಿ ನಡೆಯಲಿದೆ ಎಂಬುದರಲ್ಲಿ ಯಾವ ಅನುಮಾನಗಳು ಉಳಿದಿಲ್ಲ ಎಂಬುದನ್ನು ಉಳ್ಳಾಲದಲ್ಲಿ ನಡೆಯುತ್ತಿರುವ ಸದ್ಯದ ಬೆಳವಣಿಗೆಗಳು ಎತ್ತಿ ತೋರಿಸಿದೆ.

ವ್ಯಾನ್ಸ್ ಗೋ ಬ್ಯಾಕ್-ಭಾರತ ಮಾರಾಟಕ್ಕಿಲ್ಲ

ಅಮೆರಿಕ ಸಂಯುಕ್ತ ಸಂಸ್ಥಾನಗಳ ಉಪಾಧ್ಯಕ್ಷ ಜೆಡಿ ವ್ಯಾನ್ಸ್ ರವರ ಭಾರತ ಭೇಟಿಗೆ ಎಪ್ರಿಲ್ 21ರಂದು ದೇಶಾದ್ಯಂತ ರೈತರು ಪ್ರತಿಭಟನೆ ವ್ಯಕ್ತಪಡಿಸಿದ್ದಾರೆ. ಭಾರತ ಸರ್ಕಾರವು ರೈತರ ಹಿತಾಸಕ್ತಿಗಳನ್ನು ಕಾಪಾಡಿಕೊಳ್ಳುವಲ್ಲಿ ವಿಫಲವಾಗಿದೆ ಎಂದು ಖಂಡಿಸುವ ಪೋಸ್ಟರ್‌ಗಳು ಮತ್ತು ಬ್ಯಾನರ್‌ಗಳೊಂದಿಗೆ ಭಾರತದಾದ್ಯಂತದ ಹಳ್ಳಿಗಳು ಮತ್ತು ಜಿಲ್ಲಾ ಕೇಂದ್ರಗಳಲ್ಲಿ ಪ್ರತಿಭಟನಾಕಾರರು "ವ್ಯಾನ್ಸ್ ಹಿಂತಿರುಗಿ" ಮತ್ತು "ಭಾರತ ಮಾರಾಟಕ್ಕಿಲ್ಲ!" ಮುಂತಾದ ಘೋಷಣೆಗಳನ್ನು ಕೂಗಿದರು. ಕೆಲವು ಸ್ಥಳಗಳಲ್ಲಿ ಪ್ರತಿಭಟನಾಕಾರರು ವ್ಯಾನ್ಸ್ ಅವರ ಪ್ರತಿಕೃತಿಗಳನ್ನು ಸುಟ್ಟುಹಾಕಿದರು. ಭಾರತದ ಕೃಷಿ ಮತ್ತು ಸಣ್ಣ ಕೈಗಾರಿಕೆಗಳಿಗೆ ವಿಪತ್ತು ತರುವ ಒಪ್ಪಂದವನ್ನು ಅವರು ಅಂತಿಮಗೊಳಿಸಲು ಬಂದಿದ್ದಾರೆ ಎಂಬ ಆಕ್ರೋಶ ಈ ಪ್ರತಿಭಟನೆಗಳಲ್ಲಿ ವ್ಯಕ್ತಗೊಂಡಿದೆ.

ವಾನ್ಸ್ ಭೇಟಿಯ ಪ್ರಾಥಮಿಕ ಅಜೆಂಡಾ ಎಂದರೆ ಎರಡೂ ದೇಶಗಳ ನಡುವಿನ ವ್ಯಾಪಾರ ಒಪ್ಪಂದವನ್ನು ಅಂತಿಮಗೊಳಿಸುವುದು. ಫೆಬ್ರವರಿಯಲ್ಲಿ ಭಾರತದ ಪ್ರಧಾನಿ



ನರೇಂದ್ರ ಮೋದಿ ಅವರು ಅಮೆರಿಕಕ್ಕೆ ಭೇಟಿ ನೀಡಿದ ನಂತರ ಒಪ್ಪಂದದ ಕುರಿತು ಮಾತುಕತೆಗಳು ನಡೆಯುತ್ತಿವೆ. ಭಾರತದ ಕೃಷಿ ಮತ್ತು ಸಣ್ಣ ಕೈಗಾರಿಕೆಗಳಿಗೆ ವಿಪತ್ತು ತರುವ ಒಪ್ಪಂದವನ್ನು ಅವರು ಅಂತಿಮಗೊಳಿಸಲು ಬಂದಿದ್ದಾರೆ ಎಂಬ ರೈತರು ಮತ್ತು ಕಾರ್ಮಿಕರ ಆಕ್ರೋಶ ಈ ಪ್ರತಿಭಟನೆಗಳಲ್ಲಿ ವ್ಯಕ್ತಗೊಂಡಿದೆ.

ಅಮೆರಿಕದ ಕೃಷಿ ಉತ್ಪನ್ನಗಳಿಗೆ ದೇಶದ ಮಾರುಕಟ್ಟೆಯನ್ನು ತೆರೆಯಲು ಅಮೆರಿಕ ಭಾರೀ ಒತ್ತಡವನ್ನು ಹಾಕುತ್ತಿದೆ. ಈ ಕ್ರಮವು ಈಗಾಗಲೇ ಬಿಕ್ಕಟ್ಟಿನಲ್ಲಿರುವ ಭಾರತದ ಕೃಷಿ ವಲಯಕ್ಕೆ ವಿಪತ್ತು ಎಂದು ರೈತರು ಹೇಳುತ್ತಾರೆ.

ಎಐಕೆಎಸ್ ಕರೆ

ಈ ಒಪ್ಪಂದ ಭಾರತದ ಹಿತಾಸಕ್ತಿಗಳ ಶರಣಾಗತಿಯ ಪ್ರತೀಕ ಎಂದಿರುವ ದೇಶದ ಅತಿದೊಡ್ಡ ರೈತ ಸಂಘಟನೆ ಅಖಿಲ ಭಾರತ ಕಿಸಾನ್ ಸಭಾ(ಎಐಕೆಎಸ್) 'ಓ ವ್ಯಾನ್ಸ್ ಹಿಂತಿರುಗಿ' ಅಭಿಯಾನವನ್ನು ಪ್ರಾರಂಭಿಸಲು ಮತ್ತು ಯುಎಸ್ ಜೊತೆಗಿನ ಪ್ರಸ್ತಾವಿತ ವ್ಯಾಪಾರ ಒಪ್ಪಂದವನ್ನು ವಿರೋಧಿಸಲು ಕರೆ ನೀಡಿತು.

ವ್ಯಾನ್ಸ್ ಅವರ ಭಾರತ ಭೇಟಿಯು "ಭಾರತದ ಪ್ರಭುತ್ವದ ಮೇಲೆ ಮತ್ತು ಕಾರ್ಪೊರೇಟ್ ನೇತೃತ್ವದ ಆಳುವ ವರ್ಗಗಳ ಮೇಲೆ ಒತ್ತಡ ಹೇರುವ ಮೂಲಕ ಬಹುರಾಷ್ಟ್ರೀಯ ಕಂಪನಿಗಳಿಗೆ ಲಾಭ ಸೂರೆಗೊಳ್ಳುವುದನ್ನು ಸುಗಮಗೊಳಿಸಲು ರಾಷ್ಟ್ರೀಯ ಹಿತಾಸಕ್ತಿಗಳನ್ನು ಬಿಟ್ಟುಕೊಡುವಂತೆ ಒತ್ತಡ ಹೇರುವುದಕ್ಕಾಗಿ" ಎಂದು ಎಐಕೆಎಸ್ ಹೇಳಿದೆ.

"ಭಾರತದ ಪ್ರಧಾನಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಆದೇಶಗಳಿಗೆ ಮಣಿದಿದ್ದಾರೆ ಮತ್ತು ಕೃಷಿ ಉತ್ಪನ್ನಗಳು ಸೇರಿದಂತೆ ಅಮೆರಿಕದ ಉತ್ಪನ್ನಗಳಿಗೆ ಸುಂಕ ಮತ್ತು ಸುಂಕೇತರ ಅಡೆತಡೆಗಳನ್ನು ಸಡಿಲಿಸುವ ಯೋಜನೆಗಳೊಂದಿಗೆ ಮುಂದುವರಿಯುತ್ತಿದ್ದಾರೆ" ಎಂದು ಎಐಕೆಎಸ್ ಆರೋಪಿಸಿದೆ.

ಟ್ರಂಪ್ ತಮ್ಮ ಆಡಳಿತದ ಪ್ರತಿ–ಸುಂಕ ಎಂಬ ವ್ಯವಸ್ಥೆಯ ಅಡಿಯಲ್ಲಿ ಏಪ್ರಿಲ್ 3 ರಂದು ಅಮೆರಿಕಕ್ಕೆ ಭಾರತದ ಎಲ್ಲಾ ರಫ್ತುಗಳ ಮೇಲೆ ಶೇ. 26ರಷ್ಟು ಸುಂಕ ಘೋಷಿಸಿದರು. ನಂತರ ಹೊಸ ಸುಂಕ ದರಗಳನ್ನು ವಿಧಿಸುವುದನ್ನು ಮೂರು ತಿಂಗಳ ಕಾಲ ಮುಂದೂಡಲಾಗಿದ್ದರೂ, ಭಾರತದ ಸುಂಕ ವ್ಯವಸ್ಥೆಯು ಅಮೆರಿಕದ ಉತ್ಪನ್ನಗಳಿಗೆ ಅನ್ಯಾಯ ಮಾಡಿದೆ ಎಂದು ಟ್ರಂಪ್ ಬಹಳ ಹಿಂದಿನಿಂದಲೂ ಹೇಳಿಕೊಂಡು ಬಂದಿದ್ದಾರೆ, ಅದು ತನ್ನ ಮಾರುಕಟ್ಟೆಗಳಿಗೆ ಪ್ರವೇಶವನ್ನು ನಿರ್ಬಂಧಿಸುತ್ತಿದೆ ಎಂದು ಆರೋಪಿಸಿದ್ದಾರೆ.

ಅಮೆರಿಕದ ವಾಣಿಜ್ಯ ಕಾರ್ಯದರ್ಶಿ ಹೊವಾರ್ಡ್ ಲುಟ್ನಿಕ್, ಭಾರತವು ಅಮೆರಿಕಕ್ಕೆ ತನ್ನ ಕೃಷಿ ಮಾರುಕಟ್ಟೆಗಳನ್ನು ಮುಚ್ಚಲು ಬಿಡುವುದಿಲ್ಲ ಎಂದೇ ನಿರ್ದಿಷ್ಟವಾಗಿ ಹೇಳಿಕೊಂಡಿದ್ದಾರೆ. ಅಮೆರಿಕದ ಕೃಷಿ ಉತ್ಪನ್ನಗಳಿಗೆ ಭಾರತದ ಕೃಷಿ ವಲಯವನ್ನು ತೆರೆಯುವುದು ಪ್ರಸ್ತಾವಿತ ವ್ಯಾಪಾರ ಒಪ್ಪಂದದ ಕೇಂದ್ರ ಉದ್ದೇಶವಾಗಿದೆ ಎಂದೂ ಅವರು ಹೇಳಿದ್ದರು.

"ಭಾರತದೊಂದಿಗಿನ ಸಂಬಂಧಗಳಿಂದಾಗಿ ಅಮೆರಿಕ ನಷ್ಟ ಅನುಭವಿಸುತ್ತಿದೆ" ಎಂಬುದು ಒಂದು ವಿಕೃತ ವಾದ, ಏಕೆಂದರೆ, ಭಾರತದ ತಲಾ ಆದಾಯವು ಅಮೆರಿಕದ ತಲಾ ಆದಾಯದ ಸುಮಾರು ಶೇ.5ರಷ್ಟಿದೆಯಷ್ಟೇ. ಅಮೆರಿಕ ಒಂದು ಮುಂದುವರಿದ ಅರ್ಥವ್ಯವಸ್ಥೆ, ಭಾರತ ಇನ್ನೂ ಬಡ, ಅಭಿವೃದ್ಧಿಯಾಗದ ಅರ್ಥವ್ಯವಸ್ಥೆಯಾಗಿದೆ ಎನ್ನುತ್ತಾರೆ ಜವಾಹರಲಾಲ್ ನೆಹರು ವಿಶ್ವವಿದ್ಯಾಲಯದ ಆರ್ಥಿಕ ಅಧ್ಯಯನ ಮತ್ತು ಯೋಜನಾ ಕೇಂದ್ರದ (CESP) ಪ್ರಾಧ್ಯಾಪಕ ಸುರಜಿತ್ ಮಜುಂದಾರ್,

ರೈತರು ಮತ್ತು ಸಣ್ಣ ಕೈಗಾರಿಕೆಗಳಿಗೂ ವಿಪತ್ತು

ಭಾರತದ ಕೃಷಿ ವಲಯವನ್ನು ಅಮೆರಿಕದ ಕೃಷಿ ಉತ್ಪನ್ನಗಳಿಗೆ ತೆರೆಯುವುದರಿಂದ ಭಾರತೀಯ ಕೃಷಿಗೆ ಹಾನಿಯಾಗುತ್ತದೆ. ಈಗಾಗಲೇ ಹಲವು ವರ್ಷಗಳಿಂದ ಬಿಕ್ಕಟ್ಟಿನಲ್ಲಿರುವ ಕೃಷಿ ವಲಯ ಮತ್ತು ಲಕ್ಷಾಂತರ ರೈತರು ಮತ್ತು ಅವರ ಕುಟುಂಬಗಳ ಮೇಲೆ ದುಷ್ಪರಿಣಾಮ ಬೀರುತ್ತದೆ ಎಂದು ಎಐಕೆಎಸ್ ಹೇಳುತ್ತದೆ. ಅಮೆರಿಕದ ಅಧಿಕಾರಿಗಳು ನಿರೂಪಿಸುವ ಯಾವುದೇ ರೀತಿಯ ಒಪ್ಪಂದವು





ನಿರ್ದಿಷ್ಟವಾಗಿ ಭಾರತದ ಹೈನು ಉದ್ಯಮಕ್ಕೆ ಮರಣ ಗಂಟೆಯಾಗಲಿದೆ ಎಂದು ಎಐಕೆಎಸ್ ಎಚ್ಚರಿಸಿದೆ.

"ಈಗ ನಡೆಯುತ್ತಿರುವ ವ್ಯಾಪಾರ ಮಾತುಕತೆಗಳು ಅಮೆರಿಕದಿಂದ ಅಗ್ಗದ ಹತ್ತಿ, ಸೋಯಾಬೀನ್, ಮೆಕ್ಕೆಜೋಳ, ಸೇಬು ಇತ್ಯಾದಿಗಳನ್ನು ಭಾರತದಲ್ಲಿ ತಂದು ಸುರಿಯಲು ಅನುವು ಮಾಡಿಕೊಡುವ ಉದ್ದೇಶಪೂರ್ವಕ ಕ್ರಮವಾಗಿದ್ದು, ಇದು ಅಕ್ಷರಶಃ ಮಾರುಕಟ್ಟೆಯನ್ನು ಮುಳುಗಿಸಬಹುದು. ಇದು ಭಾರತೀಯ ರೈತರ ಬೆಳೆಗಳಿಗೆ ಬೆಲೆ ಕುಸಿತಕ್ಕೆ ಕಾರಣವಾಗುತ್ತದೆ" ಎಂದೂ ಅದು ಎಚ್ಚರಿಸಿದೆ.

ಅಲ್ಲದೆ ಎಲ್ಲ ಮಾತುಕತೆಗಳನ್ನೂ ರಾಜ್ಯ ಸರಕಾರಗಳನ್ನು ಮತ್ತು ಸಂಸತ್ತನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೆ ನಡೆಸಲಾಗುತ್ತಿದೆ. ಇಂತಹ ಒಪ್ಪಂದಗಳು ಅಂತರರಾಷ್ಟ್ರೀಯ ಶ್ರಮ ನಿಬಂಧನೆಗಳನ್ನು ಪಾಲಿಸುತ್ತವೆ ಎಂಬ ಆಶ್ವಾಸನೆಯೂ ಇಲ್ಲ.

ಕೃಷಿಯಲ್ಲಿ ಕಾರ್ಪೊರೇಟ್ ಹಿತಾಸಕ್ತಿಗಳನ್ನು ತುರುಕುವ ಸರ್ಕಾರದ ಪ್ರಯತ್ನದ ವಿರುದ್ಧ ಭಾರತೀಯ ರೈತರ ಹೋರಾಟದ ಮೇಲೆ ಇಂತಹ ಒಪ್ಪಂದವು ನಕಾರಾತ್ಮಕ ಪರಿಣಾಮ ಬೀರುತ್ತದೆ. ಅಮೆರಿಕದ ಕೃಷಿ ಉತ್ಪನ್ನಗಳು ಭಾರತೀಯ ಮಾರುಕಟ್ಟೆಗಳನ್ನು ತುಂಬಿದರೆ, ಭಾರತೀಯ ಕೃಷಿ ಉತ್ಪನ್ನಗಳಿಗೆ ಕಾನೂನುಬದ್ಧ ಕನಿಷ್ಠ ಬೆಂಬಲ ಬೆಲೆ(ಎಂಎಸ್‌ಪಿ)ಗಾಗಿ ಒತ್ತಾಯಿಸುವುದು ಹೆಚ್ಚು ಕಷ್ಟಕರವಾಗುತ್ತದೆ ಎಂಬ ಕಳವಳವನ್ನೂ ಇದು ಹುಟ್ಟುಹಾಕಿದೆ.

ಅಮೆರಿಕದೊಂದಿಗಿನ ವ್ಯಾಪಾರ ಒಪ್ಪಂದವು ಅದು ಯೋಜಿಸಿದಂತೆ ನಡೆದರೆ, ಭಾರತೀಯ ಕೃಷಿಯ ಬಿಕ್ಕಟ್ಟನ್ನು ಮತ್ತಷ್ಟು ತೀವ್ರಗೊಳಿಸುತ್ತದೆ ಮತ್ತು ರೈತರ ಸಾಲಗ್ರಸ್ತತೆಯನ್ನು ಮತ್ತಷ್ಟು ಹೆಚ್ಚಿಸುತ್ತದೆ ಎಂದು ಎಐಕೆಎಸ್‌ನ ಪ್ರಧಾನ ಕಾರ್ಯದರ್ಶಿ ವಿಜೂ ಕೃಷ್ಣನ್ ಹೇಳುತ್ತಾರೆ.

"ಕಳೆದ ಕೆಲವು ವರ್ಷಗಳಲ್ಲಿ 1,50,000 ಕ್ಕೂ ಹೆಚ್ಚು ರೈತರು ಸಾಲದ ಹೊರೆಯಿಂದ ಆತ್ಮಹತ್ಯೆ ಮಾಡಿಕೊಂಡಿದ್ದಾರೆ, ಮುಂಬರುವ ದಿನಗಳಲ್ಲಿ ಈ ವಿದ್ಯಮಾನವು ಹೆಚ್ಚಾಗಬಹುದು" ಎಂದು ಅವರು ಹೇಳುತ್ತಾರೆ.

ಟ್ರಂಪ್ ಅವರ ಸುಂಕ ಸಮರಕ್ಕೆ ಭಾರತ ಶರಣಾಗುವುದರಿಂದ ಉಂಟಾಗುವ ಪರಿಣಾಮ ಕೃಷಿ ವಲಯಕ್ಕೆ ಮಾತ್ರ ಸೀಮಿತವಾಗಿಲ್ಲ ಎಂದು ಎಐಕೆಎಸ್ ಎಚ್ಚರಿಸಿದೆ. "ಜೆನೆರಿಕ್ ಔಷಧಗಳಿಂದ ಹಿಡಿದು ವಾಹನ ಬಿಡಿಭಾಗಗಳವರೆಗೆ ಮಧ್ಯಮ, ಸಣ್ಣ ಮತ್ತು ಸೂಕ್ಷ್ಮ ಉದ್ಯಮಗಳು ಮತ್ತು ಈ ವಲಯಗಳಲ್ಲಿನ ಲಕ್ಷಾಂತರ ಕಾರ್ಮಿಕರ ಮೇಲೆ ಸಹ ಪ್ರತಿಕೂಲ ಪರಿಣಾಮ ಬೀರಲಿವೆ.

ಚೀನಾ, ಕೆನಡಾ ಮತ್ತು ಮೆಕ್ಸಿಕೊದಂತಹ ದೇಶಗಳು ತಮ್ಮ ಆರ್ಥಿಕ ಹಿತಾಸಕ್ತಿಗಳನ್ನು ಕಾಪಾಡಿಕೊಳ್ಳಲು ದೃಢ ಪ್ರತಿರೋಧ ತೋರಿವೆ. ಕೆನಡಾ ಮತ್ತು ಮೆಕ್ಸಿಕೋದ ಶೇ. 70ಕ್ಕಿಂತಲೂ ಹೆಚ್ಚು ರಫ್ತು ಅಮೆರಿಕಾಕ್ಕೆ ಹೋಗುತ್ತಿದ್ದರೂ, ತಿರುಗಿ ಹೊಡೆತ ನೀಡಲು ಒಂದು ಕ್ಷಣವೂ ಹಿಂದೆ ಮುಂದೆ ನೋಡಲಿಲ್ಲ. ಆದರೆ ತನ್ನ ರಫ್ತುಗಳಲ್ಲಿ ಶೇ. 18ರಷ್ಟನ್ನು ಮಾತ್ರ ಅಮೆರಿಕಕ್ಕೆ ರಫ್ತು ಮಾಡುವ ಭಾರತ ಸರ್ಕಾರ ಹಾಗೆ ಮಾಡದೆ, ಸುಂಕ ಸಮರದಲ್ಲಿ ಶರಣಾಗುತ್ತಿದೆ. ಈ ಶರಣಾಗತಿಯ ದಾರಿಯನ್ನು ಬಿಟ್ಟು ತನ್ನ ಕಾರ್ಮಿಕರು ಮತ್ತು ರೈತರ ಹಿತಾಸಕ್ತಿಯನ್ನು ಕಾಪಾಡಲು ಭಾರತ ಸರ್ಕಾರವು ಎದ್ದು ನಿಲ್ಲಬೇಕು ಮತ್ತು ಹೋರಾಟವಿಲ್ಲದೆ ರಾಷ್ಟ್ರೀಯ ಹಿತಾಸಕ್ತಿಯನ್ನು ಬಿಟ್ಟುಕೊಡುವ ಬದಲು ಟ್ರಂಪ್ ಸುಂಕ ಬೆದರಿಕೆಗಳನ್ನು ದೃಢನಿಶ್ಚಯದಿಂದ ಹಿಂದಕ್ಕೆ ತಳ್ಳಬೇಕು ಎಂದು ಎಐಕೆಎಸ್ ಆಗ್ರಹಿಸಿದೆ.

ಸ್ವಾಗತದ ಈ ಪರಿ!



ಭಾರತಕ್ಕೆ ಸುಸ್ವಾಗತ, ಉಪಾಧ್ಯಕ್ಷ ಜೆ ಡಿ ವಾನ್ಸ್ ಮತ್ತು ತಂಡ!
ವ್ಯಂಗ್ಯಚಿತ್ರ ಕೃಪೆ: ಸಜಿತ್ ಕುಮಾರ್, ಡೆಕ್ಕನ್ ಹೆರಾಲ್ಡ್







ಟ್ರಂಪ್ ಸುಂಕ ದಾಳಿಯ ಎದುರು ಭಾರತ "ಎಂದಿನಂತೆ" ಮುಂದುವರೆಯಲು ಸಾಧ್ಯವಿಲ್ಲ

ಟ್ರಂಪ್ ಸುಂಕಗಳ ಹೊರತಾಗಿಯೂ "ವ್ಯವಹಾರವು ಯಥಾಪ್ರಕಾರ"ವಾಗಿ ಮುಂದುವರಿಯಬೇಕೆಂದು ಬಯಸುವ ನವ-ಉದಾರವಾದಿ ವಕ್ತಾರರು, ಭಾರತದಂತಹ ದೇಶಗಳು ಆಮದು ಸುಂಕಗಳ ಹೆಚ್ಚಳವನ್ನು ಕೈಬಿಟ್ಟು, ಅದರ ಬದಲಾಗಿ ತಮ್ಮ ಕರೆನ್ಸಿಗಳ ಅಪಮೌಲ್ಯೀಕರಣ ಮಾಡಬೇಕು ಎಂದು ಸೂಚಿಸುವ ಮೂಲಕ, ಮುಖ್ಯವಾಗಿ ಕಾರ್ಮಿಕರನ್ನು ಇನ್ನಷ್ಟು ಹಿಂಡಬೇಕು ಎಂದೇ ಸೂಚಿಸುತ್ತಿದ್ದಾರೆ. ಟ್ರಂಪ್ ಅವರ ಸುಂಕಗಳ ಹಿನ್ನೆಲೆಯಲ್ಲಿಯೂ ನವ ಉದಾರವಾದವು ಮುಂದುವರಿಯಬೇಕು, ಆದರೆ ಅದಕ್ಕೆ ಕಾರ್ಮಿಕರು ಬೆಲೆ ತೆರಬೇಕು ಎಂಬುದೇ ಅವರ ಆಶಯ. ಆದರೆ, ವಾಸ್ತವವಾಗಿ, ಈಗಲೂ, "ನವ ಉದಾರವಾದ"ಕ್ಕೆ ಅಂಟಿಕೊಂಡೇ ಇರುವುದು ಭಾರತದ ಜನತೆಗೆ, ಅವರ ಜೀವನಕ್ಕೆ ಮತ್ತು ಅವರು ಕಷ್ಟಪಟ್ಟು ಗಳಿಸಿದ ಸ್ವಾತಂತ್ರ್ಯಕ್ಕೆ ವಿಪತ್ತು ತರುತ್ತದೆ. ಇನ್ನೊಂದೆಡೆಯಲ್ಲಿ, ಟ್ರಂಪ್‌ರ ಸುಂಕಗಳು ಇಡೀ ನವ ಉದಾರವಾದಿ ಆಳ್ವಿಕೆಯಿಂದ ಹೊರಬರಲು ಒಂದೊಳ್ಳೆ ಅವಕಾಶವನ್ನು ಒದಗಿಸುತ್ತವೆ. ಇಂತಹ ಸನ್ನಿವೇಶದಲ್ಲಿ, ದುಡಿಯುವ ಜನರು ತಮ್ಮ ಅದೃಷ್ಟವನ್ನು ತಾವೇ ನಿರ್ವಹಿಸಿಕೊಳ್ಳಲು ಒಂದು ಅಗತ್ಯ ಷರತ್ತೆಂದರೆ, ಅವರು ನವ ಉದಾರವಾದವನ್ನು ಮೀರಿ ಹೋಗಬೇಕು. ಟ್ರಂಪ್‌ರವರ ದಾಳಿ ಅದಕ್ಕೆ ಒಂದು ಅವಕಾಶವನ್ನು ಒದಗಿಸುತ್ತದೆ.

ಪ್ರೊ.ಪ್ರಭಾತ್ ಪಟ್ನಾಯಕ್ ಅನು:ಕೆ.ಎಂ.ನಾಗರಾಜ್



ಡೊನಾಲ್ಡ್ ಟ್ರಂಪ್ ತಮ್ಮ ಪ್ರಸ್ತಾವಿತ ಸುಂಕಗಳನ್ನು ತೊಂಬತ್ತು ದಿನಗಳವರೆಗೆ ಮುಂದೂಡಿದ್ದಾರೆ. ಆದರೆ, ಭಾರತದಂತಹ ದೇಶಗಳು ತೊಂಬತ್ತು ದಿನಗಳ ನಂತರವಾದರೂ ಟ್ರಂಪ್ ಅವರ ಸುಂಕಗಳಿಗೆ ಪ್ರತಿಕ್ರಿಯಿಸಲೇ ಬೇಕಾಗುತ್ತದೆ. ಈ ಸುಂಕಗಳನ್ನು ಕೇವಲ ಒಂದು ಒಂಟಿ ಪ್ರಸಂಗ ಎನ್ನುವಂತಿಲ್ಲ. ತಮಗೆ ಒಪ್ಪಿಗೆಯಾಗದ ರೀತಿಯಲ್ಲಿ ಮತ್ತು ಧೈರ್ಯವಾಗಿ ವರ್ತಿಸುವ ಯಾವುದೇ ದೇಶದ ಮೇಲೆ ಸುಂಕ ವಿಧಿಸುವುದಾಗಿ ಟ್ರಂಪ್ ಬೆದರಿಸುತ್ತಾರೆ. ತಮ್ಮ ದೇಶದಲ್ಲಿ ಕೈಗಾರಿಕಾ ಚಟುವಟಿಕೆಗಳನ್ನು ಬಲಗೊಳಿಸುವ ಮತ್ತು ಅಮೆರಿಕದ ಚಾಲ್ತಿ ಖಾತೆಯ ಕೊರತೆಯನ್ನು ಕಡಿಮೆ ಮಾಡುವಂತಹ ಆರ್ಥಿಕ ಉದ್ದೇಶಗಳಿಗಾಗಿ ಸುಂಕಗಳನ್ನುಬಳಸುತ್ತಿದ್ದಾರೆ ಮಾತ್ರವಲ್ಲ,ಅಮೆರಿಕದ ಪ್ರಾಬಲ್ಯವನ್ನು ಪ್ರದರ್ಶಿಸಲು ಸುಂಕಗಳನ್ನು ಅವರು ಒಂದು ಆಯುಧವನ್ನಾಗಿಸಿದ್ದಾರೆ. ಸಂಕ್ಷಿಪ್ತವಾಗಿ ಹೇಳುವುದಾದರೆ, ವಿಶ್ವ ಬಂಡವಾಳಶಾಹಿಯು ಈಗ ಹೊಸದೇ ಆದ ಒಂದು ಹಂತದಲ್ಲಿದೆ. ಅದರ ಬಗ್ಗೆ ಅರಿವೇ ಇಲ್ಲದವರಂತೆ ಭಾರತದಂತಹ ದೇಶಗಳು ನಟನೆ ಮಾಡುವುದು ಮತ್ತು "ಯಥಾಪ್ರಕಾರ ವ್ಯವಹಾರ"(business as usual) ಮುಂದುವರೆದರೆ ಸಾಕು ಎನ್ನುವುದು ಒಂದು ಅಸಂಬದ್ಧವೇ ಸರಿ. ಬಂಡವಾಳಶಾಹಿಯು ತನ್ನ ಉಚ್ಛ್ರಾಯ ಸ್ಥಿತಿಯಲ್ಲಿ ಹೊಂದಿದ್ದ ಈ "ಯಥಾಪ್ರಕಾರ ವ್ಯವಹಾರ" ಮನೋಭಾವವು ದೇಶದ ದುಡಿಯುವ ಜನರಿಗೆ ದೊಡ್ಡ ನೋವನ್ನೇ ತಂದಿತ್ತು. ಹಾಗಾಗಿ, ಬಂಡವಾಳಶಾಹಿಯ ಪರಿಸ್ಥಿತಿ ಬದಲಾದಾಗಲೂ ಅದೇ ಹಿಂದಿನ ಮನೋಭಾವವನ್ನು ಮುಂದುವರಿಸಿಕೊಂಡು ಹೋಗುವುದು ಇನ್ನೂ ಹೆಚ್ಚಿನ ನೋವನ್ನು ತರುತ್ತದೆ ಮತ್ತು ಅಮೇರಿಕದ ನಿರ್ದೇಶನಗಳಿಗೆ ತಲೆಬಾಗುವುದು ಇನ್ನೂ ಹೆಚ್ಚಿನ ಅಧೀನತೆಯನ್ನು ತರುತ್ತದೆ.

"ಯಥಾಪ್ರಕಾರ ವ್ಯವಹಾರ" ಎಂದರೆ, ವಿಶ್ವ ಮಾರುಕಟ್ಟೆಯು ವೇಗವಾಗಿ ಬೆಳೆಯುತ್ತಿದೆ ಎಂಬುದನ್ನು ಒಪ್ಪಿಕೊಳ್ಳುವುದು ಮತ್ತು ಭಾರತದಂತಹ ದೇಶಗಳು ತಮ್ಮ ನಿಯಂತ್ರಣ ನೀತಿಗಳ (ಪ್ರಭುತ್ವದ ಮಧ್ಯಪ್ರವೇಶವಿರುವ) ಕಾರ್ಯತಂತ್ರವನ್ನು ತ್ಯಜಿಸಿ ತಮ್ಮ ದೇಶೀಯ ಮಾರುಕಟ್ಟೆಗಳನ್ನು ವಿಸ್ತರಿಸಲು ತಮ್ಮ ತಮ್ಮ ಅರ್ಥವ್ಯವಸ್ಥೆಗಳನ್ನು "ತೆರೆದಿಡುವ" ಮೂಲಕ ವಿಶ್ವ ಮಾರುಕಟ್ಟೆಯ ಲಾಭವನ್ನು ಪಡೆದುಕೊಂಡರೆ ತಾವು ವೇಗವಾಗಿ ಬೆಳೆಯುತ್ತೇವೆ ಎಂದು ನಂಬುವುದು. ಇದುವೇ ನವ ಉದಾರವಾದದ ಹಿಂದಿರುವ ಔಪಚಾರಿಕವಾದ. ಇದಕ್ಕೆ ಅತ್ಯಂತ ಅನುಕೂಲವಾಗಿದ್ದ ಕಾಲದಲ್ಲೇ ಇದೊಂದು ಅಸಂಬದ್ಧ ವಾದವಾಗಿತ್ತು (ಅದನ್ನು ಇಲ್ಲಿ ಚರ್ಚಿಸುವ ಅಗತ್ಯವಿಲ್ಲ) ಮತ್ತು ಅಮೆರಿಕದ "ವಸತಿ ಗುಳ್ಳೆ"ಯ ಕುಸಿತದ ನಂತರ ಉಂಟಾದ ವಿಶ್ವ ಆರ್ಥಿಕ ನಿಧಾನಗತಿಯ ಮೂಲಕವಂತೂ ಈ ವಾದ ಅನೂರ್ಜಿತವೇ ಅಗಿಬಿಟ್ಟಿದೆ. ಟ್ರಂಪ್‌ರ ಜಗಳಗಂಟಿತನದಿಂದಾಗಿ ಈಗ ಅದು ಬಹಿರಂಗವಾಗಿಯೇ ಕಿತ್ತುಕೊಂಡು ಹೋಗಿದೆ. ಈ ವಿದ್ಯಮಾನವನ್ನು ಗುರುತಿಸದಿರುವುದು ಮತ್ತು ಅದೇ "ನವ ಉದಾರವಾದ"ಕ್ಕೆ ಅಂಟಿಕೊಂಡೇ ಇರುವುದು ಭಾರತದ ಜನತೆಗೆ, ಅವರ ಜೀವನಕ್ಕೆ ಮತ್ತು ಅವರು ಕಷ್ಟಪಟ್ಟು ಗಳಿಸಿದ ಸ್ವಾತಂತ್ರ್ಯಕ್ಕೆ ವಿಪತ್ತನ್ನು ತರುತ್ತದೆ.

ನವ-ಉದಾರವಾದದ ವಕ್ತಾರರು ಮತ್ತು ರೂಪಾಯಿ ಅಪಮೌಲ್ಯನ

ಅಮೆರಿಕ ಮತ್ತು ಚೀನಾ ಒಂದು ಸುಂಕ ಯುದ್ಧದಲ್ಲಿ ತೊಡಗಿವೆ. ಹಾಗಾಗಿ, ಅವರ ನಡುವಿನ ಪರಸ್ಪರ ವ್ಯಾಪಾರ ನಿಂತುಹೋಗುತ್ತದೆ; ಭಾರತದಂತಹ ದೇಶಗಳು ಅಮೆರಿಕದ ಮಾರುಕಟ್ಟೆಯಲ್ಲಿ ಚೀನಾ ಹೊಂದಿದ್ದ ಸ್ಥಾನವನ್ನು ಆಕ್ರಮಿಸಲು ಇದೊಂದು ಸುವರ್ಣಾವಕಾಶ ಮತ್ತು ಸಕಾಲವಾಗಿರುವುದರಿಂದ ನವ ಉದಾರವಾದಿ ಕಾರ್ಯತಂತ್ರದಿಂದ ದೂರ ಸರಿಯುವ ಬದಲು, ಭಾರತವು ಈಗ ಅದರಿಂದ ಹೆಚ್ಚಿನ ಲಾಭ ಪಡೆಯಬೇಕು ಎಂದೇನೋ ಭಾವಿಸಬಹುದು. ವಾಸ್ತವವಾಗಿ, ಭಾರತದಲ್ಲಿ ನವ ಉದಾರವಾದದ ವಕ್ತಾರರೂ ಇದನ್ನೇ ಸೂಚಿಸುತ್ತಿದ್ದಾರೆ. ಆದ್ದರಿಂದ, ಭಾರತವು ಟ್ರಂಪ್ ಅವರ ಕೃಪೆಗೆ ಪಾತ್ರವಾಗುವಂತೆ ನೋಡಿಕೊಂಡು, ಅವರ ಜೊತೆ ಒಂದು ಒಪ್ಪಂದವನ್ನು ಮಾಡಿಕೊಂಡರೆ, ನಾವು ಅಮೆರಿಕಕ್ಕೆ ಮಾಡುವ ರಫ್ತುಗಳು ಅಲ್ಪಾವಧಿಯಲ್ಲಿ ಹೆಚ್ಚಬಹುದು ಎಂಬುದನ್ನು ನಾವು ವಾದಕ್ಕಾಗಿ ಒಂದು ವೇಳೆ ಒಪ್ಪಿಕೊಂಡರೂ, ಅಮೆರಿಕದ ಮಾರುಕಟ್ಟೆಯಲ್ಲಿ ಚೀನಾದ ಜಾಗದಲ್ಲಿ ಅಮೆರಿಕಾದ ಇತರ ವ್ಯಾಪಾರ ಪಾಲುದಾರರನ್ನು ತರುವುದು ಮಾತ್ರವೇ ಟ್ರಂಪ್ ಅವರ ಉದ್ದೇಶವಲ್ಲ; ಅಮೆರಿಕದ ಚಾಲ್ತಿ ಖಾತೆಯ ಕೊರತೆಯನ್ನು ಕಡಿಮೆ ಮಾಡುವುದೂ ಸಹ ಅವರ ಉದ್ದೇಶವೇ. ಹಾಗಾಗಿ, ಚೀನಾಗೆ ನಷ್ಟವನ್ನುಂಟುಮಾಡಿ ಗಳಿಸುವ ಒಂದು ಅಲ್ಪಾವಧಿಯ ರಫ್ತು ಲಾಭವನ್ನು ಮುಂದೆಯೂ ಸ್ಥಿರವಾಗಿ ಉಳಿಸಿಕೊಳ್ಳುವುದು ಸಾಧ್ಯವಾಗುವುದಿಲ್ಲ.



ಮೇಲಾಗಿ, ಈ ಅಲ್ಪಾವಧಿಯ ಲಾಭವನ್ನು ಪಡೆಯುವುದಕ್ಕೆ ಕೂಡ, ಇತರ ದೇಶಗಳು ಅದನ್ನು ಬಾಚಿಕೊಳ್ಳದಂತೆ (ವಾಸ್ತವವಾಗಿ, ಅಮೆರಿಕದ ಮಾರುಕಟ್ಟೆಯಲ್ಲಿ ಚೀನಾ ಹೊಂದಿರುವ ಪಾಲನ್ನು ಬಾಚಿಕೊಳ್ಳಲು ದೇಶ ದೇಶಗಳು ತಮ್ಮ ತಮ್ಮ ಕರೆನ್ಸಿಗಳನ್ನು ಅಪಮೌಲ್ಯನಗೊಳಿಸುವ ಮೂಲಕ ಪರಸ್ಪರ ಸ್ಪರ್ಧಿಸುತ್ತವೆ) ನೋಡಿಕೊಳ್ಳಬೇಕಾಗುತ್ತದೆ; ಆಗ ರೂಪಾಯಿಯ ವಿನಿಮಯ ದರದಲ್ಲಿ ಸ್ವಲ್ಪಮಟ್ಟಿನ ಅಪಮೌಲ್ಯನ ಉಂಟಾಗುತ್ತದೆ, ಇದರಿಂದ ಅದಾಗಲೇ ಅಪಮೌಲ್ಯಗೊಂಡಿರುವ ರೂಪಾಯಿ ಮತ್ತಷ್ಟು ಅಪಮೌಲ್ಯಗೊಳ್ಳುತ್ತದೆ. ಟ್ರಂಪ್‌ರ ಶೇ.10ರ ಮೂಲ ಸುಂಕವಂತೂ ಮುಂದುವರಿಯುತ್ತದೆ. ಆಗ ಟ್ರಂಪ್‌ರ ಸುಂಕಗಳಿಗೆ ಪ್ರತೀಕಾರವಾಗಿ ಭಾರತವು ಅಮೆರಿಕದ ವಿರುದ್ಧ ಸುಂಕಗಳನ್ನು ಮತ್ತಷ್ಟು ಹೆಚ್ಚಿಸುವ ಕ್ರಮಗಳನ್ನು ತೆಗೆದುಕೊಳ್ಳದಿದ್ದರೆ, ರೂಪಾಯಿ ವಿನಿಮಯ ದರವು ಮತ್ತಷ್ಟು ಅಪಮೌಲ್ಯನಗೊಳ್ಳುತ್ತದೆ; ಗಮನಾರ್ಹ ಸಂಗತಿಯೆಂದರೆ, ನಮ್ಮ ನವ-ಉದಾರವಾದಿ ವಕ್ತಾರರೂ ಸಹ ಇದನ್ನೇ ಪ್ರತಿಪಾದಿಸುತ್ತಿದ್ದಾರೆ!

ಇಲ್ಲಿ, ವಿನಿಮಯ ದರದ ಅಪಮೌಲ್ಯನಕ್ಕೆ ಸಂಬಂಧಿಸಿದ ಒಂದು ಅಂಶವು ಸಾಮಾನ್ಯವಾಗಿ ಗಮನಕ್ಕೆ ಬರದೇ ಹೋಗುತ್ತದೆ. ಅದೆಂದರೆ, ವಿನಿಮಯ ದರದ ಅಪಮೌಲ್ಯವು ನಿಜ ವೇತನವನ್ನು ಕುಗ್ಗಿಸುವ ಕೆಲಸ ಮಾಡುತ್ತದೆ ಎಂಬುದು. ಈ ಅಂಶವನ್ನು ಒಂದು ಉದಾಹರಣೆಯ ಮೂಲಕ ಸ್ಪಷ್ಟಪಡಿಸಬಹುದು: ಒಂದು ದೇಶವು 220 ರೂ. ಮೌಲ್ಯದ ಸರಕುಗಳನ್ನು ಉತ್ಪಾದಿಸುತ್ತಿದೆ ಎಂದು ಭಾವಿಸೋಣ. ಅದರಲ್ಲಿ 100 ರೂ. ಆಮದು ಮಾಡಿಕೊಂಡ ಕಚ್ಚಾ ವಸ್ತುಗಳಿರುತ್ತವೆ, ವೇತನ ವೆಚ್ಚ 100 ರೂ. ಇರುತ್ತದೆ ಮತ್ತು ಲಾಭದ ಪಾಲು 20 ರೂ. ಇರುತ್ತದೆ ಎಂದುಕೊಳ್ಳೋಣ. ಈಗ ನಾಮಮಾತ್ರ ವಿನಿಮಯ ದರವು ಒಂದು ವೇಳೆ ಶೇ. 10ರಷ್ಟು ಅಪಮೌಲ್ಯನಕ್ಕೆ ಒಳಗಾಗಿದೆ ಎಂದುಕೊಳ್ಳೋಣ. ಆಗ ಆಮದು ಮಾಡಿಕೊಂಡ ಕಚ್ಚಾ ವಸ್ತುಗಳ (ತೈಲ ಆಮದುವೇ ಇರಬಹುದು) ಮೌಲ್ಯವು ಶೇ. 10ರಷ್ಟು ಏರಿಕೆಯನ್ನು ಕಂಡು 110 ರೂ.ಗಳಿಗೆ ಏರುತ್ತದೆ. ನಿಜ ವೇತನದ ಪಾಲನ್ನು ಮತ್ತು ಲಾಭದ ಪಾಲನ್ನು ಒಂದು ವೇಳೆ ಬದಲಾಯಿಸದೇ ಇದ್ದರೆ, ಆಗ ಹಣ ವೇತನದ ವೆಚ್ಚವು 110 ರೂ.ಗಳಿಗೆ ಏರುತ್ತದೆ ಮತ್ತು ಲಾಭದ ಪಾಲು 22 ರೂ.ಗಳಿಗೆ ಏರುತ್ತದೆ ಮತ್ತು ಸರಕಿನ ಉತ್ಪಾದನೆಯ ಒಟ್ಟಾರೆ ಬೆಲೆಯು 242 ರೂ.ಗಳಿಗೆ ಏರುತ್ತದೆ. ಅಂದರೆ, ಮೊದಲಿಗಿಂತ ಶೇ. 10ರಷ್ಟು ಹೆಚ್ಚಾಗುತ್ತದೆ. ಆದರೆ, ರೂಪಾಯಿ ಮೌಲ್ಯವು ಶೇ. 10ರಷ್ಟು ಕುಸಿದಿರುವುದರಿಂದ, ಸರಕಿನ ಡಾಲರ್ ಬೆಲೆ ಬದಲಾಗದೆ ಉಳಿದಿರುತ್ತದೆ. ಇದರರ್ಥ ಹೇಳಲು ಶೇ. 10ರಷ್ಟು ಅಪ-ಮೌಲ್ಯನ ಎಂದಿದ್ದರೂ, ನಿಜ ಪರಿಣಾಮಕಾರಿ ವಿನಿಮಯ ದರದ ಅಪಮೌಲ್ಯನ ಇರಲಿಲ್ಲ ಎಂದಾಗುತ್ತದೆ. ನಿಜ, ವೇತನದ ಪಾಲು ಕಡಿಮೆಯಾದರೆ ಅಥವಾ ಲಾಭದ ಪಾಲು ಕಡಿಮೆಯಾದರೆ ಮಾತ್ರವೇ ಇದು ನಿಜ-ಪರಿಣಾಮಕಾರಿ ವಿನಿಮಯ ದರದ ಅಪಮೌಲ್ಯನಕ್ಕೆ ಕಾರಣವಾಗುತ್ತದೆ. ಆದರೆ, ಒಂದು ಬಂಡವಾಳಶಾಹಿ ಅರ್ಥವ್ಯವಸ್ಥೆಯಲ್ಲಿ ಬಂಡವಾಳಗಾರರು ಲಾಭದ ಪಾಲಿನಲ್ಲಿ ರಾಜಿ ಮಾಡಿಕೊಳ್ಳುವುದೇ ಇಲ್ಲ. ಆದ್ದರಿಂದ ನಿಜ-ಪರಿಣಾಮಕಾರಿ ವಿನಿಮಯದರ ಅಪಮೌಲ್ಯನವು ವೇತನವನ್ನು ಇಳಿಕೆ ಮಾಡಿಯೇ ಮಾಡುತ್ತದೆ. ಆದರೆ ಸುಂಕ ವಿಧಿಸುವುದರಿಂದ ಇಂತಹ ಪರಿಣಾಮ ಉಂಟಾಗುವುದಿಲ್ಲ. ಏಕೆಂದರೆ ಅವನ್ನು ನಿರ್ದಿಷ್ಟವಾಗಿ ವಿಧಿಸಲಾಗುತ್ತದೆ, ಅವನ್ನು ಆಮದು ಮಾಡಿಕೊಂಡ ಕಚ್ಚಾ ವಸ್ತುಗಳು ಅಥವಾ ಆಮದು ಮಾಡಿಕೊಂಡ ಕಾರ್ಮಿಕರ ದಿನನಿತ್ಯದ ಬಳಕೆಯ ವಸ್ತುಗಳ ಮೇಲೆ ವಿಧಿಸದಿದ್ದರೆ ಅವು ನಿಜ ವೇತನದ ಕುಸಿತಕ್ಕೆ ಕಾರಣವಾಗಬೇಕಿಲ್ಲ.

ಕಾರ್ಮಿಕರನ್ನು ಇನ್ನಷ್ಟು ಹಿಂಡಬೇಕೆಂಬ ಸೂಚನೆ

ಟ್ರಂಪ್ ಅವರ ಸುಂಕಗಳ ಹೊರತಾಗಿಯೂ "ವ್ಯವಹಾರವು ಯಥಾಪ್ರಕಾರ"ವಾಗಿ ಮುಂದುವರಿಯಬೇಕು ಎಂದು ಬಯಸುವ ನವ-ಉದಾರವಾದಿ ವಕ್ತಾರರು, ಭಾರತದಂತಹ ದೇಶಗಳು ಆಮದು ಸುಂಕಗಳ ಹೆಚ್ಚಳವನ್ನು ಕೈಬಿಟ್ಟು, ಅದರ ಬದಲಾಗಿ ಕರೆನ್ಸಿಯ ಅಪಮೌಲ್ಯೀಕರಣ ಮಾಡಬೇಕು ಎಂದು ಸೂಚಿಸುವ ಮೂಲಕ, ಅವರು ಮುಖ್ಯವಾಗಿ ಕಾರ್ಮಿಕರನ್ನು ಇನ್ನಷ್ಟು ಹಿಂಡಬೇಕು ಎಂದೇ ಸೂಚಿಸುತ್ತಿದ್ದಾರೆ. ಟ್ರಂಪ್ ಅವರ ಸುಂಕಗಳ ಹಿನ್ನೆಲೆಯಲ್ಲಿಯೂ ನವ ಉದಾರವಾದವು ಮುಂದುವರಿಯಬೇಕು, ಆದರೆ ಅದಕ್ಕೆ ಕಾರ್ಮಿಕರು ಬೆಲೆ ತೆರಬೇಕು ಎಂಬುದೇ ಅವರ ಆಶಯ. ಟ್ರಂಪ್ ಒಂದು ವೇಳೆ ಚೀನಾದ ರಫ್ತುಗಳ ಜಾಗದಲ್ಲಿ ಇತರ ದೇಶಗಳ ರಫ್ತುಗಳನ್ನು ಬಯಸದಿದ್ದರೆ, ಆಗ ಭಾರತದಂತಹ ದೇಶಗಳಲ್ಲಿ ನಿಜ ವೇತನ ಕುಸಿಯುತ್ತದೆ, ಆದರೆ ಅದರೊಂದಿಗೆ ಉದ್ಯೋಗ ಮತ್ತು ಇತರೆ ಯಾವುದೇ ಚಟುವಟಿಕೆಗಳಲ್ಲಿ ಹೆಚ್ಚಳ ಕಾಣಬರುವುದಿಲ್ಲ (ಇದು ಉದ್ಯೋಗದ ಇಳಿಕೆಗೂ ಕಾರಣವಾಗಬಹುದು, ಏಕೆಂದರೆ ಭಾರತದ ಕಾರ್ಮಿಕರಿಗೆ ನಷ್ಟವುಂಟುಮಾಡಿ ತಮ್ಮ ಸ್ಥಿತಿ-ಗತಿಗಳನ್ನು ಉತ್ತಮಪಡಿಸಿಕೊಳ್ಳುವ ಭಾರತದ ಆಮದು ಕಚ್ಚಾವಸ್ತುಗಳ ಮಾರಾಟಗಾರರಲ್ಲಿ ಭಾರತೀಯ ಸರಕುಗಳನ್ನು ಖರೀದಿಸುವ ಒಲವು ಭಾರತದ ಕಾರ್ಮಿಕರಿಗಿಂತ ಕಡಿಮೆಯೇ ಇರುತ್ತದೆ)

ಅಷ್ಟೇ ಅಲ್ಲದೆ, ಚೀನಾದಿಂದ ಮಾಡಿಕೊಳ್ಳುತ್ತಿದ್ದ ಆಮದುಗಳನ್ನು ಇತರ ದೇಶಗಳಿಂದ ಮಾಡಿಕೊಳ್ಳಲು ಅಮೆರಿಕ ಬಯಸದಿದ್ದರೆ, ಚೀನಾ ತೆರವು ಮಾಡಿರುವ ಯುಎಸ್ ಮಾರುಕಟ್ಟೆಯ ಒಂದು ಭಾಗವನ್ನು ಪಡೆಯಲು ಇತರ ದೇಶಗಳು ತಂತಮ್ಮ ಕರೆನ್ಸಿಗಳನ್ನು ಅಪಮೌಲ್ಯಗೊಳಿಸಿದರೆ, ಅದು ಆ ದೇಶಗಳ

ಪುಟ 15 ಕ್ಕೆ

ಇರಾನ್-ಅಮೇರಿಕಾ ಮಾತುಕತೆ: ಅಣ್ವಸ್ತ್ರ ತಡೆಯುವ ಕೊನೆಯ ಹತಾಶ ಪ್ರಯತ್ನವೋ, ಯುದ್ಧಕ್ಕೆ ಮುನ್ನುಡಿಯೋ?



ಟ್ರಂಪ್ ತಮ್ಮ ಎರಡನೇ ಅವತಾರದಲ್ಲಿ ಉಕ್ರೇನ್ ಯುದ್ಧ ನಿಲ್ಲಿಸುವ ಶಾಂತಿದೂತನಂತೆ ಮಾತಾಡಿದರೆ, ಗಾಜಾ ಮತ್ತು ಇರಾನ್‌ಗಳಲ್ಲಿ ಯುದ್ಧಕೋರತನ ಪ್ರದರ್ಶಿಸುತ್ತಿದ್ದಾರೆ. ಏಳು ವರ್ಷಗಳ ಹಿಂದೆ ತಮ್ಮ ಮೊದಲಿನ ಅವತಾರದಲ್ಲಿ ತಿರಸ್ಕರಿಸಿ ಹೊರಬಂದಿದ್ದ ಇರಾನ್–ಅಮೆರಿಕ ಅಣು ಒಪ್ಪಂದದ ಕುರಿತು ಮತ್ತೆ ಮಾತುಕತೆ ಆರಂಭಿಸಿದ್ದಾರೆ. ಮಾತುಕತೆಯ ಮೊದಲು "ಒಪ್ಪಂದಕ್ಕೆ ಬಂದರೆ ಸರಿ, ಇಲ್ಲದಿದ್ದರೆ" ಎಂಬ ಅವರ ವಿಶಿಷ್ಟ ಶೈಲಿಯ ಬೆದರಿಕೆ ಸಹ ಬಂದಿದೆ. ಇರಾನ್ ಸಹ ಈ ಬೆದರಿಕೆಗೆ ಸೂಕ್ತ ಪ್ರತಿ–ಕ್ರಮ ತೆಗೆದುಕೊಳ್ಳುವ ಬೆದರಿಕೆ ಹಾಕಿದೆ. ಆಗ ಹೊರ ಬಂದಿದ್ದು ಮತ್ತು ಈಗ ಮತ್ತೆ ಒಪ್ಪಂದಕ್ಕೆ ಮಾತುಕತೆ ಆರಂಭಿಸುವ ದರ್ದು ಟ್ರಂಪ್‌ಗೆ ಏನಿದೆ? ಇದು ಇಸ್ರೇಲಿನ ಒತ್ತಡದಿಂದ ಇರಾಕ್ ನಾಶ ಮಾಡುವ ಯುದ್ಧಕ್ಕೆ ಮುನ್ನುಡಿಯಾ ಅಥವಾ ಇರಾನ್ ಅಣ್ವಸ್ತ್ರ ತಡೆಯುವ ಕೊನೆಯ ಹತಾಶ ಪ್ರಯತ್ನವಾ?–ಒಂದು ವಿಶ್ಲೇಷಣೆ.

ಜಗದ ಸುತ್ತ

ವಸಂತರಾಜ ಎನ್.ಕೆ.

ಇರಾನ್ ಅಣ್ವಸ್ತ್ರ ತಯಾರಿಸಿದೆ ಅಥವಾ ಅದಕ್ಕೆ ಹತ್ತಿರ ಬಂದಿದೆ ಎಂದು ಟ್ರಂಪ್ ಎರಡನೇ ಬಾರಿ ಅಧಿಕಾರ ವಹಿಸಿಕೊಂಡ ಕೂಡಲೇ ಹೇಳಲು ಆರಂಭಿಸಿದರು. "ಇದು ಹಿಂದಿನ ಒಪ್ಪಂದದ 'ಉಲ್ಲಂಘನೆ'. ಇದನ್ನು ತಕ್ಷಣ ನಿಲ್ಲಿಸದಿದ್ದರೆ ವಿನಾಶಕಾರಿ ಪರಿಣಾಮ ಎದುರಿಸಬೇಕಾಗುತ್ತದೆ" ಎಂದು ಅವರ ಎಂದಿನ ಶೈಲಿಯಲ್ಲಿ ಬೆದರಿಕೆ ಹಾಕಿದರು. ಯುಎಸ್ (ಮತ್ತು ಸ್ವತಃ ಟ್ರಂಪ್ ಮೊದಲ ಅವಧಿಯಲ್ಲಿ 2018ರಲ್ಲಿ) ಈ ಒಪ್ಪಂದದಿಂದ ಏಕಪಕ್ಷೀಯವಾಗಿ ಹಿಂತೆಗೆದಿತ್ತು ಮತ್ತು ಮತ್ತೆ ಆರ್ಥಿಕ ದಿಗ್ಬಂಧನಗಳನ್ನು ಹೇರಿತ್ತು. ಹಾಗಾಗಿ ಇರಾನ್ ಈ ಒಪ್ಪಂದ ಪಾಲಿಸಲು ಬಾಧ್ಯವಾಗಿಲ್ಲ. ಯುಎಸ್ ಬೆದರಿಕೆಗೆ ಸೊಪ್ಪು ಹಾಕುವುದಿಲ್ಲ. ಆದರೆ ಈ ಕುರಿತು ಮಾತುಕತೆಗೆ ಸಿದ್ಧವಿದೆ ಎಂದು ಇರಾನ್ ತೀಕ್ಷ್ಣವಾಗಿ ಪ್ರತಿಕ್ರಿಯಿಸಿತ್ತು.

ಇರಾನ್–ಯುಎಸ್ ಅಣು ಒಪ್ಪಂದ–2015

ಟ್ರಂಪ್ ಉಲ್ಲೇಖಿಸುತ್ತಿರುವ ಒಪ್ಪಂದ 2015ರಲ್ಲಿ ಒಬಾಮ ಅಧ್ಯಕ್ಷರಾಗಿದ್ದಾಗ ಆಗಿದ್ದು. ಅದನ್ನು ಸಾಮಾನ್ಯವಾಗಿ ಇರಾನ್–ಯುಎಸ್ ಒಪ್ಪಂದವೆಂದು ಕರೆಯಲಾಗುತ್ತಿದ್ದರೂ, ಅದು ನಿಜವಾಗಿಯೂ ವಿಶ್ವಸಂಸ್ಥೆಯ ಭದ್ರತಾ ಸಮಿತಿಯ ಐದು ಶಾಶ್ವತ ಸದಸ್ಯರು ಮತ್ತು ಜರ್ಮನಿ ಹಾಗೂ ಇರಾನ್ ನಡುವೆ ಆದ ಜಂಟಿ ಒಪ್ಪಂದ. ಈ ಒಪ್ಪಂದಕ್ಕೆ ಇದ್ದ ಬೆಂಬಲವನ್ನು ಬಿಂಬಿಸುವಂತೆ 'P5+1–ಇರಾನ್' ಒಪ್ಪಂದವೆಂದೂ ಕರೆಯಲಾಗುತ್ತದೆ. ಆದರೆ ಅದರ ಅಧಿಕೃತ ಹೆಸರು Joint Comprehensive Plan of Action (JCPOA) ಅಂದರೆ (ಇರಾನ್ ಅಣ್ವಸ್ತ್ರ ತಡೆಗೆ) ಸಮಗ್ರ ಜಂಟಿ ಕಾರ್ಯ ಯೋಜನೆ. ಇದರ ಉದ್ದೇಶ ಇರಾನ್ ಅಣುಶಕ್ತಿ ಕಾರ್ಯಕ್ರಮವನ್ನು ನಾಗರಿಕ ಬಳಕೆಗಳಿಗೆ (ವಿದ್ಯುತ್ ಶಕ್ತಿ, ವೈದ್ಯಕೀಯ ಇತ್ಯಾದಿ)ಗೆ ಸೀಮಿತಗೊಳಿಸಿ, ಅಣ್ವಸ್ತ್ರ ತಯಾರಿಕೆಗೆ ನಿರ್ಬಂಧ ಹಾಕುವುದು. ಇದನ್ನು ಖಾತ್ರಿ ಪಡಿಸಲು ಇರಾನ್ ಅಣು ಕಾರ್ಯಕ್ರಮದ ಸ್ಥಾವರಗಳನ್ನು ಪರಿಕ್ಷೀಸಲು ಅವಕಾಶ ಕೊಡಬೇಕಾಗಿತ್ತು. ಆದರೆ ಯುಎಸ್ ಒಪ್ಪಂದದಿಂದ ಹೊರನಡೆದ ನಂತರ, ಇಂತಹ ಪರಿಕ್ಷಣೆ ಸೀಮಿತವಾಗಿದ್ದು, ಇರಾನ್ ಈ ಅವಕಾಶ ಬಳಸಿ ಅಣ್ವಸ್ತ್ರ ತಯಾರಿಸಿರಬಹುದು ಎಂಬುದು ಯುಎಸ್‌ನ ಆತಂಕ.

ಆ ನಂತರ ಯುಎಸ್ ಈ ಕುರಿತು ಇರಾನ್ ಜೊತೆ ಮಾತುಕತೆಯನ್ನು ಆರಂಭಿಸಿದೆ. ಒಮಾನ್ ಮಧ್ಯಸ್ಥಿಕೆಯಲ್ಲಿ ಎರಡು ಸುತ್ತಿನ ಪರೋಕ್ಷ ಮಾತುಕತೆ ನಡೆಯಿತು. ಏಪ್ರಿಲ್ 26ರಿಂದ ಒಮಾನ್‌ನಲ್ಲಿ ನೇರ ಮಾತುಕತೆ ನಡೆಸಲು ಅಜೆಂಡಾ ರೂಪಿತವಾಗಿದೆ. ಈವರೆಗಿನ ಮಾತುಗಳು ತೃಪ್ತಿಕರವಾಗಿವೆ ಎಂದು ಎರಡೂ ಪಕ್ಷಗಳು ಹೇಳಿವೆ ಎಂದು ವರದಿಯಾಗಿದೆ. ಈ ಮಾತುಕತೆಗಳಿಂದ ಯುಎಸ್ ಮತ್ತು ಇರಾನ್ ಏನು ನಿರೀಕ್ಷಿಸುತ್ತಿವೆ ಎಂಬುದರ ಮೇಲೆ ಈ ಮಾತುಕತೆಯ ಅಂತಿಮ ಫಲಿತಾಂಶ ಅವಲಂಬಿಸಿರುತ್ತದೆ ಎಂಬುದು ಸ್ಪಷ್ಟ.

ಅಣು ಒಪ್ಪಂದದಿದಂದ ಟ್ರಂಪ್ ನಿರೀಕ್ಷೆಯೇನು?

ಯುಎಸ್ ಇರಾನನ್ನು ಪಶ್ಚಿಮ ಏಶ್ಯಾದಲ್ಲಿ ತನ್ನ ಅಧಿಪತ್ಯವನ್ನು ಕಾಪಾಡಿಕೊಳ್ಳಲು ಇರುವ ಅಪಾಯವಾಗಿ ಕಾಣುತ್ತದೆ. ಒಂದು ಕಡೆ ಅದರ ಪ್ರಾದೇಶಿಕ ಪಾಳೆಯಗಾರನಾದ ಇಸ್ರೇಲ್ ಮತ್ತು ಇನ್ನೊಂದು ಕಡೆ ಅಗಾಧ ತೈಲ ಸಂಪತ್ತಿನ ಒಡೆಯರೂ ವಿಧೇಯ ಅಡಿಯಾಳುಗಳೂ ಆಗಿರುವ ಶೇಕ್‌ಗಳ ಮೇಲೆ ಆಧಾರಿತ ಯುಎಸ್ ಅಧಿಪತ್ಯಕ್ಕೆ ಇರಾನ್ ಸವಾಲು ಹಾಕುತ್ತಾ ಬಂದಿದೆ. ಅಣ್ವಸ್ತ್ರ ಸಜ್ಜಿತ ಅಥವಾ ಆ ಸಾಮರ್ಥ್ಯ ಹೊಂದಿರುವ ಇರಾನ್ ತಮ್ಮ ಅಧಿಪತ್ಯಕ್ಕೆ ಅಪಾಯಕಾರಿ ಎಂದು ಯುಎಸ್ ಮತ್ತು ಇಸ್ರೇಲ್ ಯಾವಾಗಲೂ ಭಾವಿಸಿತ್ತು. ಇರಾನ್ ಬೆಂಬಲಿತವೆನ್ನಲಾದ ಲೆಬನಾನ್‌ನ ಹೆಜಬೊಲ್ಲಾ, ಯೆಮೆನ್‌ನ ಹೌತಿ ಗೆರಿಲ್ಲಾ ಪಡೆಗಳು ಅಕ್ಟೋಬರ್ 2023ರ ನಂತರ ಇಸ್ರೇಲ್ ಆರಂಭಿಸಿದ ಯುದ್ಧ ಮತ್ತು ಗಾಜಾ ನರಮೇಧಕ್ಕೆ ಇಡೀ ಪ್ರದೇಶದಲ್ಲಿ ತೀವ್ರ ಪ್ರತಿರೋಧ ಒಡ್ಡಿವೆ. ಪ್ಯಾಲೆಸ್ಟೈನಿ ವಾಸದ ಎಲ್ಲ ಪ್ರದೇಶಗಳನ್ನು ಆಕ್ರಮಿಸಿಕೊಂಡು ಬೃಹತ್ ಇಸ್ರೇಲ್‌ನ ಕನಸು ಕಾಣುತ್ತಿರುವ ನೆತನ್ಯಾಹು ಸರಕಾರ ಈ ಸನ್ನಿವೇಶ



ಬಳಸಿ ಹೆಜಬೊಲ್ಲಾ, ಹೌತಿ ಮತ್ತು ಹಾಮಾಸ್ ಗೆರಿಲ್ಲಾ ನಾಯಕರ, ಪಡೆಗಳ ಮತ್ತು ಮಿಲಿಟರಿ ಉಪಕರಣಗಳ ಬಹುಭಾಗವನ್ನು ನಾಶ ಮಾಡಿದೆ. ಯುಎಸ್, ಇಸ್ರೇಲ್ ಮತ್ತು ತುರ್ಕಿ ಜಂಟಿ ಪಿತೂರಿ ನಡೆಸಿ ಐಎಸ್‌ಐಎಸ್ ಬಳಸಿ ಸಿರಿಯಾದ ಸರಕಾರವನ್ನು ಉರುಳಿಸಿತ್ತು.

ಇದೇ ಸನ್ನಿವೇಶದ ಲಾಭ ಪಡೆದು ಇರಾನ್‌ನ ಅಣು ಸ್ಥಾವರಗಳ ಮೇಲೆ ದಾಳಿ ಮಾಡಿ, ಅದರ ಅಣ್ವಸ್ತ್ರ ಅಭಿವೃದ್ಧಿ ಸಾಮರ್ಥ್ಯ ಮತ್ತು ಸಾಧ್ಯತೆಯನ್ನು ನಾಶಮಾಡಬೇಕು ಎಂದು ಯುಎಸ್ ಮೇಲೆ ಇಸ್ರೇಲ್ ಗರಿಷ್ಠ ಒತ್ತಡ ಹಾಕಿತ್ತು. ಆದರೆ ಈಗಾಗಲೇ ಗಾಜಾ ನರಮೇಧದ ವಿರುದ್ಧ ತಮ್ಮ ದೇಶಗಳ ಜನಾಕ್ರೋಶಕ್ಕೆ ಬೆದರಿದ ಶೇಕ್‌ಗಳು ಇದರ ವಿರುದ್ಧ ಪ್ರತಿರೋಧ ಒಡ್ಡಿ ತನ್ನ ಪ್ರಾದೇಶಿಕ ಹಿತಾಸಕ್ತಿಗೆ ಧಕ್ಕೆ ಬರಬಹುದೆಂದು ಮತ್ತು ಮೂರನೇ ಯುದ್ಧದಲ್ಲಿ ತೊಡಗಲು ಸಿದ್ಧವಿಲ್ಲದ ಬಿಡೆನ್ ಇದಕ್ಕೆ ಒಪ್ಪಿರಲಿಲ್ಲ. ಟ್ರಂಪ್ ಅಧಿಕಾರಕ್ಕೆ ಬಂದ ಮೇಲೆ ಯುದ್ಧಕೋರ ನೆತನ್ಯಾಹು ಇತ್ತೀಚೆಗೆ ಟ್ರಂಪ್ ಅವರನ್ನು ಭೇಟಿ ಮಾಡಿ, ಇರಾನ್ ತನ್ನ ಅಣ್ವಸ್ತ್ರ ತ್ಯಾಗ ಮಾಡಲು ಒತ್ತಡ ಹಾಕಬೇಕು, ಅದು ಒಪ್ಪದಿದ್ದರೆ ಅದರ ಅಣು ಸ್ಥಾವರಗಳ ಮೇಲೆ ಜಂಟಿ ದಾಳಿ ಮಾಡಿ ನಾಶ ಮಾಡಬೇಕು ಎಂದು ಅವರ ಮೇಲೆ ಒತ್ತಡ ಹಾಕಿದ್ದಾರೆ.

ನೇತನ್ಯಾಹು ಲಿಬಿಯಾ ಮಾದರಿ ಅಂದರೆ ಏನು?

ವಾಶಿಂಗ್ಟನ್‌ನ ಶ್ವೇತಭವನದಲ್ಲಿ ಟ್ರಂಪ್ ಮತ್ತು ನೆತನ್ಯಾಹು ನಡುವೆ ನಡೆದ ಸಭೆಯ ನಂತರ ನೆತನ್ಯಾಹು "ಇರಾನ್ ಅಣ್ವಸ್ತ್ರಗಳನ್ನು ಪಡೆಯಬಾರದು ಎಂಬ ಗುರಿಯ ಬಗ್ಗೆ ನಾವು ಇಬ್ಬರೂ ಸಹಮತದಲ್ಲಿದ್ದೇವೆ, ಇದು ಲಿಬಿಯಾದ ಮಾದರಿಯಂತೆ ಪೂರ್ಣ ರಾಜತಾಂತ್ರಿಕ ಮಾರ್ಗದಲ್ಲಿ ಸಾಧ್ಯವಾದರೆ ಒಳ್ಳೆಯದು" ಎಂದು ಹೇಳಿದ್ದಾರೆ. ಲಿಬಿಯಾ ಮಾದರಿ ಎಂದರೆ ಗದ್ದಾಫಿ ಅಣ್ವಸ್ತ್ರ ತ್ಯಾಗ ಮಾಡಿ ಶರಣಾಗತರಾದರು ಮತ್ತು ತಕ್ಷಣವೇ ಅಮೇರಿಕಾ, ಬ್ರಿಟನ್ ಹಾಗೂ ಫ್ರಾನ್ಸ್ ಬೆಂಬಲಿತ ಬಂಡುಕೋರರಿಂದ ಕೊಲ್ಲಲ್ಪಟ್ಟರು. ಆ ಗದ್ದಾಫಿಯೇ ಆಫ್ರಿಕಾ ಒಕ್ಕೂಟದ ಮತ್ತು ಆಫ್ರಿಕಾದ ನವ–ವಸಾಹತುಶಾಹಿಯ ವಿರುದ್ಧ ಪ್ರತಿರೋಧದ ನಾಯಕರಾಗಿದ್ದರು. ಗದ್ದಾಫಿ ಕೊಲೆಯ ನಂತರ 10 ವರ್ಷಗಳಾದರೂ ಲಿಬಿಯಾ ಇನ್ನೂ ಯುದ್ಧಪೀಡಿತ ರಾಷ್ಟ್ರವಾಗಿಯೇ ಉಳಿದಿದೆ. ಇರಾನ್‌ನಿಗೂ ಅದೇ ಗತಿ ಮಾಡಬೇಕೆಂಬ ಉದ್ದೇಶ ನೆತನ್ಯಾಹುಗೆ ಇದೆ.

ಆದರೆ ಇರಾನ್ ಲಿಬಿಯಾದಷ್ಟು ಸಣ್ಣ ರಾಷ್ಟ್ರವಲ್ಲ; ಯುಎಸ್ ಸೋಲಿಸಿ ನಾಶ ಮಾಡಿದ ಇರಾಕ್‌ನ ನಾಲ್ಕು ಪಟ್ಟು ವಿಸ್ತೀರ್ಣ ಮತ್ತು ಮೂರು ಪಟ್ಟು ಜನಸಂಖ್ಯೆ ಹೊಂದಿದೆ. ವಿಶೇಷವಾಗಿ ದೂರಗಾಮಿ ಕ್ಷಿಪಣಿ ಮತ್ತು ಡ್ರೋನ್ ಸೇರಿದಂತೆ ಆಧುನಿಕ ಮಿಲಿಟರಿ ತಂತ್ರಜ್ಞಾನ ಪರಿಣತಿ ಮತ್ತು ಉತ್ಪಾದನೆ ಸಾಮರ್ಥ್ಯ ಪಡೆದಿದ್ದು, ಈ ಪ್ರದೇಶದಲ್ಲಿರುವ ಯುಎಸ್ ಮಿಲಿಟರಿ ನೆಲೆ ಮತ್ತು ಸೆಂಟ್ ಕಾಂ, 5ನೇ ನೌಕಾಪಡೆ ಮುಂತಾದ ಮಿಲಿಟರಿ ಮುಖ್ಯ ಕಚೇರಿ ಮೇಲೆ ನೇರ ದಾಳಿ ಮಾಡುವ ಸಾಮರ್ಥ್ಯ ಹೊಂದಿದೆ. ಇಸ್ರೇಲಿನ ರಕ್ಷಾಕವಚಗಳನ್ನು ಬೇಧಿಸಿ ಅದರ ನಗರಗಳ ಮತ್ತು ಮಿಲಿಟರಿ ನೆಲೆಗಳ ಮೇಲೆ ಕ್ಷಿಪಣಿ ದಾಳಿ ಮಾಡುವ ಸಾಮರ್ಥ್ಯವನ್ನು ಈಗಾಗಲೇ ಪ್ರದೇಶಿಸಿದೆ.

ಅದು ಐತಿಹಾಸಿಕ ಪ್ರಬಲ ಸಂಸ್ಕೃತಿಯ ದೇಶವಾಗಿದೆ ಮತ್ತು ಇತ್ತೀಚಿನ ಇತಿಹಾಸದಿಂದ ಪಾಠ ಕಲಿತಿದೆ. ಹಿಂದೆ ಶಿಯಾ–ಸುನ್ನಿ ವಿವಾದದಿಂದ ಸೌದಿ ಅರೇಬಿಯ ಇತ್ಯಾದಿ ಇತರ ಪಶ್ಚಿಮ ಏಶ್ಯಾದ ದೇಶಗಳೊಂದಿಗೆ ಸಂಘರ್ಷ ಹೊಂದಿದ್ದು, ಈಗ ಚೀನಾದ ಮಧ್ಯಸ್ಥಿಕೆಯಿಂದ ಸಂಬಂಧ ಉತ್ತಮ ಪಡಿಸಿಕೊಂಡಿದೆ. ಚೀನಾ ಮತ್ತು ರಶ್ಯಾ ಜತೆ ಘನಿಷ್ಠ ಆರ್ಥಿಕ, ಮಿಲಿಟರಿ ಸಂಬಂಧ ಹೊಂದಿದೆ. ಪ್ರಾದೇಶಿಕ ಮತ್ತು ಜಾಗತಿಕ ಒಂಟಿತನದಿಂದ ಹೊರಗೆ ಬಂದಿದೆ.

ಇರಾನ್ 2015ಕ್ಕಿಂತ ಹೆಚ್ಚು ಅನುಕೂಲಕರ ಒಪ್ಪಂದ ಬಯಸುತ್ತದೆ

ಬಹುಶಃ ಯುದ್ಧದ ಮೂಲಕ ಸಾಧ್ಯವಾಗದ್ದನ್ನು ಮಾತುಕತೆಯ ಮೂಲಕ ಸಾಧಿಸಲೋ ಅಥವಾ ಇರಾನ್ ವಿರುದ್ಧ ಮಿಲಿಟರಿ ದಾಳಿಯ ಸಮಯ ಮೀರಿದೆ ಅಂತಲೋ ಯುಎಸ್ ಈ ಮಾತುಕತೆಗಳನ್ನು ಆರಂಭಿಸಿದೆ. JCPOA ಅಡಿಯಲ್ಲಿ ಇರಾನ್ ತನ್ನ ಯುರೇನಿಯಂ ಸಂಸ್ಕರಣ ಮಾಡುವ ಸೆಂಟ್ರಿಫ್ಯೂಜ್‌ಗಳನ್ನು 19,000ರಿಂದ 5,000ಕ್ಕೆ ಇಳಿಸಿತ್ತು ಮತ್ತು ತನ್ನ ಯುರೇನಿಯಂ ಸಂಗ್ರಹವನ್ನು 10,000 ಕಿಲೋಗ್ರಾಂಗಳಿಂದ 300 ಕಿಲೋಗ್ರಾಂಗಳಿಗೆ ಇಳಿಸಿತು. ಆದರೆ ಟ್ರಂಪ್ ಒಪ್ಪಂದದಿಂದ ಹೊರಬಂದ ನಂತರ ಇರಾನ್ ತನ್ನ ಶಕ್ತಿಶಾಲಿ ಸೆಂಟ್ರಿಫ್ಯೂಜ್‌ಗಳನ್ನು ಪುನಃ ಚಲಾಯಿಸಲು ಪ್ರಾರಂಭಿಸಿತು ಮತ್ತು ಇಂದಿಗೆ ಸುಮಾರು 13,000 ಸೆಂಟ್ರಿಫ್ಯೂಜ್‌ಗಳನ್ನು ಸ್ಥಾಪಿಸಿದೆ. ಯುರೇನಿಯಂನ್ನು ಶೇ. 5ಕ್ಕಿಂತ ಹೆಚ್ಚು ಶುದ್ಧಿಕರಿಸಬಾರದು ಎಂಬ ನಿರ್ಬಂಧ ಮೀರಿ ಇರಾನ್ ಈಗ ಶೇ.60 ಶುದ್ಧತೆಗೆ ಏರಿಸಿದೆ. ಪಾಶ್ಚಾತ್ಯ ಅಂದಾಜುಗಳ ಪ್ರಕಾರ, ಶೇ.60 ರಿಂದ ಶೇ.90 ಶುದ್ಧತೆಯ ಮಟ್ಟ ತಲುಪಿ ಅಣ್ವಸ್ತ್ರ ಸಾಮರ್ಥ್ಯ ಹೊಂದಲು, ಇರಾನ್‌ಗೆ ಕೇವಲ ವಾರಗಳೇ ಬೇಕಾಗಿವೆ. ಇರಾನ್ ಒಂದು ಅಣ್ವಸ್ತ್ರ ರಾಷ್ಟ್ರವಾಗುವ ಗುರಿಗೆ ತೀರಾ ಹತ್ತಿರದಲ್ಲಿದೆ. ಬಿಡೆನ್ ಆಡಳಿತ ಟ್ರಂಪ್ ವಿಧಿಸಿದ ನಿರ್ಬಂಧಗಳನ್ನು ಮುಂದುವರೆಸಿದರೂ, ಇರಾನ್ ಮೇಲೆ ಯಾವುದೇ ಪರಿಣಾಮ ಬೀರಿಲ್ಲ. ಇರಾನ್ ಇಂದಿಗೂ ಇಸ್ರೇಲ್‌ಗೆ ವಿರುದ್ಧ ಬಲವಾಗಿ ನಿಂತಿದೆ.

ನೆತನ್ಯಾಹು ಹೇಳಿದ ಲಿಬಿಯಾ ಮಾದರಿ ಅಂದರೆ ಕೇವಲ ಅಣು ಶಸ್ತ್ರಾಸ್ತ್ರ ತ್ಯಾಗ ಮಾತ್ರವಲ್ಲ, ಇರಾನ್‌ಅನ್ನು ಸಂಪೂರ್ಣ ನಾಶಮಾಡುವ ಉದ್ದೇಶ. ಇದು ಇಂದಿನ ಕಾಲದ ಸಾಮ್ರಾಜ್ಯಶಾಹಿಯ ರೂಪ: ದೇಶಗಳನ್ನು ನಾಶಮಾಡುವ ಶಕ್ತಿ ಇದೆ. ಆದರೆ ಅವುಗಳನ್ನು ನಿಯಂತ್ರಿಸುವ ಸಾಮರ್ಥ್ಯ ಇಲ್ಲ.

ಇರಾನ್ ಯುರೇನಿಯಂ ಶುದ್ಧೀಕರಣವನ್ನು 2015ರ JCPOA ಒಪ್ಪಂದದಂತೆ ➚

ಪಹಲ್ಗಾಮ್: ರಾಷ್ಟ್ರವನ್ನೇ ಬೆಚ್ಚಿಬೀಳಿಸಿದ.......

ಪುಟ 8 ರಿಂದ

ನಿಯೋಜಿಸಿದೆ. ಇದಕ್ಕೂ ಮೊದಲು, ದಾಳಿ ನಡೆದ ಕೆಲವೇ ಗಂಟೆಗಳಲ್ಲಿ, ಗೃಹ ಸಚಿವ ಅಮಿತ್ ಶಾ ಜಮ್ಮು ಮತ್ತು ಕಾಶ್ಮೀರಕ್ಕೆ ಧಾವಿಸಿ ಅಲ್ಲಿನ ಸರ್ಕಾರಿ ಅಧಿಕಾರಿಗಳೊಂದಿಗೆ ಉನ್ನತ ಮಟ್ಟದ ಸಮಾಲೋಚನೆ ನಡೆಸಿದರು. ಅನಂತನಾಗ್ ಸರ್ಕಾರಿ ವೈದ್ಯಕೀಯ ಕಾಲೇಜು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವವರನ್ನು ಭೇಟಿಯಾಗಿ ಸಾಂತ್ವನ ಹೇಳಿದರು. ಭಯೋತ್ಪಾದಕರು ದಾಳಿ ನಡೆಸಿದ ಬೈಸರನ್ ಹುಲ್ಲುಗಾವಲು ಪ್ರದೇಶಕ್ಕೆ ಅಮಿತ್ ಶಾ ಭೇಟಿ ನೀಡಿ, ಹೆಲಿಕಾಪ್ಟರ್ ಬಳಸಿ ದಾಳಿ ಪ್ರದೇಶಗಳನ್ನು ವೈಮಾನಿಕವಾಗಿ ಪರಿಶೀಲಿಸಿದರು. ನಂತರ, ಅವರು ಶ್ರೀನಗರ ಪೊಲೀಸ್ ನಿಯಂತ್ರಣ ಕೊಠಡಿಯ ಹೊರಗೆ 26 ಪ್ರವಾಸಿಗರ ಮೃತದೇಹಗಳಿಗೆ ಅಂತಿಮ ನಮನ ಸಲ್ಲಿಸಿದರು.

ಸೌದಿ ಅರೇಬಿಯಾಕ್ಕೆ ಎರಡು ದಿನಗಳ ಅಧಿಕೃತ ಭೇಟಿ ನೀಡಿದ್ದ ಪ್ರಧಾನಿ ನರೇಂದ್ರ ಮೋದಿ ಅವರು, ಜಮ್ಮು ಮತ್ತು ಕಾಶ್ಮೀರದಲ್ಲಿ ನಡೆದ ಭಯೋತ್ಪಾದಕ ದಾಳಿಯ ನಂತರ ತಮ್ಮ ಪ್ರವಾಸವನ್ನು ಅರ್ಧಕ್ಕೆ ಮುಗಿಸಿ ಬುಧವಾರ ಮುಂಜಾನೆ ಭಾರತಕ್ಕೆ ಮರಳಿದರು. ದೆಹಲಿ ವಿಮಾನ ನಿಲ್ದಾಣದಲ್ಲಿ ಇಳಿದ ನಂತರ, ಅವರು ವಿಮಾನ ನಿಲ್ದಾಣದಲ್ಲಿಯೇ ರಾಷ್ಟ್ರೀಯ ಭದ್ರತಾ ಸಲಹೆಗಾರ ಅಜಿತ್ ದೋವಲ್ ಮತ್ತು ವಿದೇಶಾಂಗ ಸಚಿವ ಎಸ್.ಜೈಶಂಕರ್ ಅವರೊಂದಿಗೆ ತುರ್ತು ಸಭೆ ನಡೆಸಿದರು.

ಯುವಜನರನ್ನು ಅಭಿವೃದ್ಧಿ ಪಥದತ್ತ ತಿರುಗಿಸಬೇಕು

ಕಾಶ್ಮೀರದಲ್ಲಿ ಸೈನಿಕರು ಮತ್ತು ನಾಗರಿಕರನ್ನು ಕೊಲ್ಲುವ ಭಯೋತ್ಪಾದಕ ದಾಳಿಗಳು ದಶಕಗಳಿಂದ ನಡೆಯುತ್ತಿವೆ. ಪಾಕಿಸ್ತಾನ ಪ್ರಾಯೋಜಿತ ಭಯೋತ್ಪಾದನೆಯು ಗಡಿಯುದ್ದಕ್ಕೂ ತನ್ನ ಅಸ್ತಿತ್ವವನ್ನು ತೋರಿಸುತ್ತಲೇ ಇದೆ, ಸಾಂದರ್ಭಿಕವಾಗಿ ವಿನಾಶಕಾರಿ ಹಿಂಸಾಚಾರದ ಕೃತ್ಯಗಳು ನಡೆಯುತ್ತಿವೆ. ಸ್ಥಳೀಯ ಯುವಕರಲ್ಲಿ ಅಸಮಾಧಾನ, ಪರಕೀಯತೆ, ಅವರ ಮೇಲೆ ಅನುಮಾನಾಸ್ಪದ ಕಣ್ಗಾವಲು ಮತ್ತು ನಿರುದ್ಯೋಗ ಇಂತಹ ಹಲವಾರು ಕಾರಣಗಳನ್ನು ಹಲವು ಅಧ್ಯಯನಗಳು ಬಹಿರಂಗಪಡಿಸಿವೆ. ದೇಶದ ಗಡಿ ಭಾಗ ಹಾಗೂ ನಾಗರಿಕರ ಅಭಿವೃದ್ಧಿಗೆ ಆಡಳಿತಗಾರರು ವಿಶೇಷ ಗಮನ ಹರಿಸಿ ಅವರನ್ನು ಅಭಿವೃದ್ಧಿ ಪಥದತ್ತ ತಿರುಗಿಸುವ ಮೂಲಕ ಭಯೋತ್ಪಾದಕ ಸಂಘಟನೆಗಳಿಗೆ ಉತ್ತೇಜನ ನೀಡದ ವಾತಾವರಣ ನಿರ್ಮಾಣ ಮಾಡಬೇಕು. ಏಳು ದಶಕಗಳಿಂದ ಕೇಂದ್ರದಲ್ಲಿ ಅಧಿಕಾರದಲ್ಲಿರುವ ಪಕ್ಷಗಳು ಆ ಕೆಲಸವನ್ನು ಸಮಗ್ರತೆಯಿಂದ ಮಾಡಲು ಸಾಧ್ಯವಾಗಿಲ್ಲ. 370ನೇ ವಿಧಿಯನ್ನು ರದ್ದುಪಡಿಸುವುದು ಮತ್ತು ನಂತರದ ಕಠಿಣ ನಿರ್ಬಂಧಗಳು ಕಾಶ್ಮೀರದ ಜನರ ಅನುಮೋದನೆಯನ್ನು ಗಳಿಸಿಲ್ಲ ಎಂಬುದನ್ನು ಅಲ್ಲಿನ ವಿಧಾನಸಭಾ ಚುನಾವಣೆಗಳ ಫಲಿತಾಂಶಗಳು ತೋರಿಸಿವೆ.

ಮುಂದಿನ ಎರಡು ತಿಂಗಳಲ್ಲಿ ನಡೆಯಲಿರುವ ಅಮರನಾಥ ಯಾತ್ರೆಯನ್ನು ಗಮನದಲ್ಲಿಟ್ಟುಕೊಂಡು ಮೋದಿ ಸರ್ಕಾರ ಸಾಕಷ್ಟು ಭದ್ರತಾ ವ್ಯವಸ್ಥೆಗಳನ್ನು ಮಾಡಬೇಕು. ಪ್ರವಾಸಿ ತಾಣಗಳಲ್ಲಿ ಸರಿಯಾದ ಭದ್ರತೆಯ ಕೊರತೆಯೂ ಸೇರಿದಂತೆ ಭಯೋತ್ಪಾದಕ ದಾಳಿಯ ಬಗ್ಗೆ ಸಮಗ್ರ ತನಿಖೆ ನಡೆಸಿ, ಭಯೋತ್ಪಾದಕರನ್ನು ಕಠಿಣವಾದ ಶಿಕ್ಷೆಗೆ ಒಳಪಡಿಸಬೇಕು.

–ಸಿಚಿ

ಟ್ರಂಪ್ ಸುಂಕ ದಾಳಿಯ ಎದುರು ಭಾರತ......

ಪುಟ 13 ರಿಂದ

ಕಾರ್ಮಿಕರಿಗೆ ನಷ್ಟವುಂಟುಮಾಡುತ್ತದೆ, ಇಂತಹ ಅಪಮೌಲ್ಯೀಕರಣವು ಮುಂದುವರಿಯುತ್ತಲೇ ಹೋಗುತ್ತದೆ. ಈ ಅಪಮೌಲ್ಯೀಕರಣವನ್ನು ನಿರೀಕ್ಷಿಸುವ ಕರೆನ್ಸಿ ಜೂಜುಕೋರರು ದೇಶದಿಂದ ಹಣವನ್ನು ಹೊರತೆಗೆಯಲು ಆರಂಭಿಸಿದರೆ, ಅದು ಕರೆನ್ಸಿಯ ಮತ್ತಷ್ಟು ಕುಸಿತಕ್ಕೆ ಕೊಡುಗೆ ನೀಡುತ್ತದೆ ಮತ್ತು ಕಾರ್ಮಿಕರ ಜೀವನವನ್ನು ಇನ್ನಷ್ಟು ಕಷ್ಟಕರವಾಗಿಸುತ್ತದೆ. ಟ್ರಂಪ್ ಅವರ ಸುಂಕಗಳಿಗೆ ಪ್ರತಿಕ್ರಿಯೆಯಾಗಿ ಕರೆನ್ಸಿ ಅಪಮೌಲ್ಯವನ್ನು ಪ್ರತಿಪಾದಿಸುವ ನವ ಉದಾರವಾದಿ ವಕ್ತಾರರಿಗೆ ಈ ಅಪಮೌಲ್ಯನದ ನಂತರ ಕಾರ್ಮಿಕರ ಭವಿಷ್ಯ ಏನಾಗುತ್ತದೆ ಎಂಬುದರ ಬಗ್ಗೆ ತಿಳಿದಿರುವುದಿಲ್ಲ ಅಥವಾ ಅದು ಅವರಿಗೆ ಬೇಕಾಗಿಯೂ ಇಲ್ಲ.

ಜನಕಲ್ಯಾಣ ಕ್ರಮಗಳತ್ತ ಮರಳಲು ಒಳ್ಳೆಯ ಅವಕಾಶ

ನಿಜ ಹೇಳಬೇಕೆಂದರೆ, ಟ್ರಂಪ್‌ರ ಸುಂಕಗಳು ಇಡೀ ನವ ಉದಾರವಾದಿ ಆಳ್ವಿಕೆಯಿಂದ ಹೊರಬರಲು ಒಂದೊಳ್ಳೆ ಅವಕಾಶವನ್ನು ಒದಗಿಸುತ್ತವೆ; ಯುಎಸ್ ವಿರುದ್ಧ ಪ್ರತೀಕಾರದ ಸುಂಕಗಳನ್ನು ವಿಧಿಸಲು, ಆಮದುಗಳಲ್ಲಿ ವೆಚ್ಚ ಹೆಚ್ಚಳದ ಹಣದುಬ್ಬರವನ್ನು ತಡೆಗಟ್ಟುವ ಸಲುವಾಗಿ ವಿನಿಮಯ ದರವನ್ನು ಕಾಯ್ದುಕೊಳ್ಳಲು ಮತ್ತು ಪಾವತಿ ಶೇಷದ ತೊಂದರೆಗಳ ಸಂದರ್ಭದಲ್ಲಿ, ವ್ಯಾಪಾರದ ಮೇಲೆ ಮತ್ತು ಬಂಡವಾಳದ ಹರಿವಿನ ಮೇಲೆ ನಿಯಂತ್ರಣಗಳನ್ನು ಹೇರಲು ಅವಕಾಶವನ್ನು ಒದಗಿಸುತ್ತವೆ. ಇವೆಲ್ಲಕ್ಕೆ ಪೂರಕವಾಗಿ, ಆಂತರಿಕ ಆರ್ಥಿಕ ಚಟುವಟಿಕೆಗಳು ಮತ್ತು ಉದ್ಯೋಗ ಮಟ್ಟದಲ್ಲಿ ಹೆಚ್ಚಳವನ್ನು ತರಲು, ಸರ್ಕಾರದ ಖರ್ಚುಗಳನ್ನು ಮುಖ್ಯವಾಗಿ "ಜನಕಲ್ಯಾಣ" ಕ್ರಮಗಳಿಗಾಗಿ ಹೆಚ್ಚಿಸಬೇಕು. ಈ ಉದ್ದೇಶಕ್ಕಾಗಿ ಬೇಕಾಗುವ ಹಣವನ್ನು ಸಂಪತ್ತು ತೆರಿಗೆಯ ಮೂಲಕ ಒದಗಿಸಿಕೊಳ್ಳಬೇಕು (ವಿಪರ್ಯಾಸವೆಂದರೆ, ಇದು ಭಾರತದಲ್ಲಿ ಕಣ್ಮರೆಯಾಗಿದೆ). ಇದರರ್ಥ, ಆಂತರಿಕ ಮಾರುಕಟ್ಟೆ ಆಧಾರಿತ ಬೆಳವಣಿಗೆಯ ನಿಯಂತ್ರಣ ನೀತಿಗಳ ವ್ಯವಸ್ಥೆಗೆ ಮರಳಬೇಕಾಗುತ್ತದೆ.

ನಿಯಂತ್ರಣ ನೀತಿಗಳ ವ್ಯವಸ್ಥೆಗೆ ಮರಳುವ ಯಾವುದೇ ಮಾತು ನವ ಉದಾರವಾದಿ ವಕ್ತಾರರನ್ನು ಭಯಭೀತರನ್ನಾಗಿಸುತ್ತದೆ. ಮತ್ತು ಅವರ ನಿಲುವುಗಳು, ಐಎಂಎಫ್, ವಿಶ್ವಬ್ಯಾಂಕ್ ಮತ್ತು ಇತರ ಅಂತಹ ಸಂಸ್ಥೆಗಳ ಬೆಂಬಲದಿಂದ ಮತ್ತು ಏಕಸ್ವಾಮ್ಯ–ನಿಯಂತ್ರಿತ ಮಾಧ್ಯಮಗಳ ಮೂಲಕ ಬೀರುವ ಪ್ರಭಾವವು ಎಷ್ಟರ ಮಟ್ಟಿಗಿದೆ ಎಂದರೆ, ಜನ ಸಾಮಾನ್ಯರೂ ಸಹ ನಿಯಂತ್ರಣ ನೀತಿಗಳ ವ್ಯವಸ್ಥೆಗೆ ಮರಳುವುದನ್ನು ಸ್ವಲ್ಪ ಸಂಶಯದಿಂದಲೇ ನೋಡುತ್ತಾರೆ. ಆದಾಗ್ಯೂ, ಈ ಸಂದರ್ಭದಲ್ಲಿ ಮೂರು ಅಂಶಗಳನ್ನು ಗಮನಿಸಬೇಕಾಗುತ್ತದೆ: ಮೊದಲನೆಯದು, ನಿಯಂತ್ರಣ ನೀತಿಗಳ ವ್ಯವಸ್ಥೆಯ ಅವಧಿಯಲ್ಲಿ ಬೆಳವಣಿಗೆಯ ವೇಗವು ಮೂಲಭೂತವಾಗಿ ಕೃಷಿಯ ಬೆಳವಣಿಗೆಯ ದರವನ್ನು ಅವಲಂಬಿಸಿರುತ್ತದೆ ಮತ್ತು ನವ ಉದಾರವಾದಿ ಅವಧಿಯಲ್ಲಿ ಅನುಭವಿಸಿದ ನಷ್ಟದಿಂದಾಗಿ ಉಸಿರುಗಟ್ಟಿದ ಕೃಷಿ ಬೆಳವಣಿಗೆಯು ಪುನಶ್ಚೇತನಗೊಳ್ಳುತ್ತದೆ ಮಾತ್ರವಲ್ಲದೆ, ಸೂಕ್ತ ಕ್ರಮಗಳನ್ನು ಅಳವಡಿಸಿಕೊಂಡರೆ, ಹಿಂದಿನ ನಿಯಂತ್ರಣ ನೀತಿಗಳ ವ್ಯವಸ್ಥೆಯ ಅವಧಿಯಲ್ಲಿ ಮಾಡಿದ್ದ ಸಾಧನೆಯನ್ನೂ ಮೀರುತ್ತದೆ. ಬೇರೆ ರೀತಿಯಲ್ಲಿ ಹೇಳುವುದಾದರೆ, ಈಗ ನಿಯಂತ್ರಣ ನೀತಿಗಳ ವ್ಯವಸ್ಥೆ ಎಂದರೆ ಹಿಂದೆ ಇದ್ದ ಪರಿಸ್ಥಿತಿಗೆ ಮರಳುವುದಷ್ಟೇ ಅಲ್ಲ, ಅದಕ್ಕೂ ಹೆಚ್ಚಿನದನ್ನು ಒದಗಿಸಬಲ್ಲದು.

ಎರಡನೆಯದು, ಮೂಲಭೂತ ಆಹಾರ ಧಾನ್ಯಗಳ ಸೇವನೆಗೆ ಸಂಬಂಧಿಸಿದಂತೆ ಹೇಳುವುದಾದರೆ, ಇಂದಿನ ನವ ಉದಾರವಾದಿ ಆಳ್ವಿಕೆಯಲ್ಲಿ ಕಂಡುಬರುವ ಪರಿಸ್ಥಿತಿಗೆ ಹೋಲಿಸಿದರೆ, ಅದರ ಹಿಂದಿನ ಅವಧಿಯಲ್ಲಿ ಏನಿತ್ತೋ ಅದು ನಿಜಕ್ಕೂ ಉತ್ತಮವಾಗಿತ್ತು. ಬಡತನವನ್ನು ವ್ಯಾಖ್ಯಾನಿಸುವ ಪೌಷ್ಠಿಕಾಂಶದ ಕೊರತೆಯ ಪರಿಭಾಷೆಯಲ್ಲಿ, ನವ ಉದಾರವಾದಿ ಅವಧಿಯಲ್ಲಿ ಕಡು ಬಡತನವು, ಅದರ ಹಿಂದಿನ ಅವಧಿಗೆ ಹೋಲಿಸಿದರೆ, ಏರಿಕೆಯಾಗಿರುವುದು ಕಂಡುಬರುತ್ತದೆ. ಇದು ವಿಶೇಷವಾಗಿ ಗ್ರಾಮೀಣ ಭಾರತದ ವಿಷಯದಲ್ಲಿ ಸತ್ಯ. ದೈನಿಕ ತಲಾ 2200 ಕ್ಯಾಲೊರಿಗಳನ್ನು ಪಡೆಯಲು ಸಾಧ್ಯವಾಗದ ಗ್ರಾಮೀಣ ಭಾರತದ ಒಟ್ಟು ಜನಸಂಖ್ಯೆಯ ಪ್ರಮಾಣವು 2017–18ರಲ್ಲಿ ಶೇ.80ರ ಮಟ್ಟವನ್ನು ತಲುಪಿತ್ತು.

ಮೂರನೆಯದು, ಹಿಂದಿನ ನಿಯಂತ್ರಣ ನೀತಿಗಳ ವ್ಯವಸ್ಥೆಯ ಅವಧಿಯಲ್ಲಿಯೂ ಸಹ ವರಮಾನ ಮತ್ತು ಸಂಪತ್ತಿನ ಅಸಮಾನತೆಗಳಿದ್ದವು. ಆದರೆ, ಅವು ಇಂದಿನ ನವ ಉದಾರವಾದೀ ಅವಧಿಯಲ್ಲಿ ತಲುಪಿರುವ ಪ್ರಮಾಣಕ್ಕೆ ಹೋಲಿಸಿದರೆ, ಅತಿ ಕಡಿಮೆ ಪ್ರಮಾಣದಲ್ಲಿದ್ದವು. 'ವರ್ಲ್ಡ್ ಇನಿಕ್ವಾಲಿಟಿ ಡೇಟಾಬೇಸ್' ಎಂಬ ಸಂಸ್ಥೆಯು ಒದಗಿಸಿರುವ ಅಂಕಿಅಂಶಗಳು ಭಾರತದ ಜನಸಂಖ್ಯೆಯ ತುತ್ತ ತುದಿಯ ಶೇ.1ರಷ್ಟು ಜನರು ದೇಶದ ಒಟ್ಟು ಆದಾಯದಲ್ಲಿ ಸ್ವಾತಂತ್ರ್ಯದ ಸಮಯದಲ್ಲಿ ಹೊಂದಿದ್ದ ಸುಮಾರು ಶೇ.12ರ ಪಾಲನ್ನು 1982ರ ವೇಳೆಗೆ ಸುಮಾರು ಶೇ. 6ಕ್ಕೆ ಇಳಿಸಲಾಗಿತ್ತು ಎಂಬುದನ್ನು ತೋರಿಸುತ್ತವೆ. ಇದು ಈಗ ಶೇ.23ಕ್ಕಿಂತಲೂ ಅಧಿಕವಾಗಿದೆ– ದಿಗ್ಭ್ರಮೆಗೊಳಿಸುವ ಪ್ರಮಾಣದಲ್ಲಿ ಅಸಮಾನತೆಗಳು ಬೆಳೆದಿವೆ ಎಂಬುದನ್ನು ಇದು ಸೂಚಿಸುತ್ತದೆ. ಈ ಪರಿಸ್ಥಿತಿಯಲ್ಲಿ, ದುಡಿಯುವ ಜನರು ತಮ್ಮ ಅದೃಷ್ಟವನ್ನು ತಾವೇ ನಿರ್ವಹಿಸಿಕೊಳ್ಳಲು ಒಂದು ಅಗತ್ಯ ಷರತ್ತೆಂದರೆ, ಅವರು ನವ ಉದಾರವಾದವನ್ನು ಮೀರಿ ಹೋಗಬೇಕು. ಟ್ರಂಪ್‌ರವರ ದಾಳಿ ಅದಕ್ಕೆ ಒಂದು ಅವಕಾಶವನ್ನು ಒದಗಿಸುತ್ತದೆ.

↘ ಶೇ.5ಕ್ಕೆ ಸೀಮಿತಗೊಳಿಸಲು, ಅದರ ಅಣುಸಕ್ತಿ ರಿಯಾಕ್ಟರ್‌ಗಳ ಬಳಕೆ ಮತ್ತು ಸಂಶೋಧನೆಗಾಗಿ ಬೇಕಾದ ಶೇ.20 ಶುದ್ಧೀಕರಣದ ಉದ್ದೇಶ ಬಿಟ್ಟು ಬಿಡುವುದಿಲ್ಲ. ಇದು ಅಣು ಪ್ರಸರಣ ನಿಷೇಧ ಒಪ್ಪಂದದ ಅಡಿಯಲ್ಲಿ ಅವರ ಹಕ್ಕು ಕೂಡಾ. ಇರಾನ್ ತನ್ನ ಮೇಲಿನ ಎಲ್ಲ ಆರ್ಥಿಕ ನಿರ್ಬಂಧಗಳನ್ನು ಹಿಂತೆಗೆದುಕೊಳ್ಳಬೇಕು ಎಂದು ಷರತ್ತು ಹಾಕುವ ಸಾಧ್ಯತೆಯಿದೆ.

ಟ್ರಂಪ್ ತಿರಸ್ಕರಿಸಿದ ಹಿಂದಿನ JCPOA ಗಿಂತ ಹೆಚ್ಚು ಇರಾನ್‌ಗೆ ಅನುಕೂಲಕರವಾದ ಒಪ್ಪಂದಕ್ಕೆ ಬರಬೇಕಾಗಬಹುದು ಅಥವಾ ನೆತನ್ಯಾಹು ಒಪ್ಪಂದಕ್ಕೆ ಮಣಿದು ಮತ್ತೊಂದು ಭೀಕರ ಯುದ್ಧವನ್ನು ಪ್ರಾರಂಭಿಸಬೇಕಾಗಬಹುದು. ಟ್ರಂಪ್‌ಗೆ ಆಯ್ಕೆಯಿರುವುದು ಇವೆರಡೇ. ಯುದ್ಧ ಆಯ್ಕೆ ಮಾಡಿದರೆ ಇಸ್ರೇಲ್‌ಗೆ ಅದು ಲಾಭಕರವಾಗಬಹುದು, ಆದರೆ ಟ್ರಂಪ್‌ಗೆ ಅದು ಭಾರೀ ಹೊರೆ ಆಗಬಹುದು. ಪಶ್ಚಿಮ ಏಶ್ಯಾ ಪ್ರದೇಶಕ್ಕೆ ಮತ್ತು ಇಡಿ ಜಗತ್ತಿಗೆ ಮಾರಕವಾಗಲಿದೆ. ಟ್ರಂಪ್ ಆಡಳಿತ ಇಸ್ರೇಲಿನ ಒತ್ತಡಕ್ಕೆ ಮಣಿಯದೆ ಇರಾನ್ ಅಂಗಿಕಾರಾರ್ಹವಾದ ಒಪ್ಪಂದಕ್ಕೆ ಬರುವ ಪ್ರಬುದ್ಧತೆ ತೋರುತ್ತದೆ ಎಂದು ಆಶಿಸಬೇಕಾಗಿದೆ.

“ಭಾವಾ” ಚಿತ್ರದ ಸುಳ್ಳುಗಳು ಮತ್ತು ನಾಗಪುರದಲ್ಲಿ ಕೋಮು ದಳ್ಳುರಿ.....

ಪುಟ 16 ರಿಂದ

ದೇವಸ್ಥಾನಗಳನ್ನು ಧ್ವಂಸ ಮಾಡಿದ ವಿಷಯ ಇತಿಹಾಸದಲ್ಲಿ ಬರುತ್ತದೆ. ಆದರೆ ಆತ ನೂರಾರು ದೇವಸ್ಥಾನಗಳಿಗೆ ಇನಾಮುಗಳನ್ನೂ ನೀಡಿದ್ದ ಎಂಬುದೂ ಇತಿಹಾಸದ ವಾಸ್ತವ. ಒಂದೇ ಮಾತಿನಲ್ಲಿ ಹೇಳುವುದಾದರೆ, ಆತ ಆ ಕಾಲದ ಅರಸರು ಮಾಡುವ ಎಲ್ಲಾ ತರಹದ ಕೃತ್ಯಗಳನ್ನು ಮಾಡಿದ್ದ. ಆತ ಅಂದು ಇಂತಹ ಹೀನ ಕೃತ್ಯಗಳನ್ನು ಮಾಡಿದ್ದ, ಅದಕ್ಕಾಗಿಯೇ ನಾವು ಇಂದು ಇಂದಿನ ಮುಸ್ಲಿಮರ ಮೇಲೆ ಅಂತಹುದ್ದೇ ಕ್ರೌರ್ಯ ಮೆರೆಯಬೇಕು ಎಂದರೆ ಸಮಂಜಸವೆ ಎಂಬುದು ಇಂದಿನ ನಾಗರಿಕರನ್ನು ಕಾಡಬೇಕಾದ ಪ್ರಶ್ನೆ.

ಔರಂಗಜೇಬ ಅಕ್ಬರ್ ತಂದ ಆಡಳಿತ ಸುಧಾರಣೆಗಳನ್ನು ಮುಂದುವರೆಸಿದ. ಅಕ್ಬರ್‌ನ ಆಡಳಿತದಲ್ಲಿ ಶೇ.21ರಷ್ಟು ಹಿಂದೂಗಳಿದ್ದರೆ ಔರಂಗಜೇಬನ ಆಡಳಿತದಲ್ಲಿ ಶೇ.33ರಷ್ಟು ಹಿಂದೂಗಳಿದ್ದರು.

ಔರಂಗಜೇಬ ಟೋಪಿಗಳನ್ನು ಹೆಣೆಯುತ್ತಿದ್ದ. ಆತ ಹೀಗೆ ಟೋಪಿ ಹೆಣೆದು ಅರ್ಜಿಸಿದ ಹಣ 15 ರೂ.ಗಳಷ್ಟಿತ್ತು. ತನ್ನ ಸಮಾಧಿಯನ್ನು ಈ ಹಣದಿಂದಲೇ ಕಟ್ಟಬೇಕು ಎಂದು ಆತ ಹೇಳಿದ್ದ. ಆದ್ದರಿಂದ ಆತನ ಸಮಾಧಿ ಅತ್ಯಂತ ಸರಳವಾದದ್ದು. ಬ್ರಿಟಿಷರ ಕಾಲದಲ್ಲಿ ಈ ಸಮಾಧಿಯನ್ನು ನೋಡಿದ ಲಾರ್ಡ್ ಕರ್ಜನ್ ಅವನ ಸಮಾಧಿಯನ್ನು ಆಕರ್ಷಕವಾಗಿ ಕಟ್ಟಿಸಿದ. ಇದು ಕೆಲ ವಿಷಯಗಳಲ್ಲಿ ಆತನಿಗೆ ಇದ್ದ ಸರಳತೆಯ ಕತೆ ಹೇಳುತ್ತದೆ.

1857ರ ಸ್ವಾತಂತ್ರ್ಯ ಸಂಗ್ರಾಮದ ನಂತರ ಬ್ರಿಟಿಷರು ಈ ಯುದ್ದದಲ್ಲಿ ಹೋರಾಡಿದ ದೊಡ್ಡ ಸಂಖ್ಯೆಯ ಮುಸ್ಲಿಮರಿಗೆ ಗಂಭೀರ ಶಿಕ್ಷೆ ವಿಧಿಸಿದರು. ಹಿಂದೂ ವ್ಯಾಪಾರಸ್ಥರು ಬ್ರಿಟಿಷರಿಗೆ ಹಣಕಾಸಿನ ಸಹಾಯ ನೀಡಿದ್ದರು. ವಸಾಹತುಶಾಹಿ ಬ್ರಿಟಿಷರು ಕೋಮುವೈಷಮ್ಯದ ಕಿಡಿಯನ್ನು ಆಗಲೇ ಹೊತ್ತಿಸಿದ್ದರು ಎಂಬುದನ್ನು ಇತಿಹಾಸಕಾರರು ಎತ್ತಿ ತೋರಿಸುತ್ತಾರೆ.

ಔರಂಗಜೇಬ ಬಿಜಾಪುರದ ಅದಿಲ್ ಶಾಹಿ ಮತ್ತು ಗೋಲ್ಕೊಂಡದ ಕುತುಬ್ ಶಾಹಿ ರಾಜರುಗಳನ್ನೂ ನಿರ್ನಾಮ ಮಾಡುವ ಕೆಲಸ ಮಾಡಿದ. ಎರಡೂ ಮುಸ್ಲಿಂ ರಾಜರ ಸರ್ಕಾರಗಳಾಗಿದ್ದವು ಎಂಬುದನ್ನೂ ಗಮನಿಸಬೇಕು!

ಇನ್ನೂ ಒಂದು ಮುಖ್ಯ ಗಮನಿಸಬೇಕಾದ ಸಂಗತಿ ಎಂದರೆ, ಸಂಭಾಜಿ ಮಹಾರಾಜನ ಮಗ, ಔರಂಗಜೇಬನ ಸಮಾಧಿಗೆ ಗೌರವ ತೋರಲು ಬರಿಗಾಲಿನಿಂದ ನಡೆದು ಹೋಗಿ ಚಾದರ್ ಹೊದೆಸಿ ಬಂದನೆಂಬುದು!!

ಇತಿಹಾಸಕಾರರಿಂದ ಹೀಗೊಂದು ಸೂಕ್ಷ್ಮ ಪ್ರಶ್ನೆಯೂ ಬಂದಿದೆ. ಅದೇನೆಂದರೆ, ಇಂದಿನ ಮುಖ್ಯಮಂತ್ರಿಯ ಪೂರ್ವಜರು ಔರಂಗಜೇಬನನ್ನು ಕಂಡು ಕ್ರೌರ್ಯವನ್ನು ಮಾಡಬಾರದೆಂದು ಮಾತುಕತೆ ಆಡಿದ್ದರೆ? ಇಂತಹ ಪ್ರಶ್ನೆಗಳಿಗೆ ಸಮಂಜಸ ಉತ್ತರ ಬರುವುದಿಲ್ಲ. ಆದರೆ ಸ್ವ ವಿಮರ್ಶೆಯ ಅವಶ್ಯಕತೆ ಇವರಿಗೆ ಇದೆಯಲ್ಲವೇ?

ಇಂದು ಮುಸ್ಲಿಮರನ್ನು ದೈತ್ಯೀಕರಿಸಿ ಅವರ ವಿರುದ್ಧ ಹಿಂದೂಗಳನ್ನು ಎತ್ತಿ ಕಟ್ಟುವ ಕೆಲಸ ನಡೆಯುತ್ತಿದೆ. ಈ ದಿಸೆಯಲ್ಲಿ ಹಲವು ಚಿತ್ರಗಳು ನಿರ್ಮಾಣಗೊಂಡು ತೆರೆಗೆ ಬರುತ್ತಿವೆ. ದೊಡ್ಡ ಪ್ರಮಾಣದಲ್ಲಿ ಹಣಗಳಿಸುವ ಜೊತೆಗೆ, ಕೋಮು ವಿಷವನ್ನು ಅವು ದೇಶದಾದ್ಯಂತ ಹರಡುತ್ತಿವೆ. ಸಾಮಾಜಿಕ ಸ್ವಾಸ್ಥ್ಯ ಹಾಳುಗೆಡವುವ ಇಂಥ ಚಿತ್ರಗಳ ವಿರುದ್ಧ ಧ್ವನಿ ಎತ್ತುವ ಮತ್ತು ತಿಳುವಳಿಕೆ ಮೂಡಿಸುವ ಜವಾಬ್ದಾರಿ ನಾಗರಿಕ ಸಮಾಜಕ್ಕೆ ಇದೆ.

NEW No. MAG(3)/NPP/205/2021-2022
JANASHAKTHI KANNADA VARA PATRIKE April 28-May 4, 2025 Price: Rs. 10/- Date of Publication: 25 April 2025 RNI No. KARKAN/2006/17926 Posted on 28-04-2025
Posted at BG PSO, BG - 560026 **Posted at Periodical Rate -** Rs. 2

“ಛಾವಾ” ಚಿತ್ರದ ಸುಳ್ಳುಗಳು ಮತ್ತು ನಾಗಪುರದಲ್ಲಿ ಕೋಮು ದಳ್ಳುರಿ

ಛಾವಾ ಎಂಬ ಚಿತ್ರ ಮಹಾರಾಷ್ಟ್ರದಲ್ಲಿ ತೆರೆಗೆ ಬಂದು ನಾಗಪುರದಲ್ಲಿ ಕೋಮು ದಳ್ಳುರಿಯ ಧೂಳೆಬ್ಬಿಸಿದೆ. ಮುಖ್ಯಮಂತ್ರಿ ಫಡ್ನವಿಸ್ ಅವರು ಈ ಛಾವಾ ಎಂಬ ಚಿತ್ರದ ಕಾರಣದಿಂದಲೇ ಕೋಮು ಗಲಭೆ ಆಗಿದೆ ಎಂಬುದನ್ನು ಒಪ್ಪಿದ್ದಾರೆ. ಹೀಗಿರುವಾಗಲೂ ಚಿತ್ರವನ್ನು ಪ್ರದರ್ಶನದಿಂದ ದೂರ ಇಡುವ ಅಥವಾ ಚಿತ್ರದಲ್ಲಿ ಬದಲಾವಣೆ ಮಾಡುವ ಮಾತು ಅವರಿಂದ ಬಂದಿಲ್ಲ. ಚಿತ್ರದ ತುಂಬಾ ಕೋಮು ದಳ್ಳುರಿ ಹರಡುವ ಸುಳ್ಳುಗಳು ಆಕರ್ಷಕ ಮುಖವಾಡಗಳ ಜೊತೆ ಬಂದಿವೆ ಎಂಬುದು ಈ ಚಿತ್ರದ ಮಹತ್ವ.

ಜಿ.ಎಸ್.ಮಣಿ

ಕೇಂದ್ರ ಹಾಗೂ ಹಲವು ರಾಜ್ಯಗಳಲ್ಲಿ ಅಧಿಕಾರ ಹಿಡಿದು ಗಟ್ಟಿಯಾಗಿರುವ ಬಿಜೆಪಿ ಮತ್ತು ಅದರ ಹಿಂದಿರುವ ಸಂಘ ಪರಿವಾರ ಸಾಮಾಜಿಕ ಹಿತದ ಕ್ರಮಗಳನ್ನು ಕೈಗೊಂಡು ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿ ಸಾಧಿಸುವ ಬದಲು, ಹಿಂದುತ್ವದ ಹುಳುಗಳನ್ನು ಅಮಾಯಕ ಜನರ ತಲೆಯೊಳಗೆ ಬಿಡುತ್ತಿರುವುದು ಸ್ಪಷ್ಟ. ಕಲೆಯನ್ನೂ ಅವರು ಇಂತಹ ಸಮಾಜ ವಿಭಜಕ ಕಾರ್ಯಗಳಿಗೆ ವೇದಿಕೆಯಾಗಿ/ಸಾಧನವಾಗಿ ಬಳಸಿಕೊಳ್ಳುತ್ತಿರುವುದು ದುರದೃಷ್ಟ ಎಂಬುದು ಒಂದು ಕಡೆಗಾದರೆ, ಇಂತಹ ಅವರ ಕಾರ್ಯಗಳಿಗೆ ಪ್ರತಿರೋಧದ ಅವಶ್ಯಕತೆ ಇದೆ ಎಂಬುದು ಶಾಂತಿಬಯಸುವ ಎಲ್ಲರ ಆಶಯವಾಗಿದೆ. ಇಂಥ ಜನ ಒಗ್ಗಟ್ಟಾಗಿ ಧ್ವನಿ ಎತ್ತುವ ಮತ್ತು ಕ್ರಿಯಾಶೀಲರಾಗುವ ಅನಿವಾರ್ಯತೆಯೂ ಇದೆ.

ಛಾವಾ ಎಂಬ ಚಿತ್ರ ಶಿವಾಜಿ ಸಾವಂತ್ ಅವರು ಬರೆದ ಕಾದಂಬರಿಯನ್ನು ಕತೆಯಾಗಿ ಹೊಂದಿದೆ. ಛತ್ರಪತಿ ಶಿವಾಜಿಯ ನಂತರ, ಆತನ ಮಗ ಸಂಭಾಜಿ ಮಹಾರಾಜ್ ಮೋಘಲರ ವಿರುದ್ಧ ಮರಾಠರ ಹೋರಾಟವನ್ನು ವೈಭವಿಕರಿಸಿ ತೋರಿಸುವ ಪ್ರಯತ್ನ ಇದರಲ್ಲಿದೆ. ವಿಕ್ಕಿ ಕೌಶಲ್, ಅಕ್ಷಯ್ ಖನ್ನಾ ಮತ್ತು ರಶ್ಮಿಕ ಮಂದಣ್ಣ ಅವರುಗಳನ್ನು ಮುಖ್ಯ ಪಾತ್ರಧಾರಿಗಳಾಗಿ ಹೊಂದಿರುವ ಚಿತ್ರ ಇದು. ಬಹು ಮುಖ್ಯವಾಗಿ ಮರಾಠರ ಶೌರ್ಯ ಮೋಘಲರ ಕ್ರೌರ್ಯಗಳನ್ನು ಎದುರು ಬದುರಾಗಿ ತೋರಿಸಿ ಹಿಂದುತ್ವವನ್ನು ವೈಭವೀಕರಿಸುವ ಉದ್ದೇಶ ಚಿತ್ರದಲ್ಲಿ ಮೂಡಿಸಲಾಗಿದೆ.

ಅದಕ್ಕೆ ತಕ್ಕಂತೆ ತೆರೆಯ ಎಲ್ಲ ಆಯಾಮಗಳನ್ನು ಬಳಸಿಕೊಂಡು ಜನರಲ್ಲಿ ಹಿಂದುತ್ವದ ಭಾವನಾತ್ಮಕ ಅಲೆ ಎಬ್ಬಿಸಿ ರಾಜಕೀಯ ಲಾಭ ಪಡೆದುಕೊಳ್ಳುವ ಹುನ್ನಾರ ಕಲೆಯ ರೂಪದಲ್ಲೂ ಎದ್ದುಬಂದಿರುವುದು ಕಾಣುತ್ತದೆ. ನಾಗಪುರದಲ್ಲಿ ಕೋಮುದಳ್ಳುರಿ ಹೊತ್ತಿ ಉರಿದು ಜನ ಜೀವನವನ್ನು ಅಲ್ಲೋಲ ಕಲ್ಲೋಲಗೊಳಿಸಿದ್ದು ಮತ್ತು ಅಂತಹ ಕಾರ್ಯಕ್ಕೆ ಗುಪ್ತ ಬೆಂಬಲ ನೀಡಿ ಪೋಷಿಸಿದ ಸರ್ಕಾರಿ ಯಂತ್ರದ ಸ್ಪಷ್ಟ ಒಲವು ಇಲ್ಲಿ ಕಾಣುತ್ತದೆ. ಈ ಚಿತ್ರದ ಸುಳ್ಳುಗಳನ್ನು ಇತಿಹಾಸಕಾರರು ಸ್ಪಷ್ಟವಾಗಿ ಗುರುತಿಸುತ್ತಾರೆ. ದುರಂತವೆಂದರೆ, ಹಿಂದುತ್ವದ ಅಜೇಂಡಾವನ್ನೇ ಇತಿಹಾಸದ ನಿಜ ರೂಪವೆಂದು



ಬಿಂಬಿಸುವ ಇತಿಹಾಸಕಾರರೂ ಈಗ ತಯಾರಾಗಿ ಮುಂಚೂಣಿಯಲ್ಲಿ ಕಾಣಸಿಗುತ್ತಿರುವುದು.

ಇಂತಹ ಸುಳ್ಳುಗಳ ಕೆಲವು ಮಜಲುಗಳನ್ನು ನಾವು ಕೆಳಗಿನಂತೆ ಕಾಣಬಹುದು

ಔರಂಗಜೇಬ್ ಹದಿನಾರು ಮತ್ತು ಹದಿನೇಳನೇ ಶತಮಾನಗಳಲ್ಲಿ ಆಗಿಹೋದ ಮೊಘಲ್ ದೊರೆ. ಈತ ಕ್ರೌರ್ಯ ಮೆರೆದಿರಬಹುದು. ಅಂದಿನ ದಿನಗಳಲ್ಲಿ ರಾಜರು ತಮ್ಮ ವೈರಿಗಳನ್ನು ಕ್ರೌರ್ಯದಿಂದಲೇ ಮುಗಿಸುವ ಕೆಲಸ ಮಾಡುತ್ತಿದ್ದರು ಎಂಬ ಐತಿಹಾಸಿಕ ಸತ್ಯವನ್ನು ನಾವು ಒಪ್ಪಿಕೊಂಡರೆ, ಈ ವಿಷಯವನ್ನು ಇಂದಿನ ಸಮಾಜದಲ್ಲಿ ಕೋಮು ಅಶಾಂತಿಯನ್ನು ಹುಟ್ಟುಹಾಕುವ ಕೆಲಸ ಮಾಡುವವರ ರಾಜಕೀಯ ಸ್ವಾರ್ಥ ಸ್ಪಷ್ಟವಾಗಿ ನಮಗೆ ಕಾಣಿಸುತ್ತದೆ. ಇಂಥ ಕೆಲಸದ ಪರಿಣಾಮವೂ ನಾಗಪುರದಲ್ಲಿ ಕಂಡುಬಂದಿದೆ. ಔರಂಗಾಬಾದಿನಲ್ಲಿರುವ ಔರಂಗಜೇಬನ ಸಮಾಧಿಯನ್ನು ಒಡೆದು ಹಾಕಲು ತಯಾರಾಗಿ ನಿಂತ ಹಿಂದುತ್ವ ಪಡೆ ಇದರ ಮುಂದುವರಿದ ಪರಿಣಾಮ. ಅಷ್ಟೇ ಅಲ್ಲ, ಔರಂಗಜೇಬನ ಒಳ್ಳೆಯ ಗುಣಗಳ ಬಗ್ಗೆ ಮಾತನಾಡಿದ ಸಮಾಜವಾದಿ ಪಕ್ಷದ ಶಾಸಕ ಅಸಿಮ್ ಆಜ್ಮಿ ಅವರನ್ನು ಸದನದಿಂದ ಹೊರಹಾಕಲಾಗಿದೆ. ಕೋಮು ದಂಗೆಕೋರರ ಬಂಧನವಾಗಿಲ್ಲ, ಪೊಲೀಸರು ಕೋಮುಘಟನೆಗಳ ನೋಡುಗರಾಗಿದ್ದರು, ಒಂದು ಕೊಮೀನ ವಿರುದ್ಧ ಆರ್ಥಿಕ ಬಹಿಷ್ಕಾರದ ಘೋಷಣೆ ಮಾಡಲಾಯಿತು ಇತ್ಯಾದಿಗಳೆಲ್ಲ ತೀವ್ರ ಆತಂಕದ ವಿಷಯಗಳು.

ಸರ್ಕಾರ ಪ್ರಣೀತ ಕೋಮುದಳ್ಳುರಿ ಇದು ಎಂಬುದರಲ್ಲಿ ಸಂಶಯವೇ ಇಲ್ಲ. ಮುಂಬೈಯಿಯ ದೊಂಬಿವಿಲಿಯಲ್ಲಿ ವ್ಯಾಪಾರ ಬಹಿಷ್ಕಾರವನ್ನು ಮುಸ್ಲಿಮರ ಮೇಲೆ ಹೇರಲಾಗಿದೆ. ಸ್ವಸ್ಥ ಮನಸ್ಸಿನ ಸರ್ಕಾರವೊಂದು ಆಡಳಿತದಲ್ಲಿ ಇರುವಲ್ಲಿ ಇಂಥ ಬಹಿಷ್ಕಾರ ಸಾಧ್ಯವಿಲ್ಲ. ಇದು ಕಾನೂನು ಬಾಹಿರವೂ ಹೌದು. ಪ್ರಜಾಸತ್ತೆ ಎನ್ನುವುದು ಎಲ್ಲಿ ಹೋಯಿತು ಎಂಬುದೇ ಪ್ರಶ್ನೆ. ಆರ್‌ಎಸ್‌ಎಸ್ ಮತ್ತು ಬಿಜೆಪಿ ಉತ್ತರ ನೀಡಬೇಕು.

40 ನಿಮಿಷಗಳ ಕಾಲ ಹಿಂಸೆಯ ದೃಶ್ಯ

ಶಿವಾಜಿ ಮಹಾರಾಜನ ಮಗನಾದ ಸಂಭಾಜಿ ಮಹಾರಾಜನನ್ನು ಔರಂಗಜೇಬ ಯುದ್ಧದಲ್ಲಿ ಸೆರೆಹಿಡಿದು, ಕ್ರೂರ ಹಿಂಸೆ ನೀಡಿ ಕೊಂದ ರೀತಿಯನ್ನು ಚಿತ್ರದ ಕೊನೆಯಲ್ಲಿ ಬಹು ದೊಡ್ಡದಾಗಿ ಬಿಂಬಿಸಿ (40 ನಿಮಿಷಗಳ ಕಾಲ ಈ ಹಿಂಸೆಯನ್ನು ತೋರಿಸಲಾಗಿದೆ!!) ಕೋಮು ಭಾವನೆಗಳ ಬೆಂಕಿ ಹಚ್ಚಿ ಅದಕ್ಕೆ ತುಪ್ಪ ಎರೆಯುವ ಕೆಲಸ ಮಾಡಲಾಗಿದೆ. ಚಿತ್ರ ನೋಡಿದವರು ಮುಸ್ಲಿಂ ದ್ವೇಷಿಗಳಾಗಿ ರೂಪುಗೊಳ್ಳಲು ಬೇಕಾದ ಪೂರ್ತಿ ಭಾವನಾತ್ಮಕ ಕುಂಡವನ್ನು ಸೃಜಿಸಲಾಗಿದೆ. ಇಂತಹ ಹಿಂಸೆಯನ್ನು ಔರಂಗಜೇಬನ ಬ್ರಾಹ್ಮಣ ಸಲಹಾಕಾರರು ಮನುಸ್ಮೃತಿ ಆಧಾರದಲ್ಲಿ ಶಿಫಾರಸ್ಸು ಮಾಡಿದ್ದು ಎನ್ನಲಾಗುತ್ತಿದೆ. ಬ್ರಾಹ್ಮಣರು ತಮ್ಮ ತಪ್ಪಿತಸ್ಥ ಭಾವನೆಗಳನ್ನು ಮುಚ್ಚಿಹಾಕಲು ಇಂದು ಹಿಂದೂ–ಮುಸ್ಲಿಂ ದ್ವೇಷದ ಹಂದರ ರಚಿಸಿ ಪಾರಾಗಲು ನಡೆಸಿರುವ ಹುನ್ನಾರ ಇದು ಎನ್ನಲಾಗಿದೆ.

ಚಿತ್ರದಲ್ಲಿ ಮರಾಠರಿಗೆ ಕೇಸರಿ ಉಡುಗೆ ಮತ್ತು ಮೊಘಲ್ ಸೈನಿಕರಿಗೆ ಹಸಿರು ಉಡುಗೆ ತೊಡಿಸಿ, ಅಂದು ಇಲ್ಲದ ಇಂದಿನ ವಿನ್ಯಾಸಗಳನ್ನು ದುರುದ್ದೇಶಪೂರ್ವಕವಾಗಿ ಹೇರಲಾಗಿದೆ. ಅಷ್ಟೇ ಅಲ್ಲ, ಚಿತ್ರದಲ್ಲಿ ಒಬ್ಬ ದಳಪತಿ ತಾನು ಹಿಂದೂ ಎಂದು ಹೇಳಿಕೊಳ್ಳುತ್ತಾನೆ. ಆದರೆ ಅಂದಿನ ಸಂದರ್ಭದಲ್ಲಿ “ಹಿಂದೂ” ಎಂಬ ಭಾವನೆ ಮತ್ತು ಬಳಕೆ ಎರಡೂ ಇರಲಿಲ್ಲ ಎಂಬುದನ್ನು ಇತಿಹಾಸಕಾರರು ಎತ್ತಿ ತೋರಿಸಿದ್ದಾರೆ.

ಎಲ್ಲೂ ಆಳವಾದ ವಿಶ್ಲೇಷಣೆ ಮತ್ತು ಸ್ಪಷ್ಟ ವಿವರಣೆ ಮುಂದಕ್ಕೆ ಬಾರದಂತೆ ತಡೆಯಲು ಇದು ಮುಖ್ಯ ಕಾರಣ ಎನ್ನಲಾಗುತ್ತಿದೆ. ಆಳ್ವಿಕೆಯಲ್ಲಿ ಇರುವ ಸರ್ಕಾರ ಇಂತಹ ವರ್ತನೆ ತೋರುವುದಕ್ಕೆ ಬೇರೆ ಕಾರಣಗಳು ಕಾಣುವುದಿಲ್ಲ. ಇದು ಯಾವ ರೀತಿಯ ಸ್ವಸ್ಥ ಸಮಾಜ ಕಟ್ಟಲು ಅವಶ್ಯ? ಔರಂಗಜೇಬ ಭಾರತೀಯನಾಗಿದ್ದ ಮತ್ತು ಈ ದೇಶದಲ್ಲೇ ಹುಟ್ಟಿ, ಈ ದೇಶದಲ್ಲೇ ಮಡಿದ ಎಂಬುದು ವಾಸ್ತವ. ಆ ದಿನಗಳಲ್ಲಿ ಜಗತ್ತಿನ ಒಟ್ಟು ಉತ್ಪಾದನೆಯ ಶೇ. 24ರಷ್ಟನ್ನು ಭಾರತ ಒಂದೇ ಕೊಡುತ್ತಿತ್ತು!



ಇತರೆಲ್ಲಾ ರಾಜರುಗಳಂತೆ ಆತನೂ ಮಾಡಿದ

ಅರಸರುಗಳ ಕೆಲ ನೀತಿಗಳು ಒಳ್ಳೆಯದಿರುತ್ತಿದ್ದವು. ಕೆಲ ನೀತಿಗಳು ಕೆಟ್ಟದಿರುತ್ತಿದ್ದವು. ಇವುಗಳ ವ್ಯತ್ಯಾಸಗಳನ್ನು ಇಂದಿನ ನಾವು ಅರಿತಿರಬೇಡವೆ? ಔರಂಗಜೇಬ ಸುಮಾರು 50 ವರ್ಷಗಳ ಕಾಲ ಆಡಳಿತ ನಡೆಸಿದ. ಕಾಲದಿಂದ ಕಾಲಕ್ಕೆ ನೀತಿಗಳು ಸ್ಥಿತಿಗಳಿಗೆ ತಕ್ಕಂತೆ ಬದಲಾದವು. ಎಲ್ಲ ಅಧಿಕಾರಸ್ಥರ ರೀತಿ ಅದಾಗಿತ್ತು. ಆತ ಮುಸ್ಲಿಮರನ್ನೂ ಶಿಕ್ಷೆಗೆ ಒಳಪಡಿಸಿದ. ಎಲ್ಲಾ ರಾಜರುಗಳು ಅಂದಿನ ದಿನಗಳಲ್ಲಿ ಅಧಿಕಾರದಲ್ಲಿ ಉಳಿಯಲು ವಿರೋಧಿಗಳನ್ನು ನಿರ್ನಾಮಮಾಡುವ ರೀತಿಯಲ್ಲೇ ಆತನೂ ಮಾಡಿದ. ಆತ ಒಂದು ಕೈ ಹೆಚ್ಚೇ ವೈರಿ ಹಂತಕನಾಗಿದ್ದ/ ಕ್ರೂರಿಯಾಗಿದ್ದ ಎಂದುಕೊಳ್ಳೋಣ. ಆದರೆ, ಇಂತಹ ಕೃತ್ಯಗಳನ್ನು ಇಂದಿನ ಸಂದರ್ಭಗಳ ಚೌಕಟ್ಟಿನಲ್ಲಿ ತಂದು ಅವನ್ನು ಇನ್ನೂ ಬರ್ಬರಗೊಳಿಸಿ, ಜನರ ಭಾವನೆಗಳನ್ನು ಕೆರಳಿಸಿ, ಅಂದು ಇಲ್ಲದೆ ಇದ್ದ ಹಿಂದೂ–ಮುಸ್ಲಿಂ ವೈಷಮ್ಯವನ್ನು ತೀವ್ರಗೊಳಿಸುವ ಕೆಲಸ ಹೇಯವಾದುದಲ್ಲವೇ? ಇಂದಿನ ಮೌಲ್ಯಗಳ ಕಣ್ಣಿನಿಂದ ಅಂದಿನ ಕ್ರಿಯೆಗಳನ್ನು ಅಳೆಯುವುದು ಸಮಂಜಸ ರೀತಿಯಲ್ಲ.

ಅಧಿಕಾರದ ಮಥದಲ್ಲಿ ಇರುವ ಸಂಘ ಪರಿವಾರಕ್ಕೆ ಉತ್ತರದಾಯಿತ್ವವೇ ಇಲ್ಲ. ಬೆಲೆ ಏರಿಕೆ, ನಿರುದ್ಯೋಗ, ಬಡತನ, ಇತ್ಯಾದಿ ನೂರಾರು ಸಾಮಾಜಿಕ ಆರ್ಥಿಕ ಸಮಸ್ಯೆಗಳು ಸಾಮಾನ್ಯ ಜನರನ್ನು ಕಿತ್ತು ತಿನ್ನುತ್ತಿವೆ. ಬೇಜವಾಬ್ದಾರಿ ಸಂಸ್ಥೆಗಳು ಮತ್ತು ಸರ್ಕಾರ ಇಂಥ ಜನರನ್ನು ವಿಭಜಿಸಿ ತಮ್ಮ ಬೇಳೆ ಬೇಯಿಸಿಕೊಳ್ಳುವ ಬರ್ಬರ ಕಾಯಕ ನಡೆಸುತ್ತಿವೆ. ಔರಂಗಜೇಬನ ಆಸ್ಥಾನಿಕ ಬ್ರಾಹ್ಮಣರು ಜನರ ಹೋರಾಟಗಳನ್ನು ಮುಚ್ಚಿಟ್ಟು ತಮಗೆ ಬೇಕಾದ ಕತನಗಳನ್ನು ಮುನ್ನೆಲೆಗೆ ತಂದರು.

ಬಂಗಾಳದಲ್ಲಿ ಮರಾಠಾ ಸೈನ್ಯ ಅತ್ಯಂತ ಕ್ರೂರ ಹಿಂಸೆ ನೀಡಿದ ಉದಾಹರಣೆಗಳಿವೆ. ಆದರೆ ಇದು ರಾಜಕೀಯವಾಗಿತ್ತು. ಕೋಮುವಾದವಾಗಿರಲಿಲ್ಲ. ಇಂದು ಇದನ್ನು ಕೋಮು ದ್ವೇಷವನ್ನಾಗಿಸಿ ಲಾಭ ಪಡೆದುಕೊಳ್ಳುವ ಸಾಹಸ ನಡೆಯುತ್ತಿದೆ. ಇದರೊಳಗೆ ಇನ್ನೊಂದು ಅಡಗಿರುವ ಆಯಾಮವನ್ನು ಗುರುತಿಸಬೇಕಾಗುತ್ತದೆ. ಅದೆಂದರೆ ಎಲ್ಲಿ ಹಿಂದೂ–ಮುಸ್ಲಿಂ ಎಂಬ ದ್ವೇಷದ್ವಯ ಸೃಷ್ಟಿಯಾದರೂ ಅದು ಸರ್ಕಾರ–ಮುಸ್ಲಿಂ ದ್ವೇಷವಾಗಿರುತ್ತದೆ ಎಂಬುದು!! ರಕ್ಷಣೆ ನೀಡಬೇಕಾದ ಸರ್ಕಾರವೇ ದ್ವೇಷ ಸಾಧಿಸಹೊರಟರೆ ಅದರ ಪರಿಣಾಮ ಏನು? ಸಂವಿಧಾನದ ರಕ್ಷಣೆಯ ಜವಾಬ್ದಾರಿ ಎಲ್ಲಿಗೆ ಬಂದು ನಿಲ್ಲುತ್ತದೆ?

ದೇವಸ್ಥಾನಗಳಿಗೆ ಇನಾಮುಗಳನ್ನೂ ನೀಡಿದ್ದ

ಔರಂಗಜೇಬ ಹಿಂದೂಗಳ ದೇವಸ್ಥಾನಗಳನ್ನು ಒಡೆದು ಹಾಕಿದ ಎಂಬುದು ಇನ್ನೊಂದು ದೊಡ್ಡ ಆರೋಪ. ಇದು ಸ್ವಲ್ಪ ಮಟ್ಟಿಗೆ ನಿಜ. ಯಾಕೆಂದರೆ ಆತ ಪುಟ 15 ಕ್ಕೆ

JANASHAKTHI KANNADA VARA PATRIKE: Printed, Published by **G.N.NAGARAJ**, No. 12, 18th Cross, Sampangirama Nagar, Bangalore 560027, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Editor : **S.Y.GURUSHANTH**